ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 1 ಬುಧವಾರ 2025

₹4

ಸಂಪುಟ: 46 | ಸಂಚಿಕೆ: 165 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಯೋಗಪಟುಗಳಿಂದ ದುರ್ಗಾ ನಮಸ್ಕಾರ, ಚಾರಣ



ಚಾಮುಂಡಿಬೆಟ್ಟ ಆವರಣದಲ್ಲಿ ನೂರಾರು ಯೋಗಪಟುಗಳಿಂದ ದುರ್ಗಾ ನಮಸ್ಕಾರ ಹಾಗೂ ಯೋಗ ಚಾರಣ ಕಾರ್ಯಕ್ರಮ ನಡೆಯಿತು. ಶಾಸಕ ಜಿ.ಟಿ.ದೇವೇಗೌಡರು ದುರ್ಗಾ ನಮಸ್ಕಾರ ಕಾರ್ಯಕ್ರಮ ಉದ್ಘಾಟಿಸಿದರು. ಯೋಗ ದಸರಾ ಉಪಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್, ಉಪವಿಶೇಷಾಧಿಕಾರಿ ಕೆ.ರಮ್ಯ ಮತ್ತಿತರರಿದ್ದರು.

ಮೈಸೂರು,ಸೆ.30(ಎಂಕೆ)–ನಾಡ ಅಧಿದೇವತೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ದುರ್ಗಾ ನಮಸ್ಕಾರ ಸಲ್ಲಿಸಿದ ನೂರಾರು ಯೋಗಪಟುಗಳು ಚಾಮುಂಡಿಬೆಟ್ಟದ ಚಾರಣ ನಡೆಸಿದರು. ದಸರಾ ಅಂಗವಾಗಿ ದಸರಾ ಯೋಗ ಉಪಸಮಿತಿ ವತಿಯಿಂದ ಮೈಸೂರಿನ ವಿವಿಧ ಯೋಗ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಚಾಮುಂಡಿಬೆಟ್ಟ ಆವರಣದಲ್ಲಿ ಆಯೋಜಿಸಿದ್ದ ದುರ್ಗಾ ನಮಸ್ಕಾರ ಹಾಗೂ ಯೋಗ ಚಾರಣ ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಯೋಗ ಪಟುಗಳು ನಾಡದೇವಿಗೆ ವಂದಿಸಿದರು.

ಬೆಳಗ್ಗೆ 6 ಗಂಟೆಗೆ ಚಾಮುಂಡಿಬೆಟ್ಟದ ಪಾದದ ಬಳಿ ಜಮಾವಣೆಗೊಂಡ ಯೋಗಪಟುಗಳು ಸರತಿ ಸಾಲಿನಲ್ಲಿ ನಾ ಮುಂದು, ತಾ ಮುಂದು ಎಂಬಂತೆ ಮೆಟ್ಟಿಲುಗಳ ಮೂಲಕ ಚಾಮುಂಡಿಬೆಟ್ಟ ಹತ್ತಿ ಚಾರಣ ನಡೆಸಿದರು.

ಬಳಿಕ ಬೆಟ್ಟದ ಆವರಣದಲ್ಲಿ ವಜ್ರಾಸನ, ವೀರಾಸನ, ವೀರಭದ್ರಾಸನ ಹಾಗೂ ಸಿಂಹ ಘರ್ಜನೆ ಸೇರಿದಂತೆ ವಿವಿಧ ಯೋಗಾಸನಗಳನ್ನು ಮಾಡುವುದರ ಜೊತೆಗೆ 5 ಸುತ್ತು ದುರ್ಗಾ ನಮಸ್ಕಾರ ಮಾಡಿದರು. ಇದಕ್ಕೂ ಮುನ್ನ ದುರ್ಗಾ ನಮಸ್ಕಾರ ಕಾರ್ಯಕ್ರಮ ಉದ್ಘಾಟಿಸಿದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಪ್ರತಿನಿತ್ಯ ಯೋಗಾಭ್ಯಾಸ ಮಾಡುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದರು.

ಭಾರತದಲ್ಲಿ ಹುಟ್ಟಿರುವ ಯೋಗವು ಪ್ರಧಾನಿ ಮೋದಿಯವರು ನೀಡಿದ ಆದ್ಯತೆಯಿಂದಾಗಿ ಇಂದು ವಿಶ್ವ ಮನ್ನಣೆ ಪಡೆದುಕೊಂಡಿದೆ. ಯೋಗ ಮಾಡುವುದರಿಂದ ರಕ್ತ ಪರಿಚಲನೆ ಸಮರ್ಪಕವಾಗಿ, ಮನಸ್ಸು ಮತ್ತು ದೇಹ ಆರೋಗ್ಯದಿಂದಿರಲು ಸಹಕಾರಿಯಾಗುತ್ತದೆ ಎಂದರು.

ಯೋಗದ ಮೂಲಕ ಧ್ಯಾನ ಮತ್ತು ಉಪಾಸನೆ ಮಾಡುವುದರಿಂದ ಮಾನವೀಯ ಮೌಲ್ಯಗಳು, ಧಾರ್ಮಿಕ ಆಚರಣೆ, ಶಿಸ್ತು, ಶಾಂತಿ ಹಾಗೂ ನೆಮ್ಮದಿಯನ್ನು ಕಂಡುಕೊಳ್ಳಬಹುದು. ಹಾಗಾಗಿ ಪ್ರತಿಯೊಬ್ಬರು ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡರೆ ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಟಿ.ಎನ್.ಜವರಾಯಿಗೌಡ, ಯೋಗ ದಸರಾ ಉಪಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್, ಉಪ ವಿಶೇಷಾಧಿಕಾರಿ ಕೆ.ರಮ್ಯ, ಕಾರ್ಯಾಧ್ಯಕ್ಷ ನಿರೂಪ್ ವೆಸ್ಲಿ, ಸಹ ಕಾರ್ಯಾಧ್ಯಕ್ಷರಾದ ಕೆ.ಶಿಲ್ಪ, ಕಾರ್ಯದರ್ಶಿ ಡಾ.ಸಿ.ರೇಣುಕಾದೇವಿ, ಉಪಸಮಿತಿ ಪದಾಧಿಕಾರಿಗಳು ಇದ್ದರು.

ಜಿಎಸ್‌ಟಿ ಇಳಿಕೆ, ಆಯುಧ ಪೂಜೆ ಆಫರ್ ಹಿನ್ನೆಲೆ

ಕಾರು, ಬೈಕ್, ಸ್ಕೂಟರ್‌ಗಳ ಭರ್ಜರಿ ಮಾರಾಟ

ಮೈಸೂರು, ಸೆ.30(ಬಿಎಲ್‌ಯು)– ಆಯುಧ ಪೂಜೆ ಹಿನ್ನೆಲೆ ಹಾಗೂ ಜಿಎಸ್‌ಟಿ ಕಡಿತ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಕಾರು, ಬೈಕ್ ಹಾಗೂ ಸ್ಕೂಟರ್‌ಗಳು ಹಾಟ್‌ಕೇಕ್‌ನಂತೆ ಸೇಲ್ ಆಗಿವೆ. ಈ ವರ್ಷದ ಆಯುಧ ಪೂಜೆಯಲ್ಲಿ ದಾಖಲೆ ಪ್ರಮಾಣದಲ್ಲಿ ಕಾರು, ಬೈಕ್, ಸ್ಕೂಟರ್ ಮಾರಾಟವಾಗುತ್ತಿದೆ.



ಮಧ್ಯಮ ವರ್ಗದವರು ಸಣ್ಣ ಕಾರುಗಳನ್ನು ಖರೀದಿ ಮಾಡುವ ಆಸೆ ಹೊಂದಿದ್ದರು. ಆದರೆ ದುಬಾರಿ ಬೆಲೆಯ ಕಾರಣ ಕಾರು ಖರೀದಿ ತಮಗೆ ಸಾಧ್ಯವಿಲ್ಲ ಎಂದು ಕೈ ಚೆಲ್ಲಿದ್ದರು.

ಆದರೆ ಈಗ ಕೇಂದ್ರ ಸರ್ಕಾರ ಕಾರುಗಳ ಬೆಲೆಯಲ್ಲಿ ಜಿಎಸ್‌ಟಿ ಪ್ರಮಾಣವನ್ನು ಕಡಿಮೆ ಮಾಡಿದೆ. ಕಾರುಗಳ ಮೇಲೆ ವಿಧಿಸಿದ್ದ ಶೇ.28ರಷ್ಟು ಜಿಎಸ್‌ಟಿಯನ್ನು ಈಗ ಶೇ.18ಕ್ಕೆ ಇಳಿಸಲಾಗಿದೆ. ಆದರೆ ಸಣ್ಣ ಪ್ರಮಾಣದ ಕಾರುಗಳಿಗೆ ಮಾತ್ರ ಜಿಎಸ್‌ಟಿ ಇಳಿಕೆ ಅನ್ವಯಿಸುತ್ತದೆ. ಮಾರುತಿ, ಸುಜುಕಿ, ಟಾಟಾ, ಹುಂಡೈ, ರಿನಾಲ್ಟ್ ಸೇರಿದಂತೆ ಇತರೆ ಕಂಪನಿಗಳ ಸಣ್ಣ ಕಾರುಗಳಿಗೆ ಮಾತ್ರ ತೆರಿಗೆ ಇಳಿಕೆ ಅನ್ವಯಿಸುತ್ತದೆ. ಮಧ್ಯಮ ವರ್ಗದವರ ಆರ್ಥಿಕ ಶಕ್ತಿಗೆ ಈ ಕಾರುಗಳು ಹೇಳಿ ಮಾಡಿಸಿದಂತಿತ್ತು. ಈಗ ಜಿಎಸ್‌ಟಿ ಕಡಿಮೆ ಮಾಡಿರುವ ಹಿನ್ನೆಲೆಯಲ್ಲಿ ಮಧ್ಯಮ ವರ್ಗದವರು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಿದ್ದಾರೆ.

ಶೇಕಡ 18ಕ್ಕೆ ಜಿಎಸ್‌ಟಿ ಇಳಿಸಿರುವ ಕಾರಣ ಕನಿಷ್ಠ 40 ಸಾವಿರದಿಂದ 1.5 ಲಕ್ಷ ರೂ.ವರೆಗೆ ಕಾರುಗಳ ಬೆಲೆ ಕಡಿಮೆಯಾಗಿದೆ. ಕಾರು ಖರೀದಿಗೆ ಆಯುಧ ಪೂಜೆ ಪ್ರಶಸ್ತ ಸಮಯವಾಗಿದೆ. ಈ ಹಿನ್ನೆಲೆ ಬಹಳಷ್ಟು ಜನರು ಕಾರು ಖರೀದಿ ಮಾಡಿದ್ದು, ಆಯುಧ ಪೂಜೆ ದಿನವಾದ ನಾಳೆ ಹೊಸ ಕಾರು ಪೂಜೆ ಮಾಡಲಿದ್ದಾರೆ. ಹೋಂಡಾ, ಟಿವಿಎಸ್, ಹೀರೋ ಸೇರಿದಂತೆ ಇತರೆ ಕಂಪನಿಗಳ ಬೈಕ್ ಮತ್ತು ಸ್ಕೂಟರ್ ಮೇಲಿನ ಜಿಎಸ್‌ಟಿ ಶೇಕಡ 28ರಿಂದ ಶೇಕಡ 18ಕ್ಕೆ ಇಳಿಸಲಾಗಿದೆ. ಇದರಿಂದ ಬೈಕ್ ಮತ್ತು ಸ್ಕೂಟರ್ ಬೆಲೆ 8 ಸಾವಿರದಿಂದ 12 ಸಾವಿರ ಇಳಿಕೆಯಾಗಿದೆ. ಬಹಳಷ್ಟು ಜನ ಬೈಕ್, ಸ್ಕೂಟರ್ ಖರೀದಿ ಮಾಡಿದ್ದು, ಆಯುಧ ಪೂಜೆ ದಿನವಾದ ನಾಳೆ ಪೂಜೆ ಮಾಡಿಸಲಿದ್ದಾರೆ. ಜಿಎಸ್‌ಟಿ ಇಳಿಕೆ ಮಾಡಿರುವುದು ಆಟೋಮೊಬೈಲ್ ವಲಯಕ್ಕೆ ಟಾನಿಕ್ ನೀಡಿದಂತಾಗಿದೆ. ತೀವ್ರ ಸ್ಪರ್ಧೆಯ ಹಿನ್ನೆಲೆ ಬಹಳಷ್ಟು ಆಟೋಮೊಬೈಲ್ ಕಂಪನಿಗಳು ನಷ್ಟದಲ್ಲಿದ್ದವು. ಆದರೆ ಈಗ ತೆರಿಗೆ ಕಡಿಮೆಯಾಗಿರುವ ಹಿನ್ನೆಲೆ ಜನರ ಖರೀದಿ ಹೆಚ್ಚಾಗಿದ್ದು, ಆಟೋಮೊಬೈಲ್ ವಲಯ ಚೇತರಿಕೆ ಕಾಣಲಿದೆ.

> **“ಜಿಎಸ್‌ಟಿ ಕಡಿತ ಮಾಡಿರುವುದು ಹಾಗೂ ಆಯುಧ ಪೂಜೆ ಹಿನ್ನೆಲೆಯಲ್ಲಿ ಕಾರು ಖರೀದಿ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಮಾಮೂಲಿ ದಿನದಲ್ಲಿ ಮಾರಾಟವಾಗುವ ಕಾರ್‌ಗಳಿಗಿಂತ ಈಗ ಶೇ.30ರಷ್ಟು ಹೆಚ್ಚಾಗಿ ಮಾರಾಟವಾಗಿದೆ.** –ಆಡಳಿತ ಮಂಡಳಿ, ಮಾಂಡೋವಿ ಮೋಟಾರ್ಸ್

ಅತಿಥಿ ಉಪನ್ಯಾಸಕರ ಪ್ರತಿಭಟನೆ ತಾತ್ಕಾಲಿಕ ಸ್ಥಗಿತ

ಪ್ರಸಕ್ತ ಸಾಲಿನಲ್ಲಿ ಸೇವೆ ಮುಂದುವರೆಸಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ



ಮೈಸೂರು ಡಿಸಿ ಕಚೇರಿ ಎದುರು ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಸೆ.30(ಎಂಕೆ)– ಅತಿಥಿ ಉಪನ್ಯಾಸಕರ ಸಕ್ರಮಾತಿ, ಸರ್ಕಾರದ ಹಂತದಲ್ಲೇ ಯುಜಿಸಿ ಮತ್ತು ನಾನ್–ಯುಜಿಸಿ ಎಂಬ ತಾರತಮ್ಯ ಮಾಡದೇ ನಿರ್ಣಯ ಕೈಗೊಳ್ಳುವಂತೆ ಆಗ್ರಹಿಸಿ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು, ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ಕಳೆದ 14 ದಿನಗಳಿಂದ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಧರಣಿಯನ್ನು ಮಂಗಳವಾರ ತಾತ್ಕಾಲಿಕವಾಗಿ ಕೈಬಿಡಲಾಯಿತು.

ಮಂಗಳವಾರ ಹಣ್ಣು-ತರಕಾರಿ ವ್ಯಾಪಾರ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿದ ಅತಿಥಿ ಉಪನ್ಯಾಸಕರು, ಪ್ರಮುಖ ಬೇಡಿಕೆಯಾದ ಅತಿಥಿ ಉಪನ್ಯಾಸಕರ ಸೇವಾ ಸಕ್ರಮಾತಿ ಹಾಗೂ ಯುಜಿಸಿ ಮತ್ತು ನಾನ್–ಯುಜಿಸಿ ತಾರತಮ್ಯ ಮಾಡಬಾರದು ಎಂದು ಆಗ್ರಹಿಸಿದರು.

ಈ ವೇಳೆ ಸಂಘಟನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಎಸ್.ನಾಗರಾಜು, ಮೈಸೂರು ವಿಭಾಗದ ವತಿಯಿಂದ ಅನಿರ್ದಿಷ್ಟಾವಧಿ ಧರಣಿ ಅಂತ್ಯಗೊಳಿಸಲಾಯಿತು. ಕಳೆದ 14 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದೇವೆ. ಸದ್ಯಕ್ಕೆ ಸರ್ಕಾರವು ಕಳೆದ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ ಎಲ್ಲಾ ಅತಿಥಿ ಉಪನ್ಯಾಸಕರನ್ನು ಪ್ರಸಕ್ತ ಸಾಲಿನ ಹಾಲಿ ಸೆಮಿಸ್ಟರ್ ಮುಗಿಯುವವರೆಗೂ ಮುಂದುವರೆಸಿರುವ ಕಾರಣ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಕೈಬಿಡಲಾಗುವುದು. ಹಾಗೆಯೇ ದಸರಾ ಮುಕ್ತಾಯದ ಬಳಿಕ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಪ್ರತಿಭಟನೆ ಮುಂದುವರೆಸಲಾಗುವುದು ಎಂದರು. ಅತಿಥಿ ಉಪನ್ಯಾಸಕರ ಸೇವಾ ಸಕ್ರಮಾತಿ ಪ್ರಮುಖ ಬೇಡಿಕೆಯಾಗಿದೆ. ರಾಜ್ಯ ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವಂತೆ ಅತಿಥಿ ಉಪನ್ಯಾಸಕರನ್ನು ಸಕ್ರಮಾತಿಗೊಳಿಸಿ, ನುಡಿದಂತೆ ನಡೆಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಮಿತಿಯ ಹರ್ಷಿತ, ದಿಲೀಪ್ ಕುಮಾರ್, ಶಿವಣ್ಣ, ಸುದರ್ಶನ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಧರ್ಮಸ್ಥಳ ಪ್ರಕರಣ: ತನಿಖೆಯನ್ನು ಬೇಗ ಪೂರ್ಣಗೊಳಿಸಲು ಎಸ್‌ಐಟಿಗೆ ನಿರ್ದೇಶನ

ಬೆಂಗಳೂರು: ಧರ್ಮಸ್ಥಳ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಸರ್ಕಾರವು ತನಿಖೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ನಿರ್ದೇಶಿಸಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಮಂಗಳವಾರ ಹೇಳಿದ್ದಾರೆ.



ಡಾ.ಜಿ.ಪರಮೇಶ್ವರ

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವರದಿಗಳು ಬಾಕಿ ಉಳಿದಿವೆ ಅಷ್ಟೇ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಐಟಿ ತನ್ನ ಕೆಲಸ ಮಾಡುತ್ತಿದೆ. ಎಫ್‌ಎಸ್‌ಎಲ್ ವರದಿಗಳು ಬರಬೇಕು. ಇತ್ತೀಚೆಗೆ ಪತ್ತೆಯಾದ ವಸ್ತುಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಈ ಹಿಂದೆ ಪತ್ತೆಯಾದ ವಿಷಯಗಳ ಕುರಿತು ವರದಿಗಳನ್ನು ಅಂತಿಮಗೊಳಿಸಿ ಕಳುಹಿಸಲು ನಾವು ಅವರನ್ನು ಕೇಳಿದ್ದೇವೆ. ತನಿಖೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಎಸ್‌ಐಟಿಗೆ ಸೂಚಿಸಲಾಗಿದೆ ಎಂದು ಡಾ.ಪರಮೇಶ್ವರ್ ಹೇಳಿದರು.

ತನಿಖೆಗೆ ಸಂಬಂಧಿಸಿದಂತೆ ಒಬ್ಬರ ನಂತರ ಒಬ್ಬರು ಅರ್ಜಿಗಳನ್ನು ಸಲ್ಲಿಸಲು ಬರುವುದು ಮುಂದುವರಿಯಲು ಸಾಧ್ಯವಿಲ್ಲ; ಇದಕ್ಕೆ ಒಂದು ಅಂತ್ಯ ಇರಬೇಕು. ಎಸ್‌ಐಟಿಗೆ ನಾಳೆ ಅಥವಾ ಮರುದಿನವೇ ತನಿಖೆಯನ್ನು ಪೂರ್ಣಗೊಳಿಸಲು ಹೇಳಲು ಸಾಧ್ಯವಿಲ್ಲ. ತನಿಖೆ ಮುಕ್ತಾಯಗೊಳಿಸಲು ಅವರಿಗೆ ಮಾಹಿತಿ ಅಥವಾ ಸಾಮಗ್ರಿ ಗಳು ಬೇಕಾಗುತ್ತವೆ. ಎಫ್‌ಎಸ್‌ಎಲ್ ವರದಿ ಬರಬೇಕು; ಆ ವರದಿಗಳನ್ನು ಅಂತಿಮಗೊಳಿಸಬೇಕು. ಆ ಎಲ್ಲ ವಿಷಯಗಳನ್ನು ಪರಿಗಣಿಸಿ, ಎಸ್‌ಐಟಿ ಕಾರ್ಯ ನಿರ್ವಹಿಸುತ್ತದೆ ಎಂದರು. ದೂರುದಾರರು ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮೇ ತಿಂಗಳಲ್ಲಿ ವಜಾಗೊಳಿಸಿದ ಸುಪ್ರೀಂ ಕೋರ್ಟ್ ಆದೇಶಕ್ಕೆ ಸಂಬಂಧಿಸಿದ ಪ್ರಶ್ನೆಗೆ, ಎಸ್‌ಐಟಿ ತಮ್ಮ ವರದಿಯಲ್ಲಿ ಆ ಅಂಶವನ್ನು ಪರಿಗಣಿಸಬಹುದು ಎಂದು ಡಾ.ಪರಮೇಶ್ವರ ಹೇಳಿದರು.

ಕಾರ್ಯಕರ್ತ ಮಹೇಶ್‌ಶೆಟ್ಟಿ ತಿಮರೋಡಿ ವಿರುದ್ಧ ಕ್ರಮ ಕೈಗೊಳ್ಳುವಲ್ಲಿನ ವಿಳಂಬದ ಕುರಿತು, ನ್ಯಾಯಾಲಯದಲ್ಲಿ ಏನಾಗುತ್ತದೆ ಎಂದು ನೋಡೋಣ. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಅಥವಾ ಪೊಲೀಸರು ಕಾನೂನು ಪ್ರಕಾರ ಅವರನ್ನು ಬಂಧಿಸುತ್ತಾರೆ. ಸರ್ಕಾರ ಮಧ್ಯಪ್ರವೇಶಿಸುವುದಿಲ್ಲ ಅಥವಾ ಸೂಚನೆಗಳನ್ನು ನೀಡುವುದಿಲ್ಲ. ಪೊಲೀಸರು ತಮಗೆ ಬೇಕಾದಂತೆ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿದರು.

ಕುಮಾರಸ್ವಾಮಿ ಕೋರ್ಟ್, ನ್ಯಾಯಮೂರ್ತಿಯಂತಾಗಿದ್ದಾರೆ

- ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯೋಕ್ತಿ
- ಹಿಂದಿನಿಂದಲೂ ಷಡ್ಯಂತ್ರ ಮಾಡಿ ಮೊಕದ್ದಮೆಗಳ ಹೂಡಿಸಿದ್ದರು
- ನನ್ನ ಮೇಲಿನ ಆರೋಪಗಳಿಗೆ ಸಂಬಂಧಿಸಿ ಸಾರ್ವಜನಿಕವಾಗಿ ಚರ್ಚೆಗೆ ಬರಲಿ; ಸವಾಲು

ಬೆಂಗಳೂರು,ಸೆ.30(ಕೆಎಂಶಿ)– ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾಡುತ್ತಿರುವ ಆರೋಪಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ವೇದಿಕೆಯಲ್ಲಿ ಚರ್ಚಿಸಲು ಸಿದ್ಧ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು ಹಾಕಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ನನ್ನನ್ನು ಜೈಲಿಗೆ ಕಳುಹಿಸುವ ಷಡ್ಯಂತ್ರ ಮತ್ತು ಸಂಕಲ್ಪ ಮಾಡಿದ್ದಾರೆ. ಇದಕ್ಕೆಲ್ಲಾ ಹಬ್ಬದ ನಂತರ ಉತ್ತರ ನೀಡುತ್ತೇನೆ ಎಂದರು.

ರಾಜಕಾರಣಕ್ಕೆ ಬಂದ ದಿನದಿಂದಲೂ ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಷಡ್ಯಂತ್ರ ಮಾಡುವುದರ ಜೊತೆಗೆ ಮೊಕದ್ದಮೆಗಳನ್ನೂ ಹೂಡಿಸಿದ್ದಾರೆ. ಇದೀಗ ಮತ್ತೆ ನಾನು ಜೈಲಿಗೆ ಹೋಗುವುದು ಸನಿಹವಾಗಿದೆ ಎಂದು ಹೇಳಿದ್ದಾರೆ. ಅವರೇ ನ್ಯಾಯಾಲಯ, ಅವರೇ ನ್ಯಾಯಮೂರ್ತಿಯಂತಾಗಿದ್ದಾರೆ. ಅವರು ಯಾವುದಾದರೂ ಸುದ್ದಿ ವಾಹಿನಿ ಇಲ್ಲವೇ ಸಾರ್ವಜನಿಕ ವೇದಿಕೆಯಲ್ಲಿ ಮುಖಾಮುಖಿ ಚರ್ಚೆಗೆ ಬರಲಿ. ನನ್ನ ಬಳಿ ಇರುವ ಅವರ ಕುಟುಂಬದ ಬ್ರಹ್ಮಾಂಡ ದಾಖಲೆಗಳನ್ನು ಇಡುತ್ತೇನೆ. ಅವರ ಬಳಿ ಇರುವ ದಾಖಲೆಗಳನ್ನು ಅವರೂ ನೀಡಲಿ, ನಾನೂ ಉತ್ತರಿಸುತ್ತೇನೆ. ಅವರೂ ಉತ್ತರಿಸಲಿ, ಇದಕ್ಕೆ ಸಿದ್ಧರಿದ್ದಾರೆಯೇ ಎಂದು ಪ್ರಶ್ನಿಸಿದರು. ಹಿಂದೆ ವಿಧಾನಸಭೆಯಲ್ಲೇ ಅವರಿಗೆ ಚರ್ಚೆಗೆ ಆಹ್ವಾನ ನೀಡಿದ್ದೆ, ಈಗ ಅವರು ಸಂಸತ್ ಪ್ರವೇಶಿಸಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ನನ್ನ ವಿರುದ್ಧ ಇಂತಹ ಹೇಳಿಕೆಗಳನ್ನು ನೀಡುವ ಬದಲು ಮುಖಾಮುಖಿ ಚರ್ಚೆ ಮಾಡೋಣ ಬನ್ನಿ ಎಂದರು.

ದಸರಾ ಕನ್ನಡ ಪುಸ್ತಕ ಮೇಳದಲ್ಲಿ ಇನ್ನೂ 4 ಕೃತಿಗಳ ಬಿಡುಗಡೆ

ಮೈಸೂರು,ಸೆ.30(ಎಂಕೆ)–ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಪುಸ್ತಕ ಮೇಳ ಉಪಸಮಿತಿ ವತಿಯಿಂದ ಆಯೋಜಿಸಿರುವ 'ದಸರಾ ಕನ್ನಡ ಪುಸ್ತಕ ಮೇಳ'ದ ಮಂಗಳವಾರವೂ 4 ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.



ಕನ್ನಡ ಪುಸ್ತಕ ಮೇಳದಲ್ಲಿ 4 ಕೃತಿಗಳನ್ನು ಸಾಹಿತಿ ಡಾ. ಎಂಜಿಆರ್ ಅರಸ್ ಲೋಕಾರ್ಪಣೆಗೊಳಿಸಿದರು.

ಲೇಖಕರಾದ ಹೆಚ್.ಎಸ್.ಶ್ರೇಯಸ್ ರಚಿತ 'ನವಾಬ್ ಹೈದರ್ ಅಲಿಖಾನ್ ಬಹದ್ದೂರ್ ಒಂದು ದಂತಕಥೆ', ನವೀನ್ ಸೂರಿಂಜೆ ರಚಿತ 'ಸತ್ಯೊಲು ಶ್ರಮಿಕರ ಜನಪದ ಐತಿಹ್ಯ', ಕಮಲಾ ರಾಜೇಶ್ ರಚಿತ 'ಮೈಸೂರು ದೊರೆಗಳು' ಹಾಗೂ 'ಮೈಸೂರು ಅರಸರು–ಒಂದು ಪದ್ಯ' ಕೃತಿಗಳನ್ನು ಚುಟುಕು ಸಾಹಿತಿ ಡಾ. ಎಂಜಿಆರ್ ಅರಸ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜ್ಞಾನದ ಸೆಲೆ ಅತ್ಯಂತ ಮುಖ್ಯವಾಗಿದ್ದು, ಅಕ್ಷರ ಜ್ಞಾನ ಇಲ್ಲದ ಸಂದರ್ಭದಲ್ಲಿಯೂ ಜ್ಞಾನದ ಸೆಲೆ ಇತ್ತು. ಮೌಖಿಕವಾಗಿಯೇ ಎಲ್ಲವೂ ನಡೆಯುತ್ತಿತ್ತು. ಪುಸ್ತಕ ಮಾಧ್ಯಮ ಬಂದ ನಂತರ ದೇಶದ ಇತಿಹಾಸವೇ ಬದಲಾಯಿತು. ಹಾಗಾಗಿ ಪುಸ್ತಕಗಳು ಪ್ರತಿಯೊಬ್ಬರಿಗೂ ಅಗತ್ಯವಾದವುಗಳಾಗಿವೆ ಎಂದರು.

ಈ ಮೊದಲು ನನ್ನಲ್ಲಿ ಟಿಪ್ಪು ಸುಲ್ತಾನ್ ಎಂದರೆ, ಆತನೊಬ್ಬ ದ್ರೋಹಿ, ಕೀಚಕ, ಹಿಂದೂ ಧರ್ಮವನ್ನು ನಾಶಪಡಿಸಲು ಬಂದವನು ಎಂಬ ಕಲ್ಪನೆ ಇತ್ತು. ಆದರೆ, ಹೆಚ್.ಎಸ್.ಶ್ರೇಯಸ್ ರಚಿತ 'ನವಾಬ್ ಹೈದರ್ ಅಲಿಖಾನ್ ಬಹದ್ದೂರ್ ಒಂದು ದಂತಕಥೆ' ಪುಸ್ತಕ ಓದಿದ ಬಳಿಕ ನಾನು ಅಂದುಕೊಂಡಿದ್ದು ತಪ್ಪು. ಇತಿಹಾಸಕ್ಕೆ ಟಿಪ್ಪು ಸುಲ್ತಾನ್ ಕೊಡುಗೆ ಸಾಕಷ್ಟು ಇದೆ ಎಂಬುದು ಮನವರಿಕೆಯಾಗಿದೆ. ಏಕೆಂದರೆ, ಈ ಕೃತಿಯಲ್ಲಿ ನೈಜ ಸಂಗತಿಗಳನ್ನು ಆಧರಿಸಿ, ಇತಿಹಾಸವನ್ನು ಅಧ್ಯಯನ ಮಾಡಿ ರಚಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಮಾನ್ಯ ಸಿಪಾಯಿ ಆಗಿದ್ದ ಹೈದರಾಲಿ, ಅಂದಿನ ಪರಿಸ್ಥಿತಿಯಲ್ಲಿ ತುಪಾಕಿಗಳಿಂದ ಹೋರಾಟ ಮಾಡಬೇಕಾದರೆ ಆತನ ಮನೋಸ್ಥೈರ್ಯ ಹೇಗಿತ್ತು ಎಂಬುದನ್ನು ಈ ಕೃತಿಯ ಮೂಲಕ ತಿಳಿಯಬಹುದಾಗಿದೆ. ಸತ್ಯಕ್ಕೆ ಹತ್ತಿರವಾದ ಎಲ್ಲಿಯೂ ಅನುಮಾನಕ್ಕೆ ಆಸ್ಪದ ಬಾರದಂತೆ ಇತಿಹಾಸ ಚರಿತ್ರೆಯುಳ್ಳ ಪುಸ್ತಕ ಇದಾಗಿದೆ ಎಂದರು. ಹಾಗೆಯೆ ಲೇಖಕಿ ಕಮಲ ರಾಜೇಶ್, ತಮ್ಮ 'ಮೈಸೂರು ದೊರೆಗಳು' ಕೃತಿಯಲ್ಲಿ ಮೈಸೂರು ರಾಜ ಮನೆತನದ ಕೊಡುಗೆ, ಆಳ್ವಿಕೆ, ಜೀವನ, ಅವರ ಸಾತ್ವಿಕ ಜೀವನ ಕುರಿತು ಸಾಕ್ಷೀಕರಿಸಿದ್ದಾರೆ ಎಂದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅಧ್ಯಕ್ಷತೆ ವಹಿಸಿದ್ದರು. ರಂಗಕರ್ಮಿ ರಾಜಶೇಖರ ಕದಂಬ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸಮಿತಿ ಸದಸ್ಯರಾದ ಕವಯತ್ರಿ ಸುಚಿತ್ರ ಹೆಗಡೆ, ರಾಜಶೇಖರ ಕದಂಬ, ಉಪಸಮಿತಿ ಸದಸ್ಯರಾದ ಸುಚಿತ್ರ ಹೆಗಡೆ, ಡಾ.ಸಿ.ಡಿ.ಪರಶುರಾಮ್ ಇದ್ದರು.

ಇಂದು ದಸರಾ ಪುಸ್ತಕ ಮೇಳಕ್ಕೆ ತೆರೆ...!

ಕನ್ನಡ ಪುಸ್ತಕ ಮೇಳದಲ್ಲಿ ಸುಮಾರು 20ಕ್ಕೂ ಹೆಚ್ಚು ಕೃತಿಗಳನ್ನು ಬಿಡುಗಡೆ ಮಾಡಲಾಗಿದೆ. ನಾಳೆ (ಅ.1) ಮೇಳದಲ್ಲಿ ಯಾವುದೇ ವೇದಿಕೆ ಕಾರ್ಯಕ್ರಮಗಳು ಇಲ್ಲದಿದ್ದರೂ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಈ ಮೂಲಕ ಈ ವರ್ಷದ ದಸರಾ ಕನ್ನಡ ಪುಸ್ತಕ ಮೇಳಕ್ಕೆ ತೆರೆಬೀಳಲಿದೆ.

'ಡಾ.ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆ'ಗೆ ಮೈಸೂರಿಂದ 300 ಮಂದಿ ಅನುಯಾಯಿಗಳು



ಮೈಸೂರಿನಿಂದ ನಾಗಪುರಕ್ಕೆ ಹೊರಟ 'ಡಾ.ಬಿ.ಆರ್.ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆ'ಗೆ ಚಾಲನೆ ನೀಡಲಾಯಿತು.

ಮೈಸೂರು, ಸೆ.30(ಎಂಕೆ)–ಮಹಾರಾಷ್ಟ್ರದ ನಾಗಪುರದಲ್ಲಿರುವ 'ಡಾ.ಬಿ.ಆರ್.ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆ'ಗೆ ಮೈಸೂರಿನಿಂದ ಪ್ರಯಾಣ ಬೆಳೆಸಿದ 300 ಮಂದಿ ಅನುಯಾಯಿಗಳನ್ನು ಮಂಗಳವಾರ ಕಳುಹಿಸಿಕೊಡಲಾಯಿತು.

ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಿಯೋಜಿಸಿದ್ದ 7 ಐರಾವತ ಬಸ್‌ಗಳ ಪ್ರಯಾಣಕ್ಕೆ ಹಸಿರು ನಿಶಾನೆ ತೋರುವ ಮೂಲಕ ಯಾತ್ರೆಗೆ ಚಾಲನೆ ನೀಡಲಾಯಿತು. ಈ ವೇಳೆ ಗಾಂಧಿನಗರ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಧಮ್ಮ ದೀಕ್ಷಾ ಭೂಮಿ ಯಾತ್ರೆಗೆ ಮೈಸೂರಿನಿಂದ 7 ಬಸ್‌ಗಳಲ್ಲಿ ಅನುಯಾಯಿಗಳು ಪ್ರಯಾಣಿಸಿದ್ದಾರೆ. ಇದು ಅತ್ಯಂತ ಅರ್ಥಪೂರ್ಣ ಯಾತ್ರೆಯಾಗಿದೆ ಎಂದರು.

ಅಶೋಕ ವಿಜಯದಶಮಿ ದಿನ ಪವಿತ್ರವಾದ ದಿನವಾಗಿದ್ದು, ಸಮಾನತೆ, ಸಹೋದರತೆ, ಸಹಬಾಳ್ವೆಯ ಪ್ರತೀಕವಾಗಿ ಅಂಬೇಡ್ಕರ್ ಅವರು ಧಮ್ಮ ದೀಕ್ಷೆ ಪಡೆದ ದಿನ. ಈ ದೇಶದ ಚರಿತ್ರೆಯನ್ನು ಅವಲೋಕನ ಮಾಡಿದ ಅಂಬೇಡ್ಕರ್ ಅವರು, ಭಾರತದ ಘನತೆ ಮತ್ತು ಸಮಗ್ರತೆಗೆ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ಇದೇ ನೆಲದಲ್ಲಿ ಹುಟ್ಟಿರುವ ಬೌದ್ಧಧಮ್ಮವನ್ನು ಸ್ವೀಕರಿಸಿ, ಇಡೀ ಭಾರತ ದೇಶ ಪ್ರಬುದ್ಧ ಭಾರತವಾಗಬೇಕು ಎಂದು ಕನಸು ಕಂಡಿದ್ದರು. ಆ ಕನಸಿನತ್ತ ಮೈಸೂರಿನ ಸಾಂಸ್ಕೃತಿಕ ಜನರು ಕಾಲಿಟ್ಟಿರುವುದು ಬಹಳ ಸಂತೋಷ ತಂದಿದೆ ಎಂದರು.


ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಅಂಬೇಡ್ಕರ್ ಅವರ ದೀಕ್ಷಾಭೂಮಿ ವೀಕ್ಷಣೆ ಮಾಡಿ, ಅಲ್ಲಿಂದ ಪ್ರೇರಣೆ ಪಡೆದು ಸಮಾಜದಲ್ಲಿ ಏನಾದರೂ ಒಳ್ಳೆಯ ಕೆಲಸಗಳಾಗಬೇಕು ಎನ್ನುವುದರ ಜೊತೆಗೆ ನಾಗಪುರಕ್ಕೆ ಹೋಗಿ ಬರಲು ಆರ್ಥಿಕವಾಗಿ ಕಷ್ಟವಾಗುತ್ತೆ ಎಂಬ ಕಾರಣಕ್ಕೆ ಸರ್ಕಾರದಿಂದ ರೂಪಿಸಿರುವ ಒಳ್ಳೆಯ ಯೋಜನೆ ಇದಾಗಿದೆ. ಮೈಸೂರಿನಿಂದ 7 ಬಸ್‌ಗಳಲ್ಲಿ ಪ್ರಯಾಣ ಬೆಳೆಸಿರುವ ಸಮಾಜದ ಬಂಧುಗಳು ಕ್ಷೇಮವಾಗಿ ವಾಪಸ್ ಬರಲಿ ಎಂದು ಬಯಸುತ್ತೇವೆ ಎಂದರು.

ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಶಿವಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ದಲಿತ ಸಂಘಟನೆಗಳ ಮುಖಂಡರು, ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಅಕ್ಟೋಬರ್ 1 ಬುಧವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 165 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ನಾಳೆ ದಸರಾ ಜಂಬೂಸವಾರಿ

• ಲಕ್ಷಾಂತರ ಜನರ ನಡುವೆ ಅಭಿಮನ್ಯು ಹೊರುವ ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿ ಮೆರವಣಿಗೆ • ಸಾವಿರಾರು ಕಲಾವಿದರು, ಕಲಾತಂಡಗಳು, ಆಕರ್ಷಕ ಸ್ತಬ್ಧಚಿತ್ರಗಳು ಕಣ್ಣಿಗೆ ಹಬ್ಬ


ಸಂಗ್ರಹ ಚಿತ್ರ

ಮೈಸೂರು, ಸೆ.30(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಗೆ ಅರಮನೆ ನಗರಿ ಮೈಸೂರು ಸರ್ವಸನ್ನದ್ಧಗೊಂಡಿದೆ.

ಈ ಬಾರಿ 11ನೇ ದಿನ ವಿಜಯದಶಮಿ ಜರುಗುತ್ತಿದ್ದು, ಹತ್ತು ದಿನಗಳ ಕಾಲ ದಸರಾ ಉತ್ಸವದ ವೈವಿಧ್ಯಮಯ ಕಾರ್ಯಕ್ರಮಗಳು ನಡೆದಿವೆ. ಗುರುವಾರ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು, ಕಂಗೊಳಿಸುವ ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಅರಮನೆ ಅಂಗಳದಿಂದ ಬನ್ನಿಮಂಟಪದವರೆಗೆ ಮೆರವಣಿಗೆ ನಡೆಸುವ ಸುಂದರ ಕ್ಷಣವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಅತ್ಯಾಕರ್ಷಕ ಸ್ತಬ್ಧಚಿತ್ರಗಳು, ಕಲಾತಂಡಗಳ ಮೇಳಗಳೂ ಮೆರವಣಿಗೆಯಲ್ಲಿ ಸಾಗಲಿವೆ. ಮೆರವಣಿಗೆ ನಂತರ ಅತ್ಯಮೋಘ ಪಂಜಿನ ಕವಾಯತು ಮೂಲಕ ಈ ಬಾರಿ ದಸರೆಗೆ ವೈಭವದ ತೆರೆ ಬೀಳಲಿದೆ.

ಧನುರ್ ಲಗ್ನದಲ್ಲಿ ಚಾಲನೆ: ಜಂಬೂಸವಾರಿ ಮೆರವಣಿಗೆಗೆ ಅ.2ರಂದು(ಗುರುವಾರ) ಮಧ್ಯಾಹ್ನ 1ರಿಂದ 1.18ರೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಅರಮನೆ ಮುಂಭಾಗದ ಆವರಣದಲ್ಲಿ ಸಿಎಂ ಸೇರಿದಂತೆ ಇತರೆ ಗಣ್ಯರು ಆಸೀನರಾದ ಬಳಿಕ ಈ ಸಾಲಿನ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆ ಆರಂಭವಾಗಲಿದೆ. ನಂದಿ ಧ್ವಜದ ನಂತರ ನಿಶಾನೆ, ನೌಪತ್ ಆನೆಗಳು, 100ಕ್ಕೂ ಹೆಚ್ಚು ಕಲಾತಂಡಗಳು ಹಾಗೂ 60 ಸ್ತಬ್ಧಚಿತ್ರಗಳು ಸಾಗಲಿವೆ.

ಕುಂಭ ಲಗ್ನದಲ್ಲಿ ಪುಷ್ಪಾರ್ಚನೆ: ವರ್ಣರಂಜಿತ ಜಂಬೂಸವಾರಿ ಮೆರವಣಿಗೆ ಸಾಗಿದ ಬಳಿಕ ಸಂಜೆ 4.42ರಿಂದ 5.06ರವರೆಗೆ ಸಲ್ಲುವ ಶುಭ ಕುಂಭ ಲಗ್ನದಲ್ಲಿ ಗಜಪಡೆ ಕ್ಯಾಪ್ಟನ್ ಅಭಿಮನ್ಯುವಿನ ಮೇಲೆ ಕಟ್ಟುವ ಚಿನ್ನದ ಅಂಬಾರಿಯಲ್ಲಿ ವಿರಾಜಮಾನವಾಗಿ ಕಂಗೊಳಿಸುವ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಇತರೆ ಗಣ್ಯರು ಪುಷ್ಪಾರ್ಚನೆ ಮಾಡಲಿದ್ದಾರೆ. ಬಳಿಕ ವಿವಿಧ ಪೊಲೀಸ್ ತುಕಡಿ, ಅಶ್ವಪಡೆ, ಪೊಲೀಸ್ ಬ್ಯಾಂಡ್ ವಾದನದ ತಂಡಗಳ ಹಿಂದೆ ಅಂಬಾರಿ ಮೆರವಣಿಗೆ ಸಾಗಲಿದೆ. ಮೆರವಣಿಗೆ ಬನ್ನಿಮಂಟಪ ತಲುಪಿದ ಬಳಿಕ ಪಂಜಿನ ಕವಾಯತು ನಡೆಯಲಿದೆ.

ಅರಮನೆಯಲ್ಲಿ 45 ಸಾವಿರ ಆಸನ: ಜಂಬೂಸವಾರಿ ವೀಕ್ಷಣೆಗಾಗಿ ಅರಮನೆ ಆವರಣದಲ್ಲಿ ಜಿಲ್ಲಾಡಳಿತದ ವತಿಯಿಂದ 45 ಸಾವಿರ ಆಸನದ ವ್ಯವಸ್ಥೆ ಮಾಡಲಾಗಿದೆ. ಗೋಲ್ಡ್ ಕಾರ್ಡ್, ಟಿಕೆಟ್ ಪಡೆದವರು ಹಾಗೂ ಪಾಸ್ ■10ನೇ ಪುಟಕ್ಕೆ

ಹತ್ತು ಕಡೆ ಸಹಾಯ ಕೇಂದ್ರ

ಜಂಬೂಸವಾರಿ ದಿನ ವಿವಿಧೆಡೆ 10 ಕಡೆ ಸಹಾಯ ಕೇಂದ್ರಗಳನ್ನು ತೆರೆಯಲಾಗುತ್ತದೆ. ರೈಲ್ವೆ ನಿಲ್ದಾಣದ ಮುಂಭಾಗದ ಬಾಬು ಜಗಜೀವನರಾಮ್ ವೃತ್ತ, ಅರಮನೆಯ ವರಾಹ ಗೇಟ್, ಸೆಂಟ್ ಫಿಲೋಮಿನಾ ಚರ್ಚ್, ಗ್ರಾಮಾಂತರ ಬಸ್ ನಿಲ್ದಾಣ, ಮಹಾತ್ಮಗಾಂಧಿ ವೃತ್ತ, ಮೈಸೂರು ಮೃಗಾಲಯ, ದಸರಾ ವಸ್ತುಪ್ರದರ್ಶನದ ಮುಖ್ಯದ್ವಾರದ ಬಳಿ, ನರಸಿಂಹರಾಜ ಠಾಣಾ ವ್ಯಾಪ್ತಿಯಲ್ಲಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಗೇಟ್ ನಂ.8, ಸೇಂಟ್ ಫಿಲೋಮಿನಾ ಕಾಲೇಜು ಮುಂಭಾಗ ಹಾಗೂ ಟಿಪ್ಪು ವೃತ್ತದ ಬಳಿ ಪೊಲೀಸ್ ಸಹಾಯ ಕೇಂದ್ರಗಳು ರಾತ್ರಿವರೆಗೂ ಕಾರ್ಯನಿರ್ವಹಿಸಲಿವೆ. ಅಲ್ಲಿ ಕಾರ್ಯನಿರ್ವಹಿಸುವ ಪೊಲೀಸರು, ಮೆರವಣಿಗೆ ವೀಕ್ಷಣೆಗೆ ಬರುವ ಜನರಿಗೆ ಸೂಕ್ತ ಮಾರ್ಗದರ್ಶನ ನೀಡುವುದರ ಜೊತೆಗೆ ಗುರುತರ ದೂರುಗಳನ್ನೂ ಸ್ವೀಕರಿಸಿ, ಕ್ರಮ ವಹಿಸಲಿದ್ದಾರೆ. ಯಾರಿಗಾದರೂ ಸಮಸ್ಯೆಯಾದರೆ 112 ತುರ್ತು ಸಹಾಯವಾಣಿಗೆ ಕರೆ ಮಾಡಿದರೂ ಸಮೀಪದ ಸಹಾಯ ಕೇಂದ್ರಗಳ ಸಿಬ್ಬಂದಿಗೆ ಮಾಹಿತಿ ಲಭಿಸಲಿದ್ದು, ತಕ್ಷಣ ಸಹಾಯಕ್ಕೆ ಧಾವಿಸಲಿದ್ದಾರೆ.

ನಿಮಗೆ ಸಹಾಯ ಬೇಕೆ; ಕರೆ ಮಾಡಿ
112

ಶುಭಾಶಯಗಳು



ನಾಡಿನ ಸಮಸ್ತರಿಗೂ ಆಯುಧಪೂಜೆ ಹಾಗೂ ವಿಜಯದಶಮಿಯ ಶುಭಾಶಯಗಳು

ಬಿಡುವು

ಆಯುಧಪೂಜೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 02-10-2025ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಸುಗಮ, ಸುರಕ್ಷಿತ ಜಂಬೂಸವಾರಿಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆಯಿಂದ ಎಲ್ಲಾ ಎಚ್ಚರಿಕಾ ಕ್ರಮ

ಪಾಸ್ ಇಲ್ಲದೇ ಪ್ರವೇಶ ಇಲ್ಲ

- ನೂಕು–ನುಗ್ಗಲು ಅವಘಡ ತಡೆಗೆ ಎಚ್ಚರಿಕಾ ಫಲಕಗಳು, ಅಲ್ಲಲ್ಲಿ ಪ್ರಕಟಣೆಯ ವ್ಯವಸ್ಥೆ
- ತುರ್ತು ಪರಿಸ್ಥಿತಿ ಎದುರಿಸಲು ಅಗತ್ಯವಿರುವ ಹಾಸಿಗೆಗಳು, ಐಸಿಯು, ಸಿಬ್ಬಂದಿ ಎಲ್ಲವೂ ಸನ್ನದ್ಧ




ಸಂಗ್ರಹ ಚಿತ್ರ

ಮೈಸೂರು, ಸೆ.30(ಆರ್‌ಕೆ, ಬಿಸಿಟಿ)– ವಿಶ್ವಪ್ರಸಿದ್ಧ ಮೈಸೂರು ದಸರಾದ ಪ್ರಮುಖ ಆಕರ್ಷಣೆ ಜಂಬೂಸವಾರಿ (ವಿಜಯದಶಮಿ ಮೆರವಣಿಗೆ)ಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮೈಸೂರು ಜಿಲ್ಲಾಡಳಿತ ಹಾಗೂ ನಗರ ಪೊಲೀಸರು ಮುನ್ನೆಚ್ಚರಿಕೆ ವಹಿಸಿದ್ದು, ಆ ನಿಟ್ಟಿನಲ್ಲಿ ಸರ್ವ ರೀತಿಯಲ್ಲಿ ಸಜ್ಜಾಗಿವೆ. ಈ ಮಧ್ಯೆ, ಅರಮನೆ ಆವರಣದಲ್ಲಿ ಜಂಬೂಸವಾರಿ ವೀಕ್ಷಿಸಲು ಹಾಗೂ ಪಂಜಿನ ಕವಾಯತು ಮೈದಾನದಲ್ಲೂ ಪಾಸ್ ಇದ್ದರೇ ಮಾತ್ರವೇ ಪ್ರವೇಶ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನದಂತೆ ದಸರಾ ವಿಶೇಷಾಧಿಕಾರಿಯೂ ಆದ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಅವರು ಮೈಸೂರು ಮಹಾನಗರ ಪಾಲಿಕೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಜಿಲ್ಲಾ ಪಂಚಾಯತಿ ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಈಗಾಗಲೇ ದಸರಾ ಉದ್ಘಾಟನೆ, ಯುವ ಸಂಭ್ರಮ, ಯುವ ದಸರಾ, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ದಸರಾ ವಸ್ತುಪ್ರದರ್ಶನ, ಕ್ರೀಡಾಕೂಟ ದಂತಹ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದಾರೆ.

ಮುಂಜಾಗ್ರತಾ ಕ್ರಮ: ಜಂಬೂಸವಾರಿ ಸಾಗುವ ರಾಜಮಾರ್ಗದಲ್ಲಿರುವ ಹಳೆಯ ಹಾಗೂ ಶಿಥಿಲಗೊಂಡ ಕಟ್ಟಡಗಳು, ಮರಗಳ ಮೇಲೇರಿ ಸಾರ್ವಜನಿಕರು ವಿಜಯದಶಮಿ ಮೆರವಣಿಗೆ ವೀಕ್ಷಿಸುವುದನ್ನು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಕಟ್ಟುನಿಟ್ಟಾಗಿ ನಿಷೇಧಿಸಿದೆ. ಸುಮಾರು 5 ಕಿ.ಮೀ. ಸಾಗುವ ಸಾಂಸ್ಕೃತಿಕ ಕಲಾತಂಡಗಳು, ವಿವಿಧ ಕಲಾ ಹಾಗೂ ಸಾಂಸ್ಕೃತಿಕ ವೈಭವ, ಸ್ತಬ್ಧಚಿತ್ರಗಳು, ಪೊಲೀಸ್ ಪರೇಡ್ ಮತ್ತು ಚಿನ್ನದ ಅಂಬಾರಿ ವೀಕ್ಷಿಸಲು ಜನರು ರಸ್ತೆಬದಿಯ ಮರಗಳು, ಕಟ್ಟಡಗಳ ಮೇಲೆ ಕುಳಿತುಕೊಳ್ಳುವುದನ್ನು ತಡೆಯಲು ಅಗತ್ಯ ಮುಂಜಾಗ್ರತಾ ಕ್ರಮ ವಹಿಸಲಾಗಿದೆ. ■10ನೇ ಪುಟಕ್ಕೆ

ಜಂಬೂಸವಾರಿ ಮೆರವಣಿಗೆಗೆ ಪೊಲೀಸರ ಅತ್ಯುನ್ನತ ಭದ್ರತೆ

6,384 ಪೊಲೀಸರ ನಿಯೋಜನೆ, 34,616 ಸಿಸಿಟಿವಿ ಕ್ಯಾಮರಾ ಕಣ್ಗಾವಲು


ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲಿಸುತ್ತಿರುವುದು.

ಮೈಸೂರು, ಸೆ.30(ಬಿಎಲ್‌ಯು)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯನ್ನು ಲಕ್ಷಾಂತರ ಜನರು ವೀಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಯಾವುದೇ ಅವಘಡಗಳಿಗೆ ಆಸ್ಪದವಾಗದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಜಂಬೂಸವಾರಿ ಮೆರವಣಿಗೆ ಸಾಗುವ ಮಾರ್ಗದಲ್ಲಿ ಬಾಂಬ್ ನಿಷ್ಕ್ರಿಯ ದಳ ಇಂಚಿಂಚು ಪರಿಶೀಲನೆ ಮಾಡುತ್ತಿದೆ. 6384 ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜನೆ ಮಾಡಲಾಗಿದ್ದು ಸಾವಿರಾರು ಸಿಸಿಟಿವಿ ಕ್ಯಾಮರಾ ಮೂಲಕ ಪ್ರತಿಯೊಬ್ಬರ ಚಲನ–ವಲನಗಳ ಮೇಲೆ ಹದ್ದಿನಕಣ್ಣಿಡಲಾಗಿದೆ. ■10ನೇ ಪುಟಕ್ಕೆ

ರಾಜಬೀದಿಯಲ್ಲಿ ಬಾಂಬ್ ನಿಷ್ಕ್ರಿಯ ದಳದಿಂದ ಇಂಚಿಂಚು ಶೋಧನೆ

ಜಂಬೂಸವಾರಿ ಮೆರವಣಿಗೆ ಸಾಗುವ ಮೈಸೂರಿನ ರಾಜಬೀದಿಗಳಲ್ಲಿ ಬಾಂಬ್ ನಿಷ್ಕ್ರಿಯ ದಳ (Bomb Disposal Squad)ದವರು ಇಂಚಿಂಚು ಶೋಧಿಸುತ್ತಿದ್ದಾರೆ. ಬೆಂಗಳೂರಿನಿಂದ ಆಗಮಿಸಿರುವ ಒಂದು ತಂಡ ಹಾಗೂ ಮೈಸೂರಿನಲ್ಲೇ ಇರುವ ತಂಡ ಕಾರ್ಯಾಚರಣೆಯಲ್ಲಿ ತೊಡಗಿವೆ. ಜಂಬೂಸವಾರಿ ಮೆರವಣಿಗೆ ಸಾಗುವ 5.5 ಕಿಲೋಮೀಟರ್ ಉದ್ದಕ್ಕೂ ಪರಿಶೀಲನೆ ನಡೆಸಲಿವೆ. ಆಯುಧ ಪೂಜೆ ದಿನವಾದ ನಾಳೆ ಹಾಗೂ ಜಂಬೂಸವಾರಿ ಮೆರವಣಿಗೆ ಹಾಗೂ ಪಂಜಿನ ಕವಾಯತು ನಡೆಯುವ ಬನ್ನಿಮಂಟಪ ಮೈದಾನದಲ್ಲಿ ಕೂಡ ಶೋಧನೆ ನಡೆಯಲಿದೆ.

ನಕ್ಕರೆ ಅದೇ ಸ್ವರ್ಗ

ರೈಲ್ವೆ ಟಿಸಿ : ಸ್ವಾಮೀಜಿ, ಎಲ್ಲಿಗೆ ಹೋಗ್ತಿದ್ದೀರಿ?
ಸ್ವಾಮೀಜಿ : ರಾಮನು ಎಲ್ಲಿ ಜನಿಸಿದನೋ ಅಲ್ಲಿಗೆ
ಟಿಸಿ : ಟಿಕೆಟ್ ತೋರಿಸಿ
ಸ್ವಾಮೀಜಿ : ಟಿಕೆಟ್ ಇಲ್ಲ ಕಂದ
ಟಿಸಿ : ಹಾಗಾದರೆ ಬನ್ನಿ
ಸ್ವಾಮೀಜಿ : ಎಲ್ಲಿಗೆ?
ಟಿಸಿ : ಶ್ರೀ ಕೃಷ್ಣ ಎಲ್ಲಿ ಜನಿಸಿದನೋ ಅಲ್ಲಿಗೆ

ಮೈಸೂರು ಮಿತ್ರ
ಬುಧವಾರ, 1 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಮ್ಮನ್ನು ಹೊಗಳುತ್ತಿರುವ ಸಾವಿರಾರು ಜನರಿಗಿಂತ ತಪ್ಪು ಮಾಡಿದಾಗ ತಿದ್ದುವ ಒಬ್ಬ ಒಳ್ಳೆಯ 'ಮಿತ್ರ ಮತ್ತು ಗುರು' ಇದ್ದರೆ ಸಾಕು. ಹೊಗಳುವ ಜನ ಸಿಗ್ತಾರೆ. ಆದರೆ ಎಡವಿದಾಗ ತಪ್ಪು ತಿದ್ದುವವರು ಬೆರಳೆಣಿಕೆ ಮಂದಿ ಮಾತ್ರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಟ್ಟಿ ತುಂಬಾ ಹಸು, ಹಾಲು ಮಾತ್ರ ತುಸು

ನಿಮ್ಮ ಪತ್ರಗಳು

ಹೃದಯ ಜ್ಯೋತಿ ಯೋಜನೆ ಗಿಮಿಕ್ ಆಗದಿರಲಿ

ಮಾನ್ಯರೆ,

ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯನ್ನು ರಾಜ್ಯದ ಎಲ್ಲಾ ತಾಲೂಕುಗಳಿಗೂ ವಿಸ್ತರಿಸುತ್ತೇವೆ ಎನ್ನುವ ಸರ್ಕಾರದ ಘೋಷಣೆ ವಾಸ್ತವದಲ್ಲಿ ಕೇವಲ ಪ್ರಚಾರದ ಗಿಮಿಕ್ ಎಂಬುದು ಸುಳ್ಳಲ್ಲ. ಹಲವಾರು ವರ್ಷಗಳಿಂದ ಆರೋಗ್ಯ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಜನ ತತ್ತರಿಸುತ್ತಿರುವಾಗ ರಾಜ್ಯ ಸರ್ಕಾರ ಮಾತ್ರ ಆಕರ್ಷಕ ಅಂಕಿ–ಅಂಶಗಳನ್ನು ಜನರಿಗೆ ತೋರಿಸುತ್ತಿದೆ.

ತಾಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ, ಹಾಸಿಗೆಗಳ ಕೊರತೆ, ತುರ್ತು ಚಿಕಿತ್ಸೆಗಾಗಿ ಬೇಕಾದ ಯಂತ್ರೋಪಕರಣಗಳ ಕೊರತೆ. ಇವೆಲ್ಲವನ್ನು ಸರಿಪಡಿಸದೆ, ಕೇವಲ ಯೋಜನೆ ಹೆಸರು ಹೇಳುವುದರಿಂದ ಜನರ ಜೀವ ಉಳಿಯುವುದಿಲ್ಲ.

9 ಲಕ್ಷ ಜನರಿಗೆ ಇಸಿಜಿ ಮಾಡಿದರೆ ಸಾಕೆ? ಅದರ ನಂತರದ ಚಿಕಿತ್ಸೆಗಾಗಿ ಎಷ್ಟು ಜನ ಗ್ರಾಮೀಣ ಬಡವರು ಲಕ್ಷಾಂತರ ರೂಪಾಯಿಗಳ ವೆಚ್ಚವನ್ನು ಭರಿಸಬಲ್ಲರು? ತಜ್ಞರಿಲ್ಲದ, ಮೂಲಸೌಕರ್ಯವಿಲ್ಲದ ಆಸ್ಪತ್ರೆಗಳಲ್ಲಿ ಈ ಯೋಜನೆ ಕೇವಲ ಕಾಗದದಲ್ಲಿ ಮಾತ್ರ ಉಳಿಯುವ ಅಪಾಯ ಇದೆ. ಸರ್ಕಾರಕ್ಕೆ ನಿಜವಾಗಿಯೂ ಜನರ ಹೃದಯದ ಆರೋಗ್ಯದ ಬಗ್ಗೆ ಚಿಂತೆಯಿದ್ದರೆ, ಮೊದಲು ಗ್ರಾಮೀಣ ಆರೋಗ್ಯ ಕೇಂದ್ರಗಳನ್ನು ಬಲಪಡಿಸಲಿ, ತಜ್ಞ ವೈದ್ಯರನ್ನು ನೇಮಿಸಲಿ, ಅಗತ್ಯ ಉಪಕರಣಗಳನ್ನು ಒದಗಿಸಲಿ. ಇಲ್ಲದಿದ್ದರೆ ಇಂತಹ ಘೋಷಣೆಗಳು ಜನರಿಗೆ ಆಶಾಭಂಗ ಉಂಟುಮಾಡುವುದಲ್ಲದೆ, ಪುನೀತ್ ರಾಜ್‌ಕುಮಾರ್ ಅವರ ಹೆಸರನ್ನೇ ಪ್ರಚಾರದ ಗಿಮಿಕ್ ಆಗಿ ಬಳಸುವಂತಾಗುತ್ತದೆ.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ವಯೋಮಿತಿ ಹೆಚ್ಚಳ ಸ್ವಾಗತಾರ್ಹ ನಿರ್ಧಾರ

ಮಾನ್ಯರೆ,

ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಗೆ ಸ್ವಲ್ಪಮಟ್ಟಿಗಾದರೂ ಕಡಿವಾಣ ಹಾಕಲು ರಾಜ್ಯ ಸರ್ಕಾರ ಎಲ್ಲಾ ಜಾತಿಗಳ (ವರ್ಗಗಳ) ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು 3 ವರ್ಷಗಳ ಕಾಲ ಹೆಚ್ಚಿಸಿರುವುದು ಸ್ವಾಗತಾರ್ಹವಾಗಿದೆ. ಇದು ಒಂದು ಬಾರಿ ಮಾತ್ರ ಅನ್ವಯವಾಗಲಿದ್ದು, ರಾಜ್ಯ ಸರ್ಕಾರದಿಂದ ನಡೆಸುವ ಎಲ್ಲಾ ನೇರ ನೇಮಕಾತಿಗಳಿಗೆ ಮಾತ್ರ ಅನ್ವಯವಾಗುತ್ತದೆಂದು ಸರ್ಕಾರಿ ಮೂಲಗಳು ತಿಳಿಸಿವೆ.

ಈ ವಿನಾಯಿತಿ 2027 ರ ಡಿಸೆಂಬರ್ 31ರವರೆಗೆ ರಾಜ್ಯ ಸರ್ಕಾರ ನಡೆಸುವ ಎಲ್ಲಾ ರೀತಿಯ ಸಿವಿಲ್ ಹುದ್ದೆಗಳಿಗೆ ಅನ್ವಯಿಸುತ್ತದೆ ಎಂದು ರಾಜ್ಯ ಸರ್ಕಾರದ ಪ್ರಕಟಣೆ ತಿಳಿಸಿದೆ. ಈ ವಿನಾಯಿತಿಯಿಂದ ಸಾಮಾನ್ಯ ವರ್ಗದ ಅಭ್ಯರ್ಥಿಗಳ ಗರಿಷ್ಠ ವಯೋಮಿತಿ 35 ರಿಂದ 38ಕ್ಕೆ ಏರಿದರೆ, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ವಯೋಮಾನ 38 ರಿಂದ 41 ವರ್ಷಗಳಿಗೆ ಏರಿಕೆಯಾಗಿದೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಗರಿಷ್ಟ ವಯೋಮಿತಿ 40 ರಿಂದ 43ಕ್ಕೆ ಏರುತ್ತದೆ. ರಾಜ್ಯದಲ್ಲಿ ಸರ್ಕಾರದ ನೇಮಕಾತಿ ಬಹಳ ನಿಧಾನ ಗತಿಯಲ್ಲಿ ಸಾಗುತ್ತಿದೆ. ಎಷ್ಟೋ ಇಲಾಖೆಗಳಲ್ಲಿ ವಿಶೇಷವಾಗಿ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿ ನಡೆದು ಹಲವಾರು ವರ್ಷಗಳೇ ಆಗಿವೆ. ಆದ್ದರಿಂದ ವಯೋಮಿತಿ ಹೆಚ್ಚಳ ಇಂದಿನ ಸಂದರ್ಭದಲ್ಲಿ ತೀರಾ ಅಗತ್ಯವಾಗಿತ್ತು. ಬರೀ ನೇಮಕಾತಿ ಹೆಚ್ಚಿಸಿದ ಮಾತ್ರಕ್ಕೆ ಏನೂ ಉಪಯೋಗವಾಗಲಾರದು. ರಾಜ್ಯ ಸರ್ಕಾರ, ಅದೇ ವೇಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಶೀಘ್ರವಾಗಿ ತುಂಬಲು ಅಗತ್ಯ ಕ್ರಮ ಕೈಗೊಂಡರೆ ಮಾತ್ರ ವಯೋಮಿತಿ ಹೆಚ್ಚಳಕ್ಕೆ ಅರ್ಥ ಬರುತ್ತದೆ. ವಯೋಮಿತಿ ಹೆಚ್ಚಳವನ್ನು ರಾಜ್ಯ ಸರ್ಕಾರಿ ಒಡೆತನದ ನಿಗಮ ಮತ್ತು ಮಂಡಳಿಗಳು ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕವಿಗೋಷ್ಠಿಗೆ ವಿಶಾಲವಾದ ಸ್ಥಳಾವಕಾಶವಿರಲಿಲ್ಲ

ಮಾನ್ಯರೆ,

ಈ ವರ್ಷದ ನಾಡಹಬ್ಬ ದಸರಾ ಪ್ರಯುಕ್ತ 'ಕವಿಗೋಷ್ಠಿ' ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆವರಣದಲ್ಲಿರುವ ಬಿಎಂಶ್ರೀ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಸಭಾಂಗಣ ಅತ್ಯಂತ ಚಿಕ್ಕದಾಗಿದ್ದು, ಕೇವಲ 150 ರಿಂದ 200 ಸಭಿಕರಷ್ಟೇ ಕುಳಿತುಕೊಳ್ಳಲು ಸ್ಥಳಾವಕಾಶವಿತ್ತು. ಅಲ್ಲದೇ ಸಭಾಂಗಣದ ವೇದಿಕೆಯಲ್ಲಿ 15 ರಿಂದ 20 ಜನರಷ್ಟೇ ಕುಳಿತುಕೊಳ್ಳಬಹುದಾಗಿತ್ತು. ದಸರಾ ಕವಿಗೋಷ್ಠಿಗೆ ತನ್ನದೇ ಆದ ಇತಿಹಾಸವಿದೆ. ಇಷ್ಟು ವರ್ಷಗಳ ಕಾಲ ಕವಿಗೋಷ್ಠಿಗಳು ಜಗನ್ಮೋಹನ ಅರಮನೆಯಲ್ಲಿ ನಡೆಯುತ್ತಿತ್ತು. ಅಲ್ಲಿ ಸಾವಿರಾರು ಜನರು ಕುಳಿತುಕೊಳ್ಳಲು ಅವಕಾಶವು ಇದೆ. ಕವಿಗೋಷ್ಠಿಯಲ್ಲಿ 30 ಮಂದಿ ಕವಿಗಳು ವೇದಿಕೆ ಮೇಲೆ ಉಪಸ್ಥಿತರಿದ್ದು, ಕವಿಗಳೇ ಕಾಣಿಸುತ್ತಿರಲಿಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕೆಲ್ಲಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರು ತಾಲೂಕು ಜಯಪುರ ಹೋಬಳಿ ಡಿ.ಸಾಲುಂಡಿ ಗ್ರಾಮದ ಬಸವೇಶ್ವರ ದೇವಸ್ಥಾನದ ತಿರುವಿನಿಂದ ಕೆಲ್ಲಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಮಳೆ ನೀರು ನಿಂತು ರೈತಾಪಿ ಜನರು ಓಡಾಡುವುದೇ ಕಷ್ಟಕರವಾಗಿದೆ. ಜಯಪುರದಿಂದ ಬರಡನಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಕೂಡ ಇದೇ ಸ್ಥಿತಿಯಲ್ಲಿದೆ. ಹಾಗೆಯೇ ದಾರಿಪುರ ಗ್ರಾಮದ ಹೊರಗಿನಿಂದ ಗೋಪಾಲಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಹದಗೆಟ್ಟಿದೆ. ಯಡಹಳ್ಳಿ ಮಹದೇಶ್ವರ ದೇವಸ್ಥಾನದಿಂದ ಧನಗಳ್ಳಿ, ದೇವಗಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಹದಗೆಟ್ಟಿದೆ. ಸುಮಾರು ಹದಿನೈದು ವರ್ಷಗಳಿಂದ ಡಾಂಬರನ್ನೇ ಕಾಣದ ಈ ರಸ್ತೆಗಳು ಇಲ್ಲಿನ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು ಹಾಗೂ ಅಧಿಕಾರಿ ವರ್ಗ ಮತ್ತು ಶಾಸಕರ ಕಣ್ಣಿಗೆ ಕಾಣದಿರುವುದು ದುರದೃಷ್ಟಕರ. ಈ ಭಾಗದ ಜನರಿಗೆ ಮೂಲಸೌಕರ್ಯದ ಅರಿವೇ ಇರದ ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸುಮ್ಮನಿರುವುದು ಸೋಜಿಗವೇ ಸರಿ. ಉತ್ತಮ ರಸ್ತೆಗಳಿಂದ ರೈತರು ಅವರು ಬೆಳೆದ ಬೆಳೆಗಳನ್ನು ಸರಿಯಾದ ಸಮಯಕ್ಕೆ ಮಾರುಕಟ್ಟೆಗೆ ತಲುಪಿಸಲು ಸಹಾಯಕವಾಗುತ್ತದೆ. ಇನ್ನಾದರೂ ಇಲ್ಲಿನ ರೈತಾಪಿ ಜನರ ಸುಗಮ ಓಡಾಟಕ್ಕೆ ಉತ್ತಮ ರಸ್ತೆ ನಿರ್ಮಿಸುವ ದೃಢ ಸಂಕಲ್ಪ ಮಾಡಲಿ ಎನ್ನುವುದು ಇಲ್ಲಿನ ಭಾಗದ ಜನರ ಆಶಯ.

–ಮಂಜೇಶ್ ದೇವಗಳ್ಳಿ, ಮೈಸೂರು

ವಿಶ್ವ ವಿಸ್ಮಯವೀ ಜಂಬೂಸವಾರಿ



ವಿಜಯದಶಮಿ ವೈಭವದ ನವರಾತ್ರಿಯ ಮೈಸೂರು ದಸರಾ ಎಂದರೆ ಅದು ಜಂಬೂಸವಾರಿಯಷ್ಟೇ ಅಲ್ಲ. ಸಮಸ್ತ ನಾಡಿನ ಸಾಂಸ್ಕೃತಿಕ ಸಿರಿ ಸಂಪತ್ತಿನ ಮತ್ತು ನಾಡನ್ನಾಳಿದ ರಾಜಪರಂಪರೆಯ ಅನಾವರಣ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಮತ್ತೆ ಬಂದಿದೆ ಮೈಸೂರು ದಸರಾ. ಮೈಸೂರಿಗೆ ಮೈಸೂರೇ ಮಿರಮಿರನೆ ಮಿಂಚುವ ಮಹಾಸಡಗರ. ಮೈಮನ ಪುಳಕಿತವಾಗುವಂತೆ ನಿತ್ಯ ಬದುಕಿನ ಜಂಜಡ ಮರೆಸುವ ಸಂತಸದ ಆಗರ.

ಮೈಸೂರು ದಸರೆಯೇ ಹಾಗೆ. ಇದಕ್ಕಾಗಿ ಇಡೀ ಮೈಸೂರು ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು ನಿಲ್ಲುವ ಪರಿ ಇದೆಯಲ್ಲ ವಾಹ್, ಮಹದದ್ಭುತ! ಅದಕ್ಕೇನೆ ಇದು ಅಷ್ಟೊಂದು ಜಗದ್ವಿಖ್ಯಾತ. ದೇಶದ ಹಲವು ಕಡೆ ದಸರಾ ಉತ್ಸವಗಳು ನಡೆಯುವುದುಂಟು. ಆದರೆ, ಮೈಸೂರು ದಸರಾದ ವೈಭವವೇ ಬೇರೆ. ಇಡೀ ವಿಶ್ವವೇ ಇತ್ತ ತಿರುಗಿ ನೋಡುವಂಥದ್ದು. ಯಾರೇ ಆಗಲಿ ಈ ಕ್ಷಣಕ್ಕೂ ಮೈಸೂರು ದಸರಾ ಎಂದಾಕ್ಷಣ ಏನೋ ಒಂಥರಾ ಆನಂದ.

ಕಣ್ಮುಂದೆ ಚೆಂದದ ಮೈಸೂರು, ಅಂದದ ಅರಮನೆ, ಸುಂದರ ಚಿನ್ನದ ಅಂಬಾರಿ, ಮನಸೆಳೆವ ರತ್ನ ಸಿಂಹಾಸನ, ಸಿಂಹಾಸನಾಧೀಶರಾಗಿ ಮೆರೆದ ಮಹಾರಾಜರ ವೈಭವ–ವೈಭೋಗಗಳೆಲ್ಲವೂ ನೆನಪುಗಳ ಮೆರವಣಿಗೆಯಾಗಿ ತೇಲಿ ಬರುತ್ತದೆ. ಇದರ ಜೊತೆಗೆ ಮೈಸೂರು ದಸರೆಯ ಜಂಬೂಸವಾರಿ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿದಂತೆ ನೆನಪಿನ ಪರದೆಯಲ್ಲಿ ಹಾದು ಹೋಗುತ್ತದೆ. ಇದೇ ನೋಡಿ ಮೈಸೂರು ದಸರಾದ ವೈಶಿಷ್ಟ್ಯತೆ.

ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದು ಇಂದು ಬದಲಾದ ಕಾಲಘಟ್ಟದಲ್ಲಿ ನಾಡಹಬ್ಬವೆಂದೇ ಕರೆಯಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ನಮ್ಮ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಸುದೀರ್ಘ ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಆರಾಧನೆಯೊಡನೆ ಆರಂಭವಾಗುವ ನವರಾತ್ರಿ ವೈಭವದ ವಿಜಯದಶಮಿಯ ಈ ಮೈಸೂರು ದಸರಾ ಮಹೋತ್ಸವಕ್ಕೆ ಅದರದ್ದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿರಿಮೆಯುಂಟು.

ಇಂಥ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮುಂದುವರಿಸಿಕೊಂಡು ಬಂದವರು ಯದುವಂಶದ ಮೈಸೂರು ಒಡೆಯರು. ಈ ರೀತಿ ರಾಜ ಒಡೆಯರಿಂದ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾದ ವಿಜಯನಗರ ಪರಂಪರೆಯ ನವರಾತ್ರಿ ಪೂಜೆಯ ದಸರಾ ಮಹೋತ್ಸವ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಮತ್ತಷ್ಟು ಭವ್ಯಗೊಂಡು, ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ (1902–1940) ಕಾಲಕ್ಕೆ ಮಗದಷ್ಟು ವೈಭವದ ಉತ್ತುಂಗಕ್ಕೇರಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವಾಗಿ ವಿಜೃಂಭಿಸಿತು. ನಾಲ್ವಡಿಯವರ ನಂತರ ಯದುವಂಶದ 25ನೆಯ ಹಾಗೂ ಕಟ್ಟಕಡೆಯ ದೊರೆಯಾಗಿ ಅಧಿಕಾರಕ್ಕೆ ಬಂದ ಶ್ರೀ ಜಯಚಾಮರಾಜ ಒಡೆಯರ್ ಆಳ್ವಿಕೆ ಕಾಲದಲ್ಲಿ (1940–1947) ಇನ್ನಷ್ಟು ವೈಭವ ಪಡೆದುಕೊಂಡು ಜಾಗತಿಕ ಆಕರ್ಷಣೆ ಪಡೆಯಿತು. ಆದರೆ, 1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯಗಳಿಸಿದ ನಂತರ ರಾಜ ಮಹಾರಾಜರ ಸಂಸ್ಥಾನಗಳೆಲ್ಲವೂ ಭಾರತ ಸರ್ಕಾರದಲ್ಲಿ ವಿಲೀನವಾದವು. ಆದರೂ ಯಾವುದೇ ಅಡ್ಡಿಯಿಲ್ಲದೆ ಮೈಸೂರು ದಸರಾ ಆಚರಣೆ ನಡೆದುಕೊಂಡು ಬರುತ್ತಿತ್ತು. ಶ್ರೀ ಜಯಚಾಮರಾಜ ಒಡೆಯರು ರಾಜ ಪ್ರಮುಖರಾಗಿ ಹಿಂದಿನಂತೆ ಜಂಬೂಸವಾರಿಯಲ್ಲಿ ಭಾಗವಹಿಸುತ್ತಿದ್ದರು. 1962ರಲ್ಲಿ ರಾಜಧನ ಮತ್ತು ರಾಜತ್ವ ರದ್ದಾದಾಗ ಮೂರ್‍ನಾಲ್ಕು ವರ್ಷಗಳ ಕಾಲ ದಸರಾ ನಿಂತು ಹೋಗಿತ್ತು. ಆದರೆ, ಮೈಸೂರಿನ ಪ್ರಮುಖ ಕೈಗಾರಿಕೋದ್ಯಮಿ ಎಫ್.ಕೆ. ಇರಾನಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸರಳವಾಗಿ ದಸರಾ ಹಬ್ಬವನ್ನು ನಡೆಸಿಕೊಂಡು ಬರಲಾಯಿತು.

1980ರಲ್ಲಿ ಆರ್.ಗುಂಡೂರಾವ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದಾಗ ಭವ್ಯ ಪರಂಪರೆಯ ಮೈಸೂರು ದಸರಾ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿ ಅದರ ಉಸ್ತುವಾರಿಯನ್ನು ಸರ್ಕಾರವೇ ವಹಿಸಿಕೊಂಡಿತು. ಹಾಗಾಗಿ ಅಂದಿನಿಂದ ಇಂದಿನ ತನಕವೂ ನಾಡಹಬ್ಬವಾಗಿ ರಾಜ್ಯ ಸರ್ಕಾರದಿಂದಲೇ ಪ್ರತಿವರ್ಷ ಮೈಸೂರು ದಸರಾ ನಡೆಯುತ್ತಾ ಬಂದಿದೆ.


ರಾಜ ಪ್ರತ್ಯಕ್ಷ ದೈವವೆಂಬ ಭಾವನೆಯಿದ್ದ ಆ ಕಾಲದಲ್ಲಿ ಆಳರಸರದೇ ದರ್ಬಾರು. ಅಂದು ಅಂಬಾರಿಯಲ್ಲಿ ಸ್ವತಃ ಮಹಾರಾಜರೇ ಕೂರುತ್ತಿದ್ದರೆ ಇಂದು ಮೈಸೂರಿನ ಅಧಿದೇವತೆ ನಾಡದೇವಿ ಶ್ರೀ ಚಾಮುಂಡೇಶ್ವರಿ ಅಂಬಾರಿಯಲ್ಲಿ ಅಲಂಕೃತವಾಗಿ ಪೂಜಿಸಲ್ಪಡುತ್ತಾಳೆ. 750 ಕೆ.ಜಿ. ಭಾರದ ಬಂಗಾರದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ಸುಂದರ ಮೂರ್ತಿಯನ್ನು ಹೊತ್ತ ಗಜರಾಜನ ಗಾಂಭೀರ್ಯ ನಡಿಗೆಯಲ್ಲಿ ಮೈಸೂರು ರಾಜಬೀದಿಯಲ್ಲಿ ಸಾಗುವ ಮೈಸೂರು ದಸರೆಯ ಜಂಬೂಸವಾರಿ ನೋಡುವುದೇ ಮಹಾಹಬ್ಬ. ಹಾಗಾಗಿ ಈ ಮಹಾದೃಶ್ಯ ಕಾವ್ಯವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಿಯರೆಲ್ಲಾ ಸಾಗರದೋಪಾದಿಯಲ್ಲಿ ಮೈಸೂರಿನತ್ತ ಹರಿದು ಬರುತ್ತಾರೆ. ವಿಜಯದಶಮಿಯಂದು ಈ ಚಿನ್ನದ ಅಂಬಾರಿಯನ್ನು ದರ್ಶಿಸುವುದು ಮಹಾಪುಣ್ಯವೆಂಬ ಭಾವನೆ ಇಲ್ಲಿ ಬೇರೂರಿರುವುದರಿಂದ ಇದಕ್ಕೆ ದೈವೀಕಶಕ್ತಿಯದ್ದೆಂದು ಹೆಚ್ಚಿನ ಮಹತ್ವವುಂಟು. ವಿಜಯದಶಮಿ ವೈಭವದ ನವರಾತ್ರಿಯ ಮೈಸೂರು ದಸರಾ ಎಂದರೆ ಅದು ಜಂಬೂಸವಾರಿಯಷ್ಟೇ ಅಲ್ಲ. ಸಮಸ್ತ ನಾಡಿನ ಸಾಂಸ್ಕೃತಿಕ ಸಿರಿ ಸಂಪತ್ತಿನ ಮತ್ತು ನಾಡನ್ನಾಳಿದ ರಾಜ ಪರಂಪರೆಯ ಅನಾವರಣ. ಮೈಸೂರು ದಸರಾ ಉತ್ಸವದ ಉದ್ದಕ್ಕೂ ಇದರದ್ದೇ ಮಹಾದರ್ಶನ.

ನವರಾತ್ರಿಯ ಸಮಾರೋಪವಾಗಿ ವಿಜಯದಶಮಿಯಂದು ಮುಖ್ಯಮಂತ್ರಿಯಿಂದ ನಂದಿಕಂಬ ಪೂಜೆಯೊಡನೆ ಅಂಬಾರಿಯಲ್ಲಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಚಾಲನೆಗೊಂಡು ನಡೆಯುವ ಜಂಬೂಸವಾರಿ ಮೆರವಣಿಗೆ ಇಡೀ ನಾಡಿನ ಸಾಂಸ್ಕೃತಿಕ ಸಂಪತ್ತು ತೆರೆದುಕೊಳ್ಳುತ್ತದೆ. ಮಿಂಚಿ ಮೆರೆಯುತ್ತದೆ.

ನಂದಿಧ್ವಜ ಕುಣಿತ, ನಾದಸ್ವರ ವಾದನ, ಪ್ಯಾಲೇಸ್ ಬ್ಯಾಂಡ್, ಪೊಲೀಸ್ ಬ್ಯಾಂಡ್, ಆನೆ ಸಾರೋಟು, ಕುದುರೆ ಸಾರೋಟು, ಫಿರಂಗಿಗಳು, ಬೆಳ್ಳಿ ರಥ, ವಿವಿಧ ಪಲ್ಲಕ್ಕಿಗಳು, ಭಜನೆ ಮೇಳ, ಕರಗ, ವೀರಭದ್ರನ ಕುಣಿತ, ಕೀಲು ಕುದುರೆ, ಮಲ್ಲಗಂಬ, ವೇಷಗಾರರು, ಅಲಾವಿ ಕುಣಿತ, ವೀರಗಾಸೆ, ಝೂಂಜ್ ಪಥಕ್, ಗೊರವರ ಕುಣಿತ, ಜಗ್ಗಲಗೆ ಮೇಳ, ಹೆಜ್ಜೆ ಮೇಳ, ಗಾರುಡಿ ಗೊಂಬೆ, ಟಿಬೇಟಿಯನ್ ನೃತ್ಯ, ಚಿಟ್ ಮೇಳ, ಕೋಲಾಟ, ಮಲೆನಾಡು ಸುಗ್ಗಿಕುಣಿತ, ಕೊಡವ ಕುಣಿತ, ಪೂಜಾ ಕುಣಿತ, ಕಂಸಾಳೆ, ತಮಟೆ ವಾದನ, ಮರಗಾಲು ಕುಣಿತ, ಸೋಮನಕುಣಿತ, ಚಂಡೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ, ನಗಾರಿ ಮೇಳ, ಪಟಾ ಕುಣಿತ, ಕೊಂಬು ಕಹಳೆ, ಕರಡಿ ಮಜಲು, ಪಾಳೇಗಾರನ ವೇಷ, ದೊಣ್ಣೆವರಸೆ, ಕಂಗಿಲು ಕುಣಿತ, ಯಕ್ಷಗಾನ ವೇಷಧಾರಿಗಳು, ಜಡೆಕೋಲಾಟ, ಧ್ವಜ ಕುಣಿತ, ಚಿಟಿಕಿ ಭಜನೆ, ಒನಕೆ ನೃತ್ಯ, ಭೂತ ನೃತ್ಯ ಇವುಗಳೆಲ್ಲದರ ಮಹಾ ಸಂಗಮವಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯನ್ನೂ ಪ್ರತಿನಿಧಿಸುವ 30ಕ್ಕೂ ಹೆಚ್ಚು ವೈವಿಧ್ಯಮಯ ಸ್ತಬ್ಧಚಿತ್ರಗಳೊಡನೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಸಾಗುವ 'ಮೈಸೂರು ದಸರಾ' ಎಂಬ ಈ ಮಹಾ ಮೆರವಣಿಗೆ ಲಕ್ಷಾಂತರ ಜನರ ಕಣ್ಮನ ಸೆಳೆಯುತ್ತಾ ನಗರದಿಂದ ನಾಲ್ಕೈದು ಕಿ.ಮೀ. ದೂರವಿರುವ ಬನ್ನಿಮಂಟಪ ತಲುಪುತ್ತದೆ.

ಆಗ ಅಲ್ಲಿ ಪೊಲೀಸ್ ದಳದಿಂದ ಮನಮೋಹಕ, ಬಹು ರೋಚಕವಾದ ಟಾರ್ಚ್‌ಲೈಟ್ ಪರೇಡ್ (ಪಂಜಿನ ಕವಾಯತು) ಆರಂಭವಾಗುತ್ತದೆ. ಹಿಂದೆ ಮಹಾರಾಜರು ಸೈನಿಕರಿಂದ ಧ್ವಜವಂದನೆ ಸ್ವೀಕರಿಸುತ್ತಿದ್ದ ಮಾದರಿಯಲ್ಲೇ ಈಗ ಟಾರ್ಚ್‌ಲೈಟ್ ಪರೇಡ್‌ನಲ್ಲಿ ರಾಜ್ಯದ ರಾಜ್ಯಪಾಲರು ಧ್ವಜವಂದನೆ ಗೌರವ ಸ್ವೀಕರಿಸುತ್ತಾರೆ. ಟಾರ್ಚ್‌ಲೈಟ್ ಪರೇಡ್‌ನ ಚಿತ್ತಾಕರ್ಷಕ ಸಾಹಸಮಯ ವರ್ಣ ದೃಶ್ಯಗಳಂತೂ ವರ್ಣಿಸಲಸದಳ. ಲೇಸರ್ ಪ್ರದರ್ಶನ, ಅಶ್ವಾರೋಹಿಗಳ ಸಾಹಸ ಕಸರತ್ತು, ಹೊನಲು ಬೆಳಕಿನ ಮಾಯಾಲೋಕ, ಬಣ್ಣ ಬಣ್ಣದ ಬಾಣ ಬಿರುಸುಗಳ ಯಕ್ಷಲೋಕಗಳೆಲ್ಲವೂ ಒಮ್ಮೆಗೇ ಸೃಷ್ಟಿಗೊಂಡು ಇವುಗಳೊಂದಿಗೆ ಹತ್ತು ದಿನಗಳ ಒಟ್ಟಾರೆ ದಸರಾ ಕಾರ್ಯಕ್ರಮಗಳಿಗೆ ಮಂಗಳ ಹಾಡಲಾಗುತ್ತದೆ. ಈ ದಸರಾ ಸಂದರ್ಭದಲ್ಲಿ ಮೈಸೂರು ನಗರದ ದೊಡ್ಡಕೆರೆ ಮೈದಾನದಲ್ಲಿ ಸೃಷ್ಟಿಗೊಳ್ಳುವ 'ದಸರಾ ವಸ್ತುಪ್ರದರ್ಶನ' ಕೂಡ ಪ್ರವಾಸಿಗರನ್ನು ಆಕರ್ಷಿಸುವ ಕಿನ್ನರಲೋಕವಾಗಿ ಕಂಗೊಳಿಸುತ್ತದೆ.

ಪ್ರಬುದ್ಧ ಭಾರತವೇ ಸಂಘದ ದೃಢ ಸಂಕಲ್ಪ



–ವಿಜಯೇಂದ್ರ ಯಡಿಯೂರಪ್ಪ
ಬಿಜೆಪಿ ರಾಜ್ಯಾಧ್ಯಕ್ಷರು.

ನಮಸ್ತೇ ಸದಾವತ್ಸಲೇ ಮಾತೃಭೂಮಿ
ತ್ವಯಾ ಹಿಂದೂಭೂಮೇ ಸುಖಂ ವರ್ಧಿತೋಹಮ್
ಮಹಾಮಂಗಳೆ ಪುಣ್ಯಭೂಮಿ ತ್ವದರ್ಥೆ
ಪತತ್ವೇಷ ಕಾಯೋ ನಮಸ್ತೇ ನಮಸ್ತೇ

ನಿತ್ಯವೂ ಈ ಪ್ರಾರ್ಥನಾ ಗೀತೆಯನ್ನು ಪಠಿಸುತ್ತಾ ಬೆಳೆದವರು ನಾವು. ಸಂಸ್ಕೃತದಲ್ಲಿರುವ ಇದರ ಅರ್ಥ ಅತೀ ಸರಳ. 'ಪ್ರೀತಿಯ ಮಾತೃಭೂಮಿಗೆ ಸರ್ವದಾ ನಮಸ್ಕಾರಗಳು. ತನ್ನ ಮಗನಾದ ನನ್ನನ್ನು ಈ ಮಾತೃಭೂಮಿಯು ಸಂತೋಷದಿಂದ ಪೋಷಿಸಿದ್ದಾಳೆ. ಹಾಗಾಗಿ, ನಾವೆಲ್ಲರೂ ಆಕೆಗೋಸ್ಕರ ಈ ದೇಹವನ್ನು ಅರ್ಪಿಸುತ್ತೇವೆ...'.

ಈ ಭಾವದ ಪ್ರಾರ್ಥನೆ ಯಾರಿಗೆ ತಾನೆ ಇಷ್ಟವಾಗಲ್ಲ ಹೇಳಿ? ನಾವೆಲ್ಲರೂ ಬದುಕಿನಲ್ಲಿ ಕಲಿಯಲೇಬೇಕಾದ ಮೊದಲ ಸಂಸ್ಕಾರವಿದು. **'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ'** ಎಂದು ಪ್ರಭು ಶ್ರೀರಾಮಚಂದ್ರನು ತನ್ನ ತಮ್ಮ ಲಕ್ಷ್ಮಣನಿಗೆ ಬೋಧಿಸುವ ವಿವೇಕಕ್ಕೆ ಋಣಸಂದಾಯದಂತಿದೆ ಈ ಗೀತೆ. ಇದೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಧ್ಯೇಯ–ಮಂತ್ರ–ಸಮಸ್ತ ಹಿಂದೂ ಸಮಾಜದ ಸಂಘಟನೆ ಮತ್ತು ಹಿಂದೂ ಸಮಾಜದ ಸೇವೆಯನ್ನೇ ತನ್ನ ಪರಮ ಗುರಿಯಾಗಿ ಹೊಂದಿರುವ ಸಂಘಕ್ಕೆ ಈಗ ಶತಮಾನೋತ್ಸವ ಸಂಭ್ರಮ.


ಯಾವುದೇ ಸಂಘಟನೆ, ಸಂಸ್ಥೆ ಅವಿಚ್ಛಿನ್ನವಾಗಿ ಬೆಳೆದು, ಶತಮಾನದ ಗಡಿ ದಾಟಿ ಮುನ್ನಡೆಯುತ್ತಿದೆ ಎಂದರೆ, ಅದು ಸುಲಭದ ಮಾತಲ್ಲ. ತಲೆಮಾರುಗಳನ್ನು ಪ್ರಭಾವಿಸುತ್ತಾ ಕ್ರಿಯಾಶೀಲವಾಗಿ ಬೆಳೆಯುತ್ತಲೇ ಇದೆ ಎಂದರೆ ಅದರರ್ಥ–ಆ ಸಂಘಟನೆ ತಾನು ಸಂಘಟಿಸುತ್ತಿರುವ ಜನಸಮುದಾಯದ ಎಲ್ಲರನ್ನೂ, ಎಲ್ಲವನ್ನೂ ಒಳಗೊಳ್ಳುತ್ತಾ, ಎಲ್ಲರಿಗೂ ಒಳಿತು ಬಯಸುತ್ತಾ ಹಿಗ್ಗುತ್ತಿದೆ ಎಂದಲ್ಲವೇ? ಒಳಿತು–ಒಗ್ಗೂಡುವ ಅಂಶವೇ ಸಂಘದ ಪ್ರಭಾವವನ್ನು ಸಾರುತ್ತದೆ. ಇಷ್ಟೊಂದು ಸುದೀರ್ಘ ಅವಧಿಗೆ ಒಳಿತಿನ ಆಶಯದ ತೇರು ಎಳೆಯುವುದು ಕೂಡ ಸುಲಭದ ಮಾತಲ್ಲ. ಸಂಘಟಕರ ಸಮರ್ಪಣಾ ಮನೋಭಾವ ಹಾಗೂ ತಪಸ್ಸು ಅಡಗಿರುತ್ತದೆ. ತನ್ನ ಉದಾತ್ತ ಉದ್ದೇಶಕ್ಕಾಗಿ ತಾಯ್ನೆಲದ ಸಂರಕ್ಷಣೆಗಾಗಿ, ಬಿರುಕು ಕಾಣದ ವೃಕ್ಷವಾಗಿ ಶತಮಾನಗಳನ್ನು ಪೂರೈಸಿದ ಸಂಘಟನೆಯೊಂದು ವಿಶ್ವದಲ್ಲಿ ಇದ್ದರೆ, ನಿಸ್ಸಂಶಯವಾಗಿ ಹೇಳಬಹುದು, ಅದು– **ರಾಷ್ಟ್ರೀಯ ಸ್ವಯಂಸೇವಕ ಸಂಘ**.

1925ರ ವಿಜಯದಶಮಿಯ ದಿನ (ಸೆಪ್ಟೆಂಬರ್ 27) ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರು ಆರಂಭಿಸಿದ ಈ ಸಂಘಟನೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ, ಇನ್ನೂ ಬೆಳೆಯುತ್ತಲೇ ಇದೆ.


ಈಗಲೂ, ವಿಜಯದಶಮಿಯ ವಿಜಯ ಪ್ರೇರಣೆಯನ್ನು ಪಡೆದು ಬಹು ಎತ್ತರಕ್ಕೆ ಬೆಳೆಯುತ್ತಲೇ ಸಾಗಿದೆ. ಸಂಘ ಸಂಸ್ಕಾರ ಎಂದರೆ ಸಮರ್ಪಣೆ, ಸೇವೆ, ತ್ಯಾಗ, ಬಲಿದಾನಗಳಷ್ಟೆ. ಗುರೂಜಿ ಎಂದೇ ಪ್ರಸಿದ್ಧರಾಗಿರುವ ಮಾಧವರಾವ್ ಸದಾಶಿವರಾವ್ ಗೋಳ್ವಲ್ಕರ್ ಅವರು ಸಂಘದ 2ನೇ ಸರಸಂಘಚಾಲಕರು. ತಪಸ್ವಿಯಂತೆ ದೇಶದ ಉದ್ದಗಲಕ್ಕೂ ಸಂಚರಿಸಿ ಸಂಘವನ್ನು ಸಂಘಟಿಸಿದರು. ಸಂಘದ ಚಿಂತನೆ, ಸೈದ್ಧಾಂತಿಕ ದೃಷ್ಟಿಕೋನಕ್ಕೆ ಸ್ಪಷ್ಟ ಆಕಾರ ನೀಡಿದ ಮಹಾಪುರುಷರಿವರು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ಸ್ವಾತಂತ್ರ್ಯ ಚಳವಳಿಯಲ್ಲಿ ತನ್ನನ್ನು ಭಿನ್ನವಾಗಿಯೇ ತೊಡಗಿಸಿಕೊಂಡಿತು. ದೇಶ ಸ್ವಾತಂತ್ರ್ಯ ಆಗುವ ಜತೆಜತೆಗೆ ಹಿಂದುತ್ವ ಹಾಗೂ ಭಾರತೀಯತೆಯೂ ಉಳಿಯಬೇಕು ಎಂಬ ಮಹಾಸಂಕಲ್ಪದಿಂದಲೇ ಕೆಲಸ ಮಾಡಿತು. ಸ್ವಾತಂತ್ರ್ಯದ ಬಳಿಕವೂ ಭಾರತೀಯತೆ ಮತ್ತು ಭಾರತೀಯ ಸಂಸ್ಕೃತಿಗೆ ಧಕ್ಕೆ ಉಂಟಾಗುವುದನ್ನು ಮನಗಂಡು, ಹಿಂದೂ ಸಮಾಜದ ಏಳಿಗೆಗಾಗಿ ತನ್ನ ಸಾಂಸ್ಕೃತಿಕ ಹೋರಾಟವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರುತ್ತಲೇ ಇದೆ. ನೈಜ ಭಾರತೀಯತೆಯ ಅಸ್ತಿತ್ವ ಮತ್ತು ಅಸ್ಮಿತೆಯೇ ಸಂಘದ ಪರಮ ಧ್ಯೇಯ.


ಸಿದ್ಧಾಂತ ರಾಜಕಾರಣದಲ್ಲಿ ಎಂದಿಗೂ ರಾಜೀ ಮಾಡಿಕೊಳ್ಳದ ಸಂಘ, ಅದೇ ಮನಃಸ್ಥಿತಿಯ ಲಕ್ಷಾಂತರ ಕಾರ್ಯಕರ್ತರನ್ನು ತನ್ನ ಒಡಲಲ್ಲಿ ಕಟ್ಟಿಕೊಂಡು ದೇಶ ಕಟ್ಟುವ ಮಹಾಕಾರ್ಯಕ್ಕಾಗಿ ಅವಿರತವಾಗಿ ದುಡಿಯುತ್ತಲೇ ಇದೆ.



ಹೆಡಗೇವಾರ್



ಗೋಳ್ವಲ್ಕರ್



ವಾಜಪೇಯಿ



ನರೇಂದ್ರ ಮೋದಿ

ಕಳೆದ ಒಂದು ನೂರು ವರ್ಷಗಳಿಂದಲೂ ದೇಶ ಸೇವೆಯೇ ಮಾತೃಸೇವೆ ಎಂದು ಪರಿಭಾವಿಸಿ ರುವ ಲಕ್ಷಾಂತರ ಕಾರ್ಯಕರ್ತರು ಸನಾತನ ಭಾರತೀಯ ಧರ್ಮದ ಸಂಸ್ಕೃತಿಗಾಗಿ ಸೇವೆ ಮಾಡುತ್ತಲೇ ಇದ್ದಾರೆ. ಇದೊಂದು ರೀತಿ ನೈಜ ಭಾರತ ಕಟ್ಟುವ ಕೈಂಕರ್ಯವಲ್ಲದೇ ಮತ್ತೇನೂ ಅಲ್ಲ.ಇವರ ಸೇವೆಯಾದರೂ ಹೇಗಿದೆ ಗೊತ್ತೆ? 'ಎಲೆಯ ಮರೆಯಲರಳಿ ನಗುವ ಸುಮನ ರಾಶಿಯಂದದಿ, ಕಡಲ ಒಡಲಳುಕ್ಕಿ ನಗುವ ಕೋಟಿ ಅಲೆಗಳಂದದಿ, ವಿಮುಖರಾಗಿ ಖ್ಯಾತಿಗೆ, ಪ್ರಚಾರಕೆ ಪ್ರಶಂಸೆಗೆ...' ಎಂಬ ಸಂಘದ ಗೀತೆಯಂತಿದೆ.

ಸಂಘ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಆಳುವ ವ್ಯವಸ್ಥೆಯಿಂದ ಹಾಗೂ ವಿದ್ರೋಹಿ ಶಕ್ತಿಗಳಿಂದ ನಿರಂತರ ಕಿರುಕುಳ, ಅಪಪ್ರಚಾರಗಳನ್ನು ಎದುರಿಸುತ್ತಲೇ ಬಂದಿದೆ. ಸ್ವಾರ್ಥ ರಾಜಕಾರಣ ದಶಕಗಳ ಕಾಲ ಸಂಘದ ಮೇಲೆ ಕೆಂಗಣ್ಣು ಬೀರಿ ಇನ್ನಿಲ್ಲದ ಅಡ್ಡಿ–ಆತಂಕಗಳನ್ನು ಸೃಷ್ಟಿ ಮಾಡಿದೆ, ಮಾಡುತ್ತಲೇ ಇದೆ. ಆದರೆ ತಪಸ್ವೀ ಶಕ್ತಿ, ಶ್ರದ್ಧೆ, ಗುರಿ ತಲುಪಬೇಕೆಂಬ ನಿಸ್ವಾರ್ಥದ ಸಂಕಲ್ಪ ಹೊತ್ತ ಲಕ್ಷಾಂತರ ಕಾರ್ಯಕರ್ತರ ಏಕ ಮನಃಸ್ಥಿತಿಯ ಸಂಘಟನೆಯ ಮಹಾಕೋಟೆಯ ನಡುವೆ ಯಾವ ದುಷ್ಟ ಶಕ್ತಿಯೂ ಒಂದು ಸಣ್ಣ ಬಿರುಕನ್ನು ಮೂಡಿಸಲು ಈವರೆವಿಗೂ ಸಾಧ್ಯವಾಗಿಲ್ಲ.

ಮೊಘಲರ ಕಾಲದಿಂದಲೂ ದೇಶದ ಸಂಸ್ಕೃತಿಯ ಮೇಲೆ ದೌರ್ಜನ್ಯ ನಡೆದಿದೆ, ಹಿಂದೂ ಪರಂಪರೆಯ ಮೇಲೆ ದಬ್ಬಾಳಿಕೆ ನಡೆದಿದೆ. ದೇವಾಲಯಗಳನ್ನು ವಿರೂಪಗೊಳಿಸಿ, ವಜ್ರ–ವೈಢೂರ್ಯಗಳನ್ನು ದರೋಡೆ ಮಾಡಿದ ಅಮಾನುಷ ಆಕ್ರಮಣವನ್ನು ಈ ದೇಶ ಕಂಡಿದೆ. ಬ್ರಿಟಿಷರ ಆಳ್ವಿಕೆಯಲ್ಲೂ ಒಡೆದು ಆಳುವ ನೀತಿ ನಿರಂತರವಾಗಿ ಅನುಸರಣೆ ಆಯಿತು. ಅದಕ್ಕೆ ನಮ್ಮವರೇ ಒತ್ತಾಸೆ ಆದರು ಎಂಬುದನ್ನು ಇತಿಹಾಸ ಸಾರಿ ಸಾರಿ ಹೇಳುತ್ತದೆ. ಹೀಗೆ ಹೊರಗಿನ ಹಾಗೂ ಒಳಗಿನ ಶತ್ರುಗಳನ್ನು ಎದುರಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಉದಾತ್ತ ಉದ್ದೇಶವನ್ನು ಬೆನ್ನಿಗೆ ಕಟ್ಟಿಕೊಂಡು ಗಟ್ಟಿಯಾಗಿ ನಿಂತಿದೆ. ಹಿಂದೂ ಸಮಾಜದ ಕ್ಷೇಮಕ್ಕಾಗಿ ಶ್ರಮಿಸುತ್ತಲೇ ಇದೆ.

ಪ್ರಾಯಶಃ ಪ್ರಪಂಚದ ರಾಜಕೀಯ ಇತಿಹಾಸದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೇಲೆ ನಡೆದಷ್ಟು ದಾಳಿ, ಅಪಪ್ರಚಾರ, ಪಿತೂರಿ, ಹುನ್ನಾರ ಇನ್ಯಾವ ಸಂಘಟನೆಯ ವಿರುದ್ಧವೂ ನಡೆದ ಉದಾಹರಣೆಗಳು ಸಿಗುವುದಿಲ್ಲ. ಈ ರೀತಿ ದಾಳಿಗೆ ತುತ್ತಾದ ಬಹುತೇಕ ಸಂಘಟನೆಗಳು ನಿರ್ನಾಮವಾಗಿ ಹೋಗಿವೆ. ಆದರೆ ಅಂತಹ ಆಕ್ರಮಣ ಎದುರಿಸಿಯೂ ಬಂಡೆಕಲ್ಲಿನಂತೆ ನಿಂತು, ಅಪ್ಪಳಿಸಿ ಬಂದ ದುಷ್ಟ ಅಲೆಗಳನ್ನು ಹಿಮ್ಮೆಟ್ಟಿಸಿ ಬೃಹದಾಕಾರವಾಗಿ ಬೆಳೆದು ನಿಂತಿದ್ದರೆ, ಅದು ಸಂಘ ಮಾತ್ರ.

ಇಂದು ಆರ್‌ಎಸ್‌ಎಸ್ ಶತಮಾನೋತ್ಸವ: ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಷಣ


ನವದೆಹಲಿಯ ಡಾ. ಅಂಬೇಡ್ಕರ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಇಂದು ನಡೆಯಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ರಾಷ್ಟ್ರ ನಿರ್ಮಾಣಕ್ಕೆ ಆರ್‌ಎಸ್‌ಎಸ್ ಕೊಡುಗೆಯನ್ನು ಎತ್ತಿ ತೋರಿಸುವ ವಿಶೇಷ ಸ್ಮರಣಾರ್ಥ ಅಂಚೆ ಚೀಟಿ ಮತ್ತು ನಾಣ್ಯವನ್ನು ಬಿಡುಗಡೆ ಮಾಡಿ, ಸಭೆಯನ್ನುದ್ದೇಶಿಸಿಯೂ ಮಾತನಾಡಲಿದ್ದಾರೆ. 1925ರಲ್ಲಿ ಮಹಾರಾಷ್ಟ್ರದ ನಾಗ್ಪುರದಲ್ಲಿ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರಿಂದ ಆರ್‌ಎಸ್‌ಎಸ್ ಸ್ಥಾಪಿಸಲ್ಪಟ್ಟಿತು.


ಸಂಘದ ಸಿದ್ಧಾಂತ ಭಾರತೀಯತೆಯನ್ನು ಉಳಿಸುವುದು, ಭಾರತೀ ಯತೆ ಎಂದರೆ ವಿವಿಧತೆಯಲ್ಲಿ ಏಕತೆ. ಈ ವಿವಿಧತೆಯಲ್ಲಿ ಏಕತೆ ಎಂಬ ಆಶಯವನ್ನು ಕೆಲವರು ಅರ್ಥೈಸುವ ಪರಿಯೇ ಬೇರೆ. ಕೆಲವು ಧರ್ಮಗಳು ಏಕ ಸಂಸ್ಕೃತಿ ಮತ್ತು ದೈವಾರಾಧನೆಗೆ ಮೀಸಲಾಗಿರುತ್ತವೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಸನಾತನ ಹಿಂದೂ ಧರ್ಮ ನೂರಾರು ಭಾಷೆಗಳು, ಸಂಸ್ಕೃತಿಗಳು, ಪದ್ಧತಿ, ಸಂಪ್ರದಾಯಗಳನ್ನು ತನ್ನ ಮಡಿಲಿನಲ್ಲಿಟ್ಟು ಕೊಂಡು ಇಡೀ ವಿಶ್ವಕ್ಕೆ ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತಿದೆ.

ಹಾಗೆ ನೋಡಿದರೆ, ರಾಷ್ಟ್ರೀಯ ಸ್ವಯಂಸೇವಕ ಸಂಘ ರಾಜಕೀಯ ಅಧಿಕಾರಕ್ಕಾಗಿ ಜನ್ಮ ತಾಳಿದ್ದಲ್ಲ, ಅಧಿಕಾರ ರಾಜಕೀಯವನ್ನು ಓಲೈಸುವ ಕಾರಣಕ್ಕಾಗಿ ತನ್ನ ಚಟುವಟಿಕೆಯನ್ನು ಪ್ರಾರಂಭಿಸಲಿಲ್ಲ. ಗಾಂಧೀಜಿ ನೇತೃತ್ವದಲ್ಲಿ ನಡೆದ ಹೋರಾಟ ದೇಶಕ್ಕೆ ರಾಜಕೀಯ, ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಆದರೆ, ಭಾರತ ಪರಿಪೂರ್ಣ ಭಾರತೀಯವಾಗಿರಬೇಕು ಎಂಬುದು ಸಂಘದ ಉದ್ದೇಶವಾಗಿತ್ತು. ಶತಮಾನಗಳಿಂದ ರಾಮಜನ್ಮ ಭೂಮಿಯಲ್ಲಿ ಮಂದಿರ ಕಟ್ಟುವ ಕಾರ್ಯ ಕೈಗೂಡಲೇ ಇಲ್ಲ. ಭಾರತದ ಕಿರೀಟ ಎಂದು ಹೆಮ್ಮೆಪಡುವ ಕಾಶ್ಮೀರವನ್ನು ಆರ್ಟಿಕಲ್ 370 ಹೆಸರಿನಲ್ಲಿ ಕೆಲವು ಶಕ್ತಿಗಳು ತಮ್ಮ ಮುಷ್ಟಿಯಲ್ಲಿರಿಸಿಕೊಂಡಿದ್ದವು. ಕಾಶ್ಮೀರವನ್ನು ಉಳಿಸಿಕೊಳ್ಳುವುದು ಭಾರತಾಂಬೆಯ ಸಿರಿ ಕಿರೀಟವನ್ನು ರಕ್ಷಿಸಿದಂತೆ ಎಂದು ಭಾವಿಸಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವುದು ಶತಕೋಟಿ ಭಾರತೀಯರ ಸ್ವಾಭಿಮಾನ ಹಾಗೂ ಸಂಸ್ಕೃತಿಯ ಅಸ್ತಿತ್ವದ ಪುನರುತ್ಥಾನ ಎಂದು ಬಗೆದಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘ.

ಈ ನಿಟ್ಟಿನಲ್ಲಿ ಶತಮಾನಗಳಿಂದ ಸಂಘ ಅಂದುಕೊಂಡ ಉದ್ದೇಶಗಳು ಚಾರಿತ್ರಿಕವಾಗಿ ಗುರಿ ತಲುಪಿವೆ. ಅಂದುಕೊಂಡಿರುವ ಇನ್ನಷ್ಟು ಯೋಜನೆಗಳು ಕೈಗೂಡಬೇಕಿವೆ. ಪರಂಪರೆಯ ಭಾರತಕ್ಕೆ ಪರಿಪೂರ್ಣತೆಯ ಕವಚ ತೊಡಿಸಬೇಕೆಂಬುದೇ ಸಂಘದ ಮೂಲ ಉದ್ದೇಶವಾಗಿದೆ. ಸಂಘ ಯಾರ ದ್ವೇಷಿಯೂ ಅಲ್ಲ, ಆದರೆ ಭಾರತವನ್ನು ದ್ವೇಷಿಸುವವರು, ಭಾರತೀಯ ಸಂಸ್ಕೃತಿಯನ್ನು ದಮನ ಮಾಡುವವರಿಗೆ ಸಂಘಟನೆಯ ಶಕ್ತಿ ಸಿಂಹಸ್ವಪ್ನವಾಗಿದೆ. ಭಾರತೀಯತೆ ಒಪ್ಪಿ, ಅಪ್ಪಿ ಭಾರತವನ್ನು ಗೌರವಿಸುವ ಯಾವುದೇ ಧರ್ಮದವರಾಗಲೀ ಅವರೆಲ್ಲರನ್ನೂ ಗೌರವಿಸುವಂತಹ ಔದಾರ್ಯವೂ ಸಂಘಕ್ಕೆ ಇದ್ದೇ ಇದೆ. ಆದರೆ ಭಾರತೀಯತೆಯ ಮೇಲೆ ಸವಾರಿ ಮಾಡಲು ಬಂದರೆ ಅದನ್ನು ಸಹಿಸುವ ಪ್ರಶ್ನೆಯೇ ಇಲ್ಲ ಎನ್ನುವುದು ಸಂಘದ ಪರಮ ಧ್ಯೇಯವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರಂತಹ ರಾಷ್ಟ್ರಭಕ್ತ ಪ್ರಧಾನಿಯನ್ನು ಈ ದೇಶಕ್ಕೆ ಕೊಡಮಾಡಿದ ಕೀರ್ತಿಯೂ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸಲ್ಲಬೇಕು. ಅಟಲ್ ಬಿಹಾರಿ ವಾಜಪೇಯಿಯಂತಹ ಒಬ್ಬ ಸಂತ ನಡೆಯ ಮಹಾನ್ ರಾಷ್ಟ್ರಭಕ್ತ ಮೇಧಾವಿ ಪ್ರಧಾನಿಯನ್ನು ಈ ದೇಶ ಪಡೆಯುವಂತಹ ಸೌಭಾಗ್ಯಕ್ಕೆ ಕಾರಣವೂ ರಾಷ್ಟ್ರೀಯ ಸ್ವಯಂಸೇವಕ ಸಂಘ. ಇದೇ ಹಾದಿಯಲ್ಲಿ ದೇಶದಲ್ಲಿ ನೂರಾರು ಮುಂಚೂಣಿ ನಾಯಕರನ್ನು, ರಾಷ್ಟ್ರಭಕ್ತ ಸೇನಾನಿಗಳನ್ನು ಈ ದೇಶಕ್ಕೆ ಕೊಡಮಾಡುವ ಮೂಲಕ ಈ ದೇಶವನ್ನು ಕಟ್ಟುವ ಆ ಮೂಲಕ ಭಾರತಾಂಬೆಯ ಮಡಿಲಲ್ಲಿ ಈ ದೇಶವನ್ನು ಸುಭದ್ರವಾಗಿಸಿ, ಭಾರತಾಂಬೆಯ ಕೀರ್ತಿ ಪತಾಕೆ ವಿಶ್ವದೆಲ್ಲೆಡೆ ಪಸರಿಸಬೇಕೆಂಬ ಪರಮ ಧ್ಯೇಯ ತೊಟ್ಟು ಮುನ್ನಡೆಯುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ, ಭಾರತದ ಅಸ್ತಿತ್ವ ಇರುವವರೆಗೂ ಶಾಶ್ವತವಾಗಿ ಬಾನೆತ್ತರದಲ್ಲಿ ಮಿನುಗಲಿದೆ, ನೈಜ ಭಾರತೀಯತೆಯನ್ನು ವಿಶ್ವ ಭೂಪಟದಲ್ಲಿ ವಿಸ್ತರಿಸಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com





ಪತ್ರಿಕಾ ಪ್ರಕಟಣೆ

ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ. ಮರಿಪೆದ್ದ ಪುರುಷೋತ್ತಂ ಬಿನ್ ಮರಿಪೆದ್ದ ಶ್ರೀನಿವಾಸಲು, ವಯಸ್ಸು ಸುಮಾರು 37 ವರ್ಷ, ವಾಸ ನಂ.2-963-3, ಮಲ್ಲಿನೂರು ರೋಡ್, ತಾಡಿಪತ್ರಿ ಆಂಧ್ರ ಪ್ರದೇಶ್-515411 ರವರು ಷೆಡ್ಯೂಲ್ ನಲ್ಲಿ ಕಾಣಿಸಿರುವ ಸ್ವತ್ತನ್ನು ಖರೀದಿಸುತ್ತಿದ್ದು, ಸದರಿ ಷೆಡ್ಯೂಲ್ ಸ್ವತ್ತು ಶ್ರೀ.ವೈ. ಸೂರ್ಯ ಪ್ರಕಾಶ್ ರವರಿಗೆ ದಿನಾಂಕ 10/01/1991 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿದ್ದು, ತದನಂತರ ಸದರಿ ಸ್ವತ್ತಿನ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಕಟ್ಟಡ ಸಂಪೂರ್ಣಗೊಂಡ ದೃಢೀಕರಣ ಪತ್ರವನ್ನು ಪಡೆದು ಸದರಿ ಸ್ವತ್ತಿನ ಕಂದಾಯವನ್ನು ಪಾವತಿಸಿಕೊಂಡು ಬಂದಿದ್ದು, ಇವರು ದಿನಾಂಕ 14/12/2012 ರಂದು ಮರಣ ಹೊಂದಿದ್ದು, ತದನಂತರ ಇವರ ಧರ್ಮಪತ್ನಿಯಾದ ಶ್ರೀಮತಿ. ವೈ.ಎಸ್. ಉಷಾರಾಣಿ, ಅಶ್ವಿನ್.ಎಸ್.ಎಸ್ ಯಡಾಳಂ ರವರಿಗೆ ದಿನಾಂಕ 27/08/2013 ರಂದು ಖಾತೆ ವರ್ಗಾವಣೆಯಾಗಿದ್ದು, ಸದರಿಯವರಿಂದ ದಿನಾಂಕ **28/08/2013** ರಂದು **ಸಂದೀಶ್.ಎಸ್.ಎಂ** ರವರು ಸದರಿ ಷೆಡ್ಯೂಲ್ ಸ್ವತ್ತನ್ನು ಖರೀದಿಸಿದ್ದು, ನಂತರ **ಸಂದೀಶ್.ಎಸ್.ಎಂ** ರಿಂದ **ಡಾ|ರವಿ ಚೇತನ್ ಕುಮಾರ್.ಎ.ಎನ್** ಬಿನ್ ನಾರಾಯಣ್.ಎ.ಸಿ ರವರು ದಿನಾಂಕ 12/05/2022 ರಂದು ಕ್ರಯಕ್ಕೆ ಪಡೆದಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ. ಈಗ ಸದರಿ ಸ್ವತ್ತನ್ನು ನನ್ನ ಕಕ್ಷಿದಾರರು ಖರೀದಿಸುತ್ತಿದ್ದು, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಭಾಗಾಂಶ, ಆಧಾರ, ಭೋಗ್ಯ, ಜೀವನಾಂಶ, ಕ್ರಯದ ಕರಾರು ಮತ್ತು ನ್ಯಾಯಾಲಯದಿಂದ ತಡೆಯಾಜ್ಞೆ ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಗೊಂಡ 7 ದಿನಗಳ ಒಳಗಾಗಿ ಯಾರಾದರೂ ತಂಟೆ, ತಕರಾರು ಇದ್ದಲ್ಲಿ ಮೇಲೆ ಸೂಚಿಸಿರುವ ವಕೀಲರ ಮೊಬೈಲ್‌ನಲ್ಲಾಗಲೀ ಅಥವಾ ಅವರನ್ನು ಅವರ ಕಛೇರಿಯಲ್ಲಿ ಖುದ್ದು ಭೇಟಿಯಾಗಿ ಸಂಪೂರ್ಣ ದಾಖಲಾತಿಗಳ ಜೊತೆಗೆ ತಮ್ಮ ತಕರಾರನ್ನು 07 ದಿನಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಸದರಿ 07 ದಿನಗಳ ಅವಧಿ ಮುಗಿದನಂತರ ಯಾವುದೇ ತಂಟೆ, ತಕರಾರು ಬಂದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ ಬಡಾವಣೆ, 'ಹೆಚ್' ಬ್ಲಾಕ್, ಹಳೇ ವಾರ್ಡ್ ನಂ.18, ಹೊಸ ವಾರ್ಡ್ ನಂ.58, ಇ-ಸ್ವತ್ತಿನ ಸಂಖ್ಯೆ.18-9-815-166, ಮನೆ ನಂ.ಹೆಚ್.ಐ.ಜಿ-435 ರ ಪೈಕಿ ಪೂರ್ವ-ಪಶ್ಚಿಮ 18.00 ಮೀಟರ್ ಮತ್ತು ಉತ್ತರ-ದಕ್ಷಿಣ 12.00 ಮೀಟರ್, ಒಟ್ಟು ವಿಸ್ತೀರ್ಣ 216 ಚದರ ಮೀಟರ್‌ವುಳ್ಳ ನೆಲ ಅಂತಸ್ತು ಮತ್ತು ಮೊದಲನೇ ಅಂತಸ್ತಿನ ಮನೆಗೆ **ಚೆಕ್ಕಬಂದಿ: ಪೂರ್ವಕ್ಕೆ : 9 ಮೀಟರ್ ರಸ್ತೆ, ಪಶ್ಚಿಮಕ್ಕೆ : ಹೆಚ್.ಐ.ಜಿ ಮನೆ ನಂ.453, ಉತ್ತರಕ್ಕೆ : ಹೆಚ್.ಐ.ಜಿ ಮನೆ ನಂ.437, ದಕ್ಷಿಣಕ್ಕೆ : ಹೆಚ್.ಐ.ಜಿ ಮನೆ ನಂ.435.**

Sd/- G. KUMARA, B.Com., GDC, LLB,
Advocate, KAR 1852/2002, Mob: 9880552338
39/1, Ground Floor, 5th Cross, 4th Main Road,
Jayanagara, Mysore-14

ದಿನಾಂಕ: 30-9-2025

IN THE COURT OF SENIOR CIVIL JUDGE AT VIRAJPET
O. S. NO: 6/2016

Plaintiffs: Sri. Devenira Muthanna and others

-Vs-

Defendants: Devenira K. Rohith and others

NOTICE TO THE Defendants No's 25(a) and 25(b)

25)(a)D. P. Laveena aged 35 years W/o D. M. Ponnappa Bavalai Village, Parane Post, Virajpet Taluk

25(b)D. P. Kanvitha aged 3 years D/o D. M. Ponnappa minor represented by her mother and natural guardian D25(a) Bavali Village, Parane Post, Madikeri Taluk

The Defendants No's 25(a) and 25(b) are hereby notified that the Plaintiffs have filed the above Suit for the relief of Partition. The case is posted to 3-11-2025 for your appearance.

Hence these Defendants are hereby notified to appear before this Hon'ble Court either personally or through Advocate on 3-11-2025 at 11.a.m. failing which the case will proceed placing you exparte.

Sd/- I. R. Pramod,
Advocate, Virajpet

By order of Court
Sd/- CHIEF MINISTERIAL OFFICER,
JMFC COURT, VIRAJPET.

Date: 30.9.2025, Place: Virajpet

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ ಶ್ರೀಮತಿ ಸಾಯರ ಬಾನು, ಕೋಂ ಜಮೀರ್ ಬೇಗ್ ರವರು ಷೆಡ್ಯೂಲ್ ಸ್ವತ್ತನ್ನು ಶ್ರೀ ಎಂ.ಎ.ಕೆ. ಸೂರ್ಯಾಣಿ, ಬಿನ್ ಲೇಟ್ ಅಬ್ದುಲ್ ರಹೀಂ ಖಾನ್‌ರವರಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ.

ಸದರಿ ಸ್ವತ್ತು ಲೇಟ್ ಅಬ್ದುಲ್ ರಹೀಂ ಖಾನ್ ರವರ ಸ್ವಯಾರ್ಜಿತವಾದ ಸ್ವತ್ತಾಗಿದ್ದು, ಅವರು ಶ್ರೀಮತಿ ನೂರ್ ಬೀ ಅಮ್ಮ ರವರಿಂದ ದಿನಾಂಕ: 20-06-1946 ರಂದು ಕ್ರಯವಾಗಿ ಪಡೆದು, ಸದರಿ ಕ್ರಯ ಪತ್ರವು 690ನೇ ನಂಬರಾಗಿ, ನಂತರ ಮೇಲ್ಕಂಡ ಶ್ರೀ ಎಂ.ಎ.ಕೆ. ಸೂರ್ಯಾಣಿ ರವರಿಗೆ ಅವರ ತಂದೆಯಾದ ಅಬ್ದುಲ್ ರಹೀಂ ಖಾನ್ ರವರಿಂದ ವಿಲ್ ಯಾ ಮರಣ ಶಾಸನ ಪತ್ರದ ಮೂಲಕ ಬಂದು, ಸದರಿ ವಿಲ್ ದಿನಾಂಕ : 06-10-1997 ರಂದು ಖಾತೆ ಕೆ.ಟಿ. ನಂಬರ್ 26/81-82 ಆಗಿದ್ದು, ಪಿ.ಐ.ಡಿ. ನಂಬರ್ 177423 ರ ಮೂಲಕ ಕಂದಾಯವನ್ನು ಪಾವತಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತು ನನ್ನ ಕಕ್ಷಿದಾರರ ಸ್ವತ್ತಿನ ಮೇಲೆ ಇವರಿಗಲ್ಲದೇ ಇವರ ಅಣ್ಣ, ತಮ್ಮ, ಅಕ್ಕ, ತಂಗಿ ಮತ್ಯಾರಿಗೂ, ಯಾವ ಬ್ಯಾಂಕಿಗಳಿಗೂ, ಹಣಕಾಸು ಸಂಸ್ಥೆಗಳಿಗೂ ಮತ್ತು ಸಹಕಾರ ಸಂಸ್ಥೆಗಳಿಗೂ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಅಭ್ಯಂತರ ಇದ್ದರೇ ಅವರು ಈ ನೋಟಿಸ್ ಪಡೆದ 15 ದಿನಗಳೊಳಗೆ ಸಂಬಂಧಿತ ದಾಖಲಾತಿಗಳ ಸಮೇತ ಈ ಕೆಳಗೆ ಸಹಿ ಮಾಡಿರುವ ನನಗೆ ಬಂದು ಭೇಟಿ ಮಾಡತಕ್ಕದ್ದು, ಇಲ್ಲದಿದ್ದಲ್ಲಿ ಈ ಸ್ವತ್ತಿನ ಮೇಲೆ ಯಾವುದೇ ರೀತಿಯ ತಂಟೆ-ತಕರಾರುಗಳಿಲ್ಲ ಎಂದು ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಮೇಲ್ಕಂಡ ರವರಿಂದ ಖರೀದಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಕಾನ್ವೆಂಟ್ ರಸ್ತೆ, ಮನೆ ನಂಬರ್ 3115, ಹೊಸ ನಂಬರ್ ಎಲ್-13 ಕ್ಕೆ ಚೆಕ್ಕು ಬಂದಿ: ಇದರ ಅಳತೆ 864 ಚ. ಅಡಿಗಳು. ಪೂರ್ವಕ್ಕೆ : ಮನ್ಸೂರ್ ಅಹ್ಮದ್‌ರವರ ಸ್ವತ್ತು, ಪಶ್ಚಿಮಕ್ಕೆ: ತಾಜುನ್ನೀಸಾ ರವರ ಸ್ವತ್ತು, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಹುಸ್ಸೇನ್ ರವರ ಸ್ವತ್ತು.

Sd/- Ayub Ahmed Khan, B.A., LL.B., Advocate, #3159, M-327, 1st Floor, Ayub Complex, Sunni Chowk Circle, Mandi Mohalla, Mysore-570 001. Mob: 9880660318, 9342113452. Email: associatelaw988@gmail.com

ಸ್ಥಳ: ಮೈಸೂರು
ದಿನಾಂಕ: 30-09-2025



ಮೈಸೂರು ಮಿತ್ರ ಬುಧವಾರ 1 ಅಕ್ಟೋಬರ್ 2025

ಏಕಕಾಲದಲ್ಲಿ ಕರಾಟೆ, ಕುಸ್ತಿ, ಬಾಕ್ಸಿಂಗ್, ಕಿಕ್ ಬಾಕ್ಸಿಂಗ್‌ನೊಂದಿಗೆ

ಗಮನಸೆಳೆದ ದಸರಾ ಮಿಶ್ರ ಸಮರ ಕಲೆ



ದಸರಾ ಮಿಶ್ರ ಸಮರ ಕಲೆ ಮೂಲಕ ಸ್ಫೂರ್ತಿ, ದುರ್ಗಾ ನಡುವಿನ ಕಾದಾಟ ಎಲ್ಲರ ಗಮನ ಸೆಳೆಯಿತು.

ಮೈಸೂರು,ಸೆ.30(ಜಿಎ)–ಕರಾಟೆ, ಕುಸ್ತಿ, ಬಾಕ್ಸಿಂಗ್, ಕಿಕ್ ಬಾಕ್ಸಿಂಗ್ ವಿವಿಧ ಸಮರ ಕಲೆಗಳನ್ನು ಏಕಕಾಲದಲ್ಲಿ ಪ್ರದರ್ಶಿಸುವ ಮೂಲಕ ಎದುರಾಳಿಯನ್ನು ಕಟ್ಟಿ ಹಾಕಿದ ಮಿಶ್ರ ಸಮರ ಕಲೆ ಎಲ್ಲರ ಗಮನ ಸೆಳೆಯಿತು.

ದಸರಾ ಕ್ರೀಡಾ ಕೂಟದ ಅಂಗವಾಗಿ ಮೈಸೂರಿನ ಮಹಾರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಮಿಕ್ಸ್ಡ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿದ್ದ ಮಿಶ್ರ ಸಮರ ಕಲೆ ಸ್ಪರ್ಧೆಯಲ್ಲಿ ರಾಜ್ಯದ ನಾನಾ ಜಿಲ್ಲೆಗಳಿಂದ ಭಾಗವಹಿಸಿದ್ದ ಸ್ಪರ್ಧಿಗಳು ಒಂದೇ ಪಂದ್ಯದಲ್ಲಿ ಕರಾಟೆ, ಕುಸ್ತಿ, ಬಾಕ್ಸಿಂಗ್, ಕಿಕ್ ಬಾಕ್ಸಿಂಗ್ ಮೊದಲಾದ ಪ್ರತ್ಯೇಕ ಸಮರ ಕಲೆ ಬಳಸಿಕೊಂಡು ಎದುರಾಳಿಯನ್ನು ಕಟ್ಟಿಹಾಕಿದರು.

ಮಹಾರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಮಿಕ್ಸ್ಡ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ವತಿಯಿಂದ ಸ್ಪರ್ಧಾಳುಗಳಿಗೆ ಯಾವುದೇ ರೀತಿ ಪೆಟ್ಟಾಗದಂತೆ ಅಚ್ಚುಕಟ್ಟಾಗಿ ಅಂಕಣವನ್ನು ಸಿದ್ಧಪಡಿಸಲಾಗಿತ್ತು. ಪೆಟ್ಟಾದರೆ, ತಕ್ಷಣ ಪ್ರಥಮ ಚಿಕಿತ್ಸೆ ನೀಡಲು ಅಂಬ್ಯುಲೆನ್ಸ್ ಸಿದ್ಧವಾಗಿತ್ತು. ಹಾಗೇ ಪಂದ್ಯಾವಳಿಯ ತೀರ್ಪುಗಾರರಾಗಿ ಅಬ್ದುಲ್ ಮುನೀರ್ ಅವರನ್ನು ನೇಮಕ ಮಾಡಲಾಗಿತ್ತು.

ಪಂದ್ಯಾವಳಿ ಮೈಸೂರಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸ್ಥಳೀಯ ಸ್ಪರ್ಧಾಳುಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿತ್ತು. ಬೆಂಗಳೂರು, ಮೈಸೂರು, ಹಾಸನ, ಚಾಮರಾಜನಗರ ನಾನಾ ಭಾಗದ 18 ವರ್ಷ ಮೇಲ್ಪಟ್ಟ 68 ಯುವಕರು, 6 ಯುವತಿಯರು ಸೇರಿದಂತೆ 80 ಮಂದಿ ಸ್ಪರ್ಧಾಳುಗಳು ಭಾಗವಹಿಸಿದ್ದರು. ಪಂದ್ಯಾವಳಿಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಹಾಸನ ರಘು ಚಾಲನೆ ನೀಡಿದರು.

ಮೊದಲ ಪಂದ್ಯದಲ್ಲಿ ಮೈಸೂರಿನ ಯುವತಿಯರಾದ ಸ್ಫೂರ್ತಿ ಮತ್ತು ದುರ್ಗಾ 9 ನಿಮಿಷ ಸೆಣಸಾಟ ನಡೆಸಿದರು. ಪ್ರತಿ ಮೂರು ನಿಮಿಷಗಳಿಗೆ ವಿಶ್ರಾಂತಿ ನೀಡಲಾಗಿತ್ತು. ಅಂತಿಮವಾಗಿ ಮಿಶ್ರ ಸಮರ ಕಲೆಗಳನ್ನು ಬಳಸಿಕೊಂಡ ದುರ್ಗಾ ಮೊದಲ ಪಂದ್ಯದಲ್ಲಿ ವಿಜೇತರಾದರು.

ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಅಸೋಸಿಯೇಷನ್ ರಾಜ್ಯಾಧ್ಯಕ್ಷ ಶ್ರೀನಿವಾಸ ರೆಡ್ಡಿ, ಜಿಲ್ಲಾಧ್ಯಕ್ಷ ರ್‍ಯಾಂಬೊ ಕಿರಣ್, ಕೃಷ್ಣಮೂರ್ತಿ, ಕೃಷ್ಣಸ್ವಾಮಿ, ಸುನಿಲ್, ಶಶಿಕುಮಾರ್, ಅಂಬರೀಶ್ ಉಪಸ್ಥಿತರಿದ್ದರು.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣ

ಶಾಸಕ ಪೊನ್ನಣ್ಣಗೆ ಕ್ಲೀನ್‌ಚಿಟ್; ಪೊಲೀಸರಿಂದ 'ಬಿ' ರಿಪೋರ್ಟ್!

ಬೆಂಗಳೂರು: ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸಿದ್ದ ಹೆಣ್ಣೂರು ಠಾಣೆಯ ಪೊಲೀಸರು, ನ್ಯಾಯಾಲಯಕ್ಕೆ 'ಬಿ' ವರದಿ ಸಲ್ಲಿಸಿದ್ದಾರೆ.

ಕೊಡಗು ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಎ.ಎಸ್.ಪೊನ್ನಣ್ಣ (ವಿರಾಜಪೇಟೆ ಕ್ಷೇತ್ರ), ಮಂಥರ್‌ಗೌಡ (ಮಡಿಕೇರಿ ಕ್ಷೇತ್ರ) ಹಾಗೂ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಕೊಡಗು ಜಿಲ್ಲಾ ಅಧ್ಯಕ್ಷ ತೆನ್ನೀರಾ ಮೈನಾ ಅವರು ವಿನಯ್ ಅವರಿಗೆ ಕಿರುಕುಳ ನೀಡಿ, ಬೆದರಿಕೆ ಹಾಕಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ ಎಂಬುದಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮೂವರಿಗೂ ತನಿಖಾಧಿಕಾರಿಗಳು ಕ್ಲೀನ್ ಚಿಟ್ ನೀಡಿದ್ದಾರೆ.

ಕಿರುಕುಳ ಹಾಗೂ ಬೆದರಿಕೆಯಿಂದ ವಿನಯ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಾಗಿ ವಿನಯ್ ಅವರ ಸಹೋದರ ಕೆ.ಎಸ್.ಜೀವನ್ ದೂರು ನೀಡಿದ್ದರು.



ಎ.ಎಸ್.ಪೊನ್ನಣ್ಣ

ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗಿದೆ. ಯಾವುದೇ ಪುರಾವೆಗಳು ಸಿಕ್ಕಿಲ್ಲ. ದೂರಿನಲ್ಲಿ ಉಲ್ಲೇಖಿಸಿದ್ದ ವ್ಯಕ್ತಿಗಳ ಮೊಬೈಲ್ ಕರೆಗಳ ವಿವರ ಪಡೆಯಲಾಗಿತ್ತು. ತಜ್ಞರ ಮೂಲಕವೂ ಕರೆಗಳ ವಿವರವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಆತ್ಮಹತ್ಯೆ ಮಾಡಿಕೊಂಡಿದ್ದ ವ್ಯಕ್ತಿಯ ಮೊಬೈಲ್ ಸಂಖ್ಯೆಗೆ ಯಾವುದೇ ಬೆದರಿಕೆ ಕರೆಗಳು ಹೋಗಿಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಕೊಡಗಿನ ಸಮಸ್ಯೆಗಳು ಮತ್ತು ಪರಿಹಾರ ಹೆಸರಿನ ವಾಟ್ಸಾಪ್ ಗ್ರೂಪ್ ಅಡ್ಮಿನ್ ಆಗಿದ್ದರು. ಅದರಲ್ಲಿ ಪೋಸ್ಟ್ ಮಾಡಿದ್ದ ಸಂದೇಶವೊಂದರ ಸಂಬಂಧ ಅವರ ವಿರುದ್ಧ ಎಫ್‌ಐಆರ್ ದಾಖ ಲಾಗಿತ್ತು. ಸಂದೇಶ ಹಾಕಿದ್ದಕ್ಕೆ ಕೆಲವರು ಬೆದರಿಕೆ ಹಾಕಿದ್ದಾರೆ ಎಂದೂ ಆರೋಪಿಸಲಾಗಿತ್ತು. ನಾಗವಾರದ ಕಂಪನಿಯ ಗೋದಾಮಿನ ಫ್ಯಾನ್‌ಗೆ ನೇಣು ಬಿಗಿದುಕೊಂಡು ಏಪ್ರಿಲ್ 4ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ವಿನಯ್ ಆತ್ಮಹತ್ಯೆಗೂ ಮುನ್ನ ಬರೆದಿದ್ದ ಪತ್ರವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ತೆನ್ನೀರಾ ಮೈನಾ ಅವರ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಶಾಸಕರಾದ ಪೊನ್ನಣ್ಣ, ಮಂಥರ್ ಗೌಡ ಅವರ ಹೆಸರನ್ನೂ ಎಫ್‌ಐಆರ್‌ನಲ್ಲಿ ಸೇರಿಸುವಂತೆ ಬಿಜೆಪಿ ಮುಖಂಡರು ಪಟ್ಟು ಹಿಡಿದಿದ್ದರು. ವಿನಯ್ ಅವರ ಆತ್ಮಹತ್ಯೆ ಪ್ರಕರಣವು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಸಂಘರ್ಷದ ಕಿಡಿ ಹೊತ್ತಿಸಿತ್ತು. ಕೊಡಗಿನ ಕುಶಾಲನಗರದಲ್ಲೂ ದೊಡ್ಡ ಮಟ್ಟದ ಪ್ರತಿಭಟನೆ ನಡೆದಿತ್ತು.

ವೀರಗಲ್ಲುಗಳಿಗೆ ಪುಷ್ಪ ನಮನ...



ರಾಜರ ಆಳ್ವಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರಯೋಧರ ನೆನಪಿನಾರ್ಥ ಮೈಸೂರಿನ ವೀರನಗೆರೆಯಲ್ಲಿರುವ ವೀರಗಲ್ಲುಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮೈ.ಕಾ.ಪ್ರೇಮ್‌ಕುಮಾರ್, ದೇವರಾಜು, ಶ್ರೀನಿವಾಸ್, ಸ್ವಾಮಿ, ರಾಜು, ಕುಮಾರ್ ಇನ್ನಿತರರಿದ್ದರು.

ಪಾಕ್ ಭದ್ರತಾ ಪಡೆ ಪ್ರಧಾನ ಕಚೇರಿ ಬಳಿ ಕಾರ್ ಬಾಂಬ್ ಸ್ಫೋಟ; 13ಕ್ಕೂ ಅಧಿಕ ಮಂದಿ ಸಾವು


ಕ್ವೆಟ್ಟಾ: ಪಾಕಿಸ್ತಾನದ ಪ್ಯಾರಾಮಿಲಿಟರಿಯ ಪ್ರಧಾನ ಕಚೇರಿಯ ಹೊರಗೆ



ಮಂಗಳವಾರ ಪ್ರಬಲವಾದ ಕಾರ್ ಬಾಂಬ್ ಸ್ಫೋಟ ಸಂಭವಿಸಿದ್ದು, 13ಕ್ಕೂ ಅಧಿಕ ಜನ ಸಾವನ್ನಪ್ಪಿದ್ದಾರೆ ಮತ್ತು 30 ಜನ ಗಾಯಗೊಂಡಿದ್ದಾರೆ. ಇಂದು ಮಧ್ಯಾಹ್ನ ಕ್ವೆಟ್ಟಾದ ಜರ್ಘುನ್ ರಸ್ತೆಯಲ್ಲಿರುವ ಎಫ್‌ಸಿ(ಫ್ರಾಂಟಿಯರ್ ಕಾನ್‌ಸ್ಟಾಬ್ಯುಲರಿ) ಪ್ರಧಾನ ಕಚೇರಿಯ ಎದುರು ತಮ್ಮ ವಾಹನವನ್ನು ಸ್ಫೋಟಿಸುವ ಮೊದಲು, ಕಾರಿನೊಳಗಿದ್ದ ಆರು ಉಗ್ರರು ಹೊರಗೆ ಬಂದು ಸೇನೆಯೊಂದಿಗೆ ತೀವ್ರ ಗುಂಡಿನ ಚಕಮಕಿಯಲ್ಲಿ ತೊಡಗಿದರು ಎಂದು ಪೊಲೀಸರು ತಿಳಿಸಿದ್ದಾರೆ. ಎಲ್ಲಾ ಆರು ದಾಳಿಕೋರರನ್ನು ಹತ್ಯೆ ಮಾಡಲಾಗಿದೆ ಎಂದು ವರದಿಯಾಗಿದೆ. ಕ್ವೆಟ್ಟಾದಲ್ಲಿ ಸಂಭವಿಸಿದ ಸ್ಫೋಟದ ಸದ್ದು ಮೈಲುಗಳಷ್ಟು ದೂರದವರೆಗೆ ಕೇಳಿಬಂತು ಎಂದು ನಿವಾಸಿಗಳು ತಿಳಿಸಿದ್ದಾರೆ. ಬಾಂಬ್ ಸ್ಫೋಟದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ರಕ್ಷಣಾ ತಂಡಗಳು ಮತ್ತು ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ತಲುಪಿದ್ದು, ಶೋಧ ಕಾರ್ಯಾಚರಣೆಗಾಗಿ ಪ್ರದೇಶವನ್ನು ಸುತ್ತುವರೆದಿದೆ ಎಂದು ಪಾಕಿಸ್ತಾನದ ಆಜ್ ನ್ಯೂಸ್ ವರದಿ ಮಾಡಿದೆ. ಯಾವುದೇ ಉಗ್ರ ಸಂಘಟನೆ ತಕ್ಷಣಕ್ಕೆ ಈ ದಾಳಿಯ ಹೊಣೆ ಹೊತ್ತುಕೊಂಡಿಲ್ಲ.

ನಿಧನ

ಭರತ್



ಮೈಸೂರು: ನಂಜನಗೂಡು ತಾಲೂಕಿನ ಅಹಲ್ಯ ಗ್ರಾಮದ ಭರತ್ (27) ಮಂಗಳವಾರ ನಿಧನರಾದರು. ಮೃತರು ತಾಯಿ ಧನಲಕ್ಷ್ಮಿ (ಅಂಗನವಾಡಿ ಶಿಕ್ಷಕಿ), ಸಹೋದರ ಅಭಿಷೇಕ್, ಅತ್ತಿಗೆ, ತಮ್ಮಂದಿರು, ತಂಗಿಯಂದಿರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರು ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಚಂದ್ರೇಗೌಡರ ಅಣ್ಣನ ಮಗ. ಮೃತರ ಅಂತ್ಯಕ್ರಿಯೆ ಮಂಗಳವಾರ ಸಂಜೆ ಅವರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಮರಿಕಾಳಯ್ಯ



ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಚಿಟ್ಟಿನಹಳ್ಳಿ ನಿವಾಸಿ, ಲೋಕೋಪಯೋಗಿ ಇಲಾಖೆ ನಿವೃತ್ತ ನೌಕರರಾದ ಕೆ.ಮರಿಕಾಳಯ್ಯ (84) ಸೋಮವಾರ ನಿಧನರಾದರು. ಮೃತರು ಪತ್ನಿ ಶ್ರೀಮತಿ ಮಲ್ಲಿಗಮ್ಮ, ಪುತ್ರ, ವಕೀಲ ಸಿ.ಎಂ. ಅಶೋಕ್, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮ ಚಿಟ್ಟಿನಹಳ್ಳಿಯ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರೂರ್ ಕಾಲ್ತುಳಿತದ ಬಗ್ಗೆ ವದಂತಿ ಯೂಟ್ಯೂಬರ್ ಬಂಧನ; ಟಿವಿಕೆ ಕಾರ್ಯಕರ್ತರ ವಿರುದ್ಧ ಕೇಸ್



ಚೆನ್ನೈ: ತಮಿಳುನಾಡಿನ ಕರೂರಿನಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ತನ್ನ ಯೂಟ್ಯೂಬ್ ಚಾನೆಲ್ ಮೂಲಕ ತಪ್ಪು ಮಾಹಿತಿ ಹರಡಿದ ಆರೋಪದ ಮೇಲೆ ಗ್ರೇಟರ್ ಚೆನ್ನೈನ ಸೈಬರ್ ಕ್ರೈಮ್ ಪೊಲೀಸರು ಯೂ ಟ್ಯೂಬರ್ ಫೆಲಿಕ್ಸ್ ಜೆರಾಲ್ಡ್ ಅವರನ್ನು ಬಂಧಿಸಿದ್ದಾರೆ.

ಕಳೆದ ಶನಿವಾರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ರಾಜಕೀಯ ರ್‍ಯಾಲಿಯಲ್ಲಿ ಕಾಲ್ತುಳಿತ ಸಂಭವಿಸಿ 41 ಜನ ಸಾವನ್ನಪ್ಪಿದ್ದು, 50ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಜೆರಾಲ್ಡ್ ಅವರನ್ನು ಇಂದು ಬೆಳಗಿನ ಜಾವ ನುಂಗಂಬಾಕ್ಕಂನಲ್ಲಿರುವ ಅವರ ನಿವಾಸದಲ್ಲಿ ವಶಕ್ಕೆ ಪಡೆಯಲಾಗಿದೆ. ರೆಡ್ ಪಿಕ್ಸ್‌ನಲ್ಲಿ ಅಪ್‌ಲೋಡ್ ಮಾಡಲಾದ ವಿಡಿಯೋದಲ್ಲಿ, ಅವರು ಘಟನೆಗೆ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಿದ್ದಾರೆ ಮತ್ತು ವಿಜಯ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಸೋಮವಾರ, ಸಾಮಾಜಿಕ ಮಾಧ್ಯಮದಲ್ಲಿ ಕಾಲ್ತುಳಿತದ ಬಗ್ಗೆ ವದಂತಿಗಳನ್ನು ಹರಡಿದ ಆರೋಪದ ಮೇಲೆ ಬಿಜೆಪಿ ರಾಜ್ಯ ಕಲೆ ಮತ್ತು ಸಂಸ್ಕೃತಿ ಕಾರ್ಯದರ್ಶಿ ಸಗಾಯಂ(38) ಮತ್ತು ಟಿವಿಕೆ ಕಾರ್ಯಕರ್ತರಾದ ಮಾಂಗಾಡುವಿನ ಶಿವನೇಶ್ವರನ್(36) ಮತ್ತು ಅವಡಿಯ ಶರತ್ ಕುಮಾರ್ (32) ಅವರನ್ನು ಪೊಲೀಸರು ಬಂಧಿಸಿದ್ದಾರೆ. ತಮಿಳು ಭಾಷೆಯ ಯೂಟ್ಯೂಬ್ ಚಾನೆಲ್ ಅನ್ನು ನಡೆಸುತ್ತಿರುವ ಜೆರಾಲ್ಡ್ ಅವರನ್ನು ತನಿಖೆಯ ಭಾಗವಾಗಿ ಬಂಧಿಸ ಲಾಗಿದೆ.

ರಾಜ್ಯ ಸರ್ಕಾರ ಮತ್ತು ಪೊಲೀಸರ ವಿರುದ್ಧ ತಪ್ಪು ಮಾಹಿತಿ ಹರಡಿದ ಆರೋಪದ ಮೇಲೆ 25 ಸಾಮಾಜಿಕ ಮಾಧ್ಯಮ ಖಾತೆಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಉಳಿದ ಆರೋಪಿಗಳ ಬಂಧನ ಪ್ರಕ್ರಿಯೆ ನಡೆಯುತ್ತಿದೆ.

ಪ್ರಕರಣದಲ್ಲಿ ಮತ್ತೊಬ್ಬ ಟಿವಿಕೆ ಕಾರ್ಯಕರ್ತನನ್ನು ಸಹ ಬಂಧಿಸಲಾಗಿದೆ. ಪೊಲೀಸರ ಪ್ರಕಾರ, ಆ ಕಾರ್ಯಕರ್ತನನ್ನು ಪಕ್ಷದ ಕರೂರ್ ಕೇಂದ್ರ ಜಿಲ್ಲಾ ಕಾರ್ಯದರ್ಶಿ ಕಾಸಿ ಪೌನ್‌ರಾಜ್ ಎಂದು ಗುರುತಿಸಲಾಗಿದೆ.

ಅರಣ್ಯ, ವನ್ಯಜೀವಿಗಳ ಮಾಹಿತಿಗಾಗಿ ಮಳಿಗೆಗೆ ಭೇಟಿ ನೀಡುವಂತೆ ಸಚಿವ ಈಶ್ವರ ಖಂಡ್ರೆ ಸಲಹೆ

ಮೈಸೂರು, ಸೆ.30(ಎಂಕೆ)– ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಅರಣ್ಯ ಇಲಾಖೆ ವತಿಯಿಂದ ನಿರ್ಮಿಸಿರುವ ಅತ್ಯಾಕರ್ಷಕ ಸುವಿಶಾಲ ಮಳಿಗೆ ವೀಕ್ಷಣೆಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಚಾಲನೆ ನೀಡಿದರು.



ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಅರಣ್ಯ ಇಲಾಖೆ ಮಳಿಗೆಯನ್ನು ಸಚಿವ ಈಶ್ವರ ಬಿ.ಖಂಡ್ರೆ ಉದ್ಘಾಟಿಸಿದರು.

ಮಳಿಗೆ ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ಇಲಾಖೆ ಮಳಿಗೆಯಲ್ಲಿ ಕರ್ನಾಟಕದ ರಾಷ್ಟ್ರೀಯ ಉದ್ಯಾನವನಗಳು, ವನ್ಯಜೀವಿಗಳ ರಕ್ಷಣೆ ಮತ್ತು ಪುನರ್ವಸತಿ, ಅರಣ್ಯ ಸಂವರ್ಧನೆ ಕುರಿತ ಮಾಹಿತಿ ಜೊತೆಗೆ, ವನ್ಯಜೀವಿ ಸೆರೆ ಕಾರ್ಯಾಚರಣೆ, ಕಾಡ್ಗಿಚ್ಚು ನಂದಿಸುವ ಹಾಗೂ ಕಾಡುಗಳ್ಳರೊಂದಿಗೆ ಹೋರಾಡಿ ಹುತಾತ್ಮರಾದವರ ಮಾಹಿತಿಯನ್ನು ಚಿತ್ರಸಹಿತ ಪ್ರದರ್ಶಿಸಲಾಗಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಮಾತ್ರವಲ್ಲದೆ ಪ್ರತಿಯೊಬ್ಬರು ಮಳಿಗೆಗೆ ಭೇಟಿ ನೀಡಬೇಕು. ಮಳಿಗೆ ವೀಕ್ಷಿಸಿದರೆ ಕಾಡಿನಲ್ಲಿ ವಿಹರಿಸಿದಷ್ಟು ಅನುಭವವಾಗುತ್ತದೆ. ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಜ್ಞಾನಾರ್ಜನೆಗಾಗಿಯಾದರೂ ವಸ್ತುಪ್ರದರ್ಶನಕ್ಕೆ ಆಗಮಿಸುವವರು ಮಳಿಗೆ ವೀಕ್ಷಿಸಬೇಕು ಎಂದು ಕೋರಿದರು. ಬಳಿಕ ಹುತಾತ್ಮರಿಗೆ ನಮನ ಸಲ್ಲಿಸಿದರು.

ಹಾಗೆಯೇ ಕಲಾಮಂದಿರದಲ್ಲಿರುವ ಪತ್ರಿಕಾ ಛಾಯಾಗ್ರಾಹಕರ ಛಾಯಾಚಿತ್ರ ಪ್ರದರ್ಶನಕ್ಕೂ ಭೇಟಿ ನೀಡಿದರು. ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.10.2025 ಬುಧವಾರ, ಮಳೆ ನಕ್ಷತ್ರ: ಹಸ್ತ 27.09.2025ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40–ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್.ಎಸ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಕೆ. ಎಸ್. ಸುರೇಖ, 8.30 ಚಿತ್ರಗೀತೆ ಗಳು, 9.05 ರೇಷ್ಮೆ ಸಿರಿ, 9.20 ಚಿತ್ರಗೀತೆಗಳು, 9.30 ಮೈಸೂರು ಬ್ರಾಂಡ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ : ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಹರಿಪ್ರಸಾದ್ ಚೌರಾಸಿಯಾ –ವೇಣು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಮಳವಳ್ಳಿ ತಾಲೂಕು ಕೀರ್ತಿನಗರದ ಗುರುಬಸವಯ್ಯ ಮತ್ತು ಸಂಗಡಿಗರಿಂದ ಮಂಟೇಸ್ವಾಮಿ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಸಿಂಚನ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅಮೃತಾ ವೆಂಕಟೇಶ್–ಹಾಡುಗಾರಿಕೆ, 4.00 ಮಹಿಳಾ ರಂಗ, ಪ್ರವಾಸಿ ದಸರಾ–ಮೈಸೂರು ಸೀಮೆಯ ದಸರಾ ಸಂಭ್ರಮ, ಪ್ರಸ್ತುತಿ–ಕೀರ್ತನಾ, ಸಹನ ಹಾಗೂ ನೇತ್ರಾ, 4.30 ಹಿಂದಿ ಚಿತ್ರಗೀತೆಗಳು, 6.50 ಕೃಷಿರಂಗ ಅರಿಸಿಣ ಬೆಳೆಯ ಉತ್ಪಾದಕತೆ ಹೆಚ್ಚಿಸುವಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಪಾತ್ರ ಕುರಿತು ಚಾಮರಾಜನಗರ ತಾಲೂಕು, ಹರದನ ಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಪ್ರಧಾನ ವಿಜ್ಞಾನಿ ಡಾ. ಎನ್.ಟಿ. ನರೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಆರ್. ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ, ಆಕಾಶವಾಣಿ 90–ನೆನಪುಗಳ ಹೊತ್ತು ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ಸಮುದ್ಯತಾ ಶ್ರೋತೃ ಬಳಗದ ಅಧ್ಯಕ್ಷರಾದ ವಿ. ಗೋವಿಂದಾಚಾರಿ ಹಾಗೂ ಕಾರ್ಯದರ್ಶಿಗಳಾದ ರಾಜೇಶ್ವರಿ ಟಿ.ಎನ್.ಅವರೊಂದಿಗೆ ಸಂವಾದ, ಭಾಗವಹಿಸುತ್ತಾರೆ–ಡಾ. ಮೈಸೂರು ಉಮೇಶ್, 8.30–ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ನಾಟಕ, 10.30 ಸವಿನೆನಪು.

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ನವಮಿ, ಬೆಳಗ್ಗೆ ನವಗ್ರಹ ಹೋಮ, ಉತ್ಸವ, ಸಾಯಂಕಾಲ ಗಜೇಂದ್ರ ಮೋಕ್ಷ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ದುರ್ಗಾ ಪೂಜೆ, ಮಹಾನವಮಿ, ಬೆಳಗ್ಗೆ 7 ರಿಂದ ಶ್ರೀ ದುರ್ಗಾ ಮಾತೆಗೆ ಪೂಜೆ, ಬೆಳಗ್ಗೆ 8 ಗಂಟೆಗೆ ದುರ್ಗಾ ಸಪ್ತಸತಿ ಪಾರಾಯಣ, 11ಕ್ಕೆ ಭಜನೆ, 11.45ಕ್ಕೆ ಆರತಿ ಮತ್ತು ಪುಷ್ಪಾಂಜಲಿ, ಸಂಜೆ 7 ಗಂಟೆಗೆ ಸಂಧ್ಯಾರತಿ, ವಿಶೇಷ ಪೂಜೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ನವಮಿ, ಶ್ರೀ ಚಾಮುಂಡಾ (ಸಿಂಹವಾಹಿನಾಲಂಕಾರ), ಶ್ರೀ ನವಚಂಡಿಕಾ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 10ಕ್ಕೆ ಸಗ್ರಹಮುಖ ನವಚಂಡಿಯಾಗ, ಮಧ್ಯಾಹ್ನ 1 ಗಂಟೆಗೆ ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಅವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಂ, ಶ್ರೀ ಅವನೀ ಶೃಂಗೇರಿ ಮಠ, ಮೈಸೂರು ಶಾಖೆ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ–2025, ನವಮಿ–ಸಿದ್ಧಿದಾತ್ರಿ ಅಲಂಕಾರ, ಬೆಳಗ್ಗೆ 9ಕ್ಕೆ ಶ್ರೀ ಚಂಡಿಕಾ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ನವರಾತ್ರಿ ವೈಭವಂ–ನೃತ್ಯ ಕಾರ್ಯಕ್ರಮ, ನಿರ್ದೇಶನ: ವಿದುಷಿ ಟಿ.ಎಸ್.ಶ್ರೀಲಕ್ಷ್ಮೀಕುಮಾರ್, ಸ್ಥಳ: ಶ್ರೀ ಅವನೀ ಶೃಂಗೇರಿ ಮಠ, ವಿದ್ಯಾರಣ್ಯಪುರಂ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025, ಬೆಳಗ್ಗೆ 9 ಗಂಟೆಗೆ ಶ್ರೀ ಚಂಡಿಕಾಹೋಮ, ದಂಪತಿ ಪೂಜೆ, ದುರ್ಗಾ ಅಲಂಕಾರ, ಸ್ಥಳ: ದೇವಸ್ಥಾನ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವ್ಯವಸ್ಥಾಪಕರು:** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ–2025, ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವ, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ಚಂಡಿ ಹೋಮ, ನವಾವರಣ ಪೂಜೆ, ವಿದ್ವಾನ್ ತನ್ಮಯ ಡಿಯೋಚಾಕೆ ಅವರಿಂದ ಹಿಂದೂಸ್ಥಾನಿ ಹಾರ್ಮೋನಿಯಂ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಶಕ್ತಿದುರ್ಗಿ ಪೂಜೆ, ಆಯುಧ ಪೂಜೆ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದ ಮಂಟಪ, ಶ್ರೀ ಸಚ್ಚಿದಾನಂದ ಆಶ್ರಮದ ಆವರಣ.

■ **ಶ್ರೀ ಅಮೃತೇಶ್ವರ ದೇವಸ್ಥಾನ:** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಚಂಡಿಕಾ ಯಾಗ, ಬೆಳಗ್ಗೆ 9.30ಕ್ಕೆ 10ನೇ ದಿನದ ಸಹಸ್ರ ಚಂಡಿಕಾಯಾಗ ಸಾಮ್ರಾಜ್ಯಲಕ್ಷ್ಮಿ ಮತ್ತು ಬಾಲತ್ರಿಪುರ ಸುಂದರಿ ದೇವಿಯರ ಆರಾಧನೆ, ಮ. 12 ಗಂಟೆಗೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಅಮೃತೇಶ್ವರ ದೇವಸ್ಥಾನ, ಧನ್ವಂತರಿ ರಸ್ತೆ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರ ನಗರ, ಬೆಳಗ್ಗೆ 10ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ನವರಾತ್ರಿ ಪ್ರಯುಕ್ತ ಪೂಜಾ ಮಹೋತ್ಸವ, ಆಯುಧ ಪೂಜೆ, ಸ್ಥಳ: ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ, ಚಾಮುಂಡಿ ಬೆಟ್ಟದ ಪಾದ, ಸಂಜೆ 5.30ಕ್ಕೆ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಕುಮಾರಿ ಭಾಗ್ಯಲಕ್ಷ್ಮಿ ಮತ್ತು ಕುಮಾರಿ ಅಕ್ಷತಾ ಅವರಿಂದ ದೇವರನಾಮ ಮತ್ತು ನೃತ್ಯರೂಪಕ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ, ಸಂಜೆ 7 ರಿಂದ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

2.10.2025 ಗುರುವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ

6.10 ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10– ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಿ.ಶಾಂತಕುಮಾರ್, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್ ಎಸ್., 6.50 ರೈತರಿಗೆ ಸಲಹೆ, 7.15–ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 9.30 ಮೈಸೂರು ಬ್ರಾಂಡ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿ ಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿವಿಧ ಕಲಾವಿದರಿಂದ ದೇವಿಕೃತಿಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಶಾಂತಕುಮಾರ್ .ಜಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, ನಾಗಮಂಗಲ ತಾಲೂಕು, ಚೋಳೇನಹಳ್ಳಿ ಕೊಪ್ಪಲಿನ ಕೆ.ಪಿ.ರಾಮಕೃಷ್ಣೇಗೌಡ ಮತ್ತು ಸಂಗಡಿಗರಿಂದ ಭಾಗವಂತಿಕೆ ಮೇಳ, 4.30 ಸಂಧ್ಯರಾಗ, 6.50 ಕೃಷಿರಂಗ–ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ ಮಂಡ್ಯ ತಾಲೂಕು ಹೆಚ್. ಕೋಡಿಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಕೆ.ಮಲ್ಲಿಕಾರ್ಜುನ್ ಹಾಗೂ ಸದಸ್ಯರಾದ ಕೆ.ಆರ್. ಕೆಂಪಾಚಾರಿ. ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು. ಶ್ರೀನಿವಾಸ್–ಮ್ಯಾಂಡೋಲಿನ್ ವಾದನ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪ್ರಾದೇಶಿಕ ಜಾನಪದ ಹಾಗೂ ಲಘು ಸಂಗೀತ ಕಾರ್ಯಕ್ರಮ

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ನವಮಿ, ವಿಜಯದಶಮಿ, ಬೆಳಗ್ಗೆ 7.30 ರಿಂದ 8.30ರವರೆಗೆ ದಿವ್ಯ ಲಗ್ನದಲ್ಲಿ ದಿವ್ಯ ರಥಾರೋಹಣೋತ್ಸವ, ಸಾಯಂಕಾಲ ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣಮಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ದುರ್ಗಾ ಪೂಜೆ, ವಿಜಯದಶಮಿ, ಬೆಳಗ್ಗೆ 7 ರಿಂದ ಶ್ರೀ ದುರ್ಗಾ ಮಾತೆಗೆ ಪೂಜೆ, ಬೆಳಗ್ಗೆ 8 ಗಂಟೆಗೆ ದುರ್ಗಾ ಸಪ್ತಸತಿ ಪಾರಾಯಣ, 11ಕ್ಕೆ ಭಜನೆ, 11.45ಕ್ಕೆ ಆರತಿ ಮತ್ತು ಪುಷ್ಪಾಂಜಲಿ, ಸಂಜೆ 7 ಗಂಟೆಗೆ ಸಂಧ್ಯಾರತಿ, ವಿಶೇಷ ಪೂಜೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ದಶಮಿ, ಶ್ರೀ ಗಜಲಕ್ಷ್ಮೀ ಅಲಂಕಾರ, ಶ್ರೀ ಧನ್ವಂತರಿ ಹೋಮ, ಸ್ಥಳ: ಅಭಿನವ ಶಂಕರಾಲಯ, ಬೆಳಗ್ಗೆಯಿಂದ.

■ **ಶ್ರೀ ಶ್ರೀ ಅವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಂ, ಶ್ರೀ ಅವನೀ ಶೃಂಗೇರಿ ಮಠ, ಮೈಸೂರು ಶಾಖೆ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ–2025, ದಶಮಿ, ಬೆಳಗ್ಗೆ 9ಕ್ಕೆ ರುದ್ರಾಭಿಷೇಕ, ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ವರಲಕ್ಷ್ಮೀ ಸುಗಮ ಸಂಗೀತ ತಂಡದಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಅವನೀ ಶೃಂಗೇರಿ ಮಠ, ವಿದ್ಯಾರಣ್ಯಪುರಂ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆಮನೆ, ನಜರ್‌ಬಾದ್ ಮುಖ್ಯರಸ್ತೆ ಬೆಳಗ್ಗೆ 10ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025, ಬೆಳಗ್ಗೆ 9 ಗಂಟೆಗೆ ಲಕ್ಷಾರ್ಚನೆ ಹೋಮ, ಶ್ರೀ ಶಾಖಾಂಬರಿ ಅಲಂಕಾರ, ಸ್ಥಳ: ದೇವಸ್ಥಾನ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವ್ಯವಸ್ಥಾಪಕರು:** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ–2025, ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವ, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ವಿಜಯದಶಮಿ ಆಚರಣೆ, ಪೂರ್ಣಕಲಾ ರಾಜರಾಜೇಶ್ವರಿ ಪೂಜೆ, ಹೋಮ ಪೂರ್ಣಾಹುತಿ, ಅನ್ನಾರ್ಚನೆ, ಮಧ್ಯಾಹ್ನ 12 ಗಂಟೆಗೆ ಕಲಶ ಉದ್ವಾಸನೆ, ಶಮೀಪೂಜೆ, ಮಹಾ ಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ದೇವಿ ರಥೋತ್ಸವ, ಸ್ಥಳ: ನಾದ ಮಂಟಪ, ಶ್ರೀ ಸಚ್ಚಿದಾನಂದ ಆಶ್ರಮದ ಆವರಣ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ನವರಾತ್ರಿ ಪ್ರಯುಕ್ತ ಪೂಜಾ ಮಹೋತ್ಸವ, ಸರಸ್ವತಿ ಪೂಜೆ (ವಿದ್ಯಾರಂಭಂ), ಸ್ಥಳ: ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ, ಸಂಜೆ 5.30ಕ್ಕೆ.

■ **ಇಸ್ಕಾನ್ ದೇವಾಲಯ :** ವಿಜಯದಶಮಿ ಪ್ರಯುಕ್ತ ವಿಶೇಷ ಕಾರ್ಯಕ್ರಮ, ಸಂಜೆ 5.30ರಿಂದ ದೇವಸ್ಥಾನದ ಶ್ರೀ ಧಾಮ ಹಾಲ್‌ನಲ್ಲಿ ಶ್ರೀ ರಾಮ ಅಷ್ಟೋತ್ತರ ಪೂಜೆ, ಪಲ್ಲಕ್ಕಿ ಉತ್ಸವ ಹರಿನಾಮ ಸಂಕೀರ್ತನೆ, ಹಬ್ಬದ ವಿಶೇಷತೆ ಕುರಿತು ಉಪನ್ಯಾಸ, ರಾವಣ ಮತ್ತು ಕುಂಭಕರ್ಣರ 45 ಅಡಿಗಳ ಪ್ರತಿಕೃತಿಯ ಪರ ಶ್ರೀ ರಾಮ ವಿಜಯ ಪ್ರದರ್ಶನ, ಸ್ಥಳ: ಇಸ್ಕಾನ್ ದೇವಾಲಯ, ಜಯನಗರ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಹಾತ್ಮ ಗಾಂಧಿ ಅಧ್ಯಯನ ಪೀಠ :** 156ನೇ ಗಾಂಧಿ ಜಯಂತಿ ಆಚರಣೆ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಪ್ರೊ.ಎಂ.ರಾಮನಾಥಂ ನಾಯುಡು, ಡಾ.ಸಿ.ಎಸ್. ಆನಂದಕುಮಾರ್, ಪ್ರೊ.ಎಸ್.ನಿರಂಜನ್‌ರಾಜ್, ಡಾ.ಎನ್.ಆರ್. ಚಂದ್ರೇಗೌಡ, ಸ್ಥಳ: ಗಾಂಧಿ ಭವನ, ಬೆಳಗ್ಗೆ 9ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಕರ್ನಾಟಕ ರಾಜ್ಯ ಆರ್ಯ ಪ್ರತಿನಿಧಿ ಸಭಾ:** ವಿಜಯದಶಮಿ ಪರ್ವ ಆಚರಣೆ, ಸ್ಥಳ: ಆರ್ಯ ಸಮಾಜ, ಕೊತ್ವಾಲ್ ರಾಮಯ್ಯ ರಸ್ತೆ, ಬೆಳಗ್ಗೆ 9ರಿಂದ.

ದಸರಾ ಪುಸ್ತಕ ಮೇಳಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ; ಹಿರಿಯ ಸಾಹಿತಿ ಡಾ.ವೆಂಕಟಾಚಲ ಶಾಸ್ತ್ರೀ ಹರ್ಷ



ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ದಲ್ಲಿ ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.30(ಎಸ್‌ಪಿಎನ್)– ದಸರಾ ಪುಸ್ತಕ ಮೇಳ ವರ್ಷದಿಂದ ವರ್ಷಕ್ಕೆ ಹೆಚ್ಚು ಚಟುವಟಿಕೆಗಳಿಂದ ಕೂಡಿದ್ದು, ಓದುಗರ ಗಮನ ಸೆಳೆಯುತ್ತಿದೆ ಎಂದು ಹಿರಿಯ ಸಾಹಿತಿ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಹಳೆ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ದಲ್ಲಿ ಸಾಹಿತಿಗಳೊಂದಿಗೆ ಸೆಲ್ಫಿ ಶೀರ್ಷಿಕೆಯಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಾನು ಹಲವು ಸಾಹಿತ್ಯ ಕಾರ್ಯಕ್ರಮಗಳನ್ನು ನೋಡಿದ್ದೇನೆ. ಆದರೆ, ದಸರಾ ಪುಸ್ತಕ ಮೇಳದಲ್ಲಿ ಆಯೋಜಿಸಿರುವಂತೆ ಬೇರೆ ಕಾರ್ಯಕ್ರಮಗಳಲ್ಲಿ ವ್ಯವಸ್ಥಿತವಾಗಿ ಆಯೋಜಿಸುವುದಿಲ್ಲ. ಇಲ್ಲಿ ಪುಸ್ತಕ ಮೇಳದ ಜೊತೆಗೆ ಸುಗಮ ಸಂಗೀತ, ಜಾನಪದ ಗಾಯನ, ಯಕ್ಷಗಾನ, ವಿಚಾರ ಸಂಕಿರಣ ಹಾಗೂ ವಿವಿಧ ಗೋಷ್ಠಿಗಳನ್ನು ಆಯೋಜಿಸಿ ವರ್ಷದಿಂದ ವರ್ಷಕ್ಕೆ ದಸರಾ ಪುಸ್ತಕ ಮೇಳ ಕಳೆಗಟ್ಟುತ್ತಿದೆ. ಈ ಬಾರಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅವರ ಸಾರಥ್ಯದಲ್ಲಿ ವ್ಯವಸ್ಥಿತವಾಗಿ ಮೂಡಿಬರುತ್ತಿದೆ ಎಂದು ಹೇಳಿದರು.

ಪುಸ್ತಕ ಮೇಳದಲ್ಲಿನ ಕೆಲ ಮಳಿಗೆಗಳಿಗೆ ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಭೇಟಿ ನೀಡಿ ವಿವಿಧ ಲೇಖಕರ ಪುಸ್ತಕಗಳನ್ನು ವೀಕ್ಷಿಸಿದರು. ಇದಕ್ಕೂ ಮುನ್ನ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಆಡಳಿತಾಧಿಕಾರಿ ಕೆ.ಬಿ.ಕಿರಣ್‌ಸಿಂಗ್, ಉಪಸಮಿತಿ ಸದಸ್ಯರಾದ ರಾಜಶೇಖರ ಕದಂಬ, ಎಂ.ಚಂದ್ರಶೇಖರ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಕಾಶಕ ನಿಂಗರಾಜ ಚಿತ್ತಣ್ಣವರ್, ಸುಚಿತ್ರ ಹೆಗಡೆ, ಮೈ.ನಾ.ಲೋಕೇಶ್, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಹಾಜರಿದ್ದರು.

ಅ.1ಕ್ಕೆ ಮುಕ್ತಾಯ: ಒಂಭತ್ತು ದಿನಗಳ ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳವು ಬುಧವಾರ ಮುಕ್ತಾಯವಾಗಲಿದ್ದು, ಆದರೆ, ಈ ಮೇಳದಲ್ಲಿ ಮಂಗಳವಾರವೇ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಕ್ತಾಯವಾಗಲಿದೆ ಎಂದು ಸಮಿತಿ ಸದಸ್ಯರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಭೈರಪ್ಪನವರ ಕೃತಿಗಳು ನೋ ಸ್ಟಾಕ್ ಬೋರ್ಡ್

ಹೆಸರಾಂತ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ ನವರು ನಿಧನರಾದ ದಿನದಿಂದ ಇಲ್ಲಿಯವರೆಗೆ ದಸರಾ ಪುಸ್ತಕ ಮೇಳದ ವಿವಿಧ ಮಳಿಗೆಗಳಲ್ಲಿ ಭೈರಪ್ಪನವರ ಕೃತಿಗಳು ಎಲ್ಲಾ ಬಿಕರಿಯಾಗಿ, ಮತ್ತೆರಡು, ಮೂರು ಬಾರಿ ಸ್ಟಾಕ್ ಹಾಕಿದ್ದರೂ ಆ ಪುಸ್ತಕಗಳು ಖಾಲಿಯಾಗುತ್ತಿವೆ. ಈ ಗಳಿಗೆಯುವರೆಗೂ ಡಾ. ಎಸ್.ಎಲ್.ಭೈರಪ್ಪನವರು ರಚಿಸಿದ ಕಾದಂಬರಿಗಳು, ಆ ಪುಸ್ತಗಳಿಗೆ ಸಂಬಂಧಿಸಿದ ವಿಮರ್ಶಾ ಕೃತಿಗಳು ಸೇರಿದಂತೆ ಭೈರಪ್ಪನವರಿಗೆ ಸಂಬಂಧಿಸಿದ ಎಲ್ಲಾ ಪುಸ್ತಕಗಳು ಕಡಲೆಪುರಿಯಂತೆ ಬಿಕರಿಯಾಗಿರುವುದು ದಸರಾ ಪುಸ್ತಕ ಮೇಳದ ವಿಶೇಷ. ಅಲ್ಲದೆ, ಭೈರಪ್ಪನವರ ಪುಸ್ತಕಗಳನ್ನು ಕೇಳಿ ಕೊಂಡು ಬಂದಿದ್ದ ಎಷ್ಟೋ ಓದುಗರನ್ನು ಬರಿಗೈಲಿ ವಾಪಸ್ಸು ಕಳುಹಿಸಲಾಗಿದೆ ಇದೇ ಮೊದಲ ಬಾರಿಗೆ ದಸರಾ ಪುಸ್ತಕ ಮೇಳದಲ್ಲಿ ಕಾದಂಬರಿಕಾರರೊಬ್ಬರ ಪುಸ್ತಗಳಿಗೆ ಹೆಚ್ಚಿನ ಬೇಡಿಕೆ ಬಂದಿವೆ ಎಂದು ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ 'ಮೈಸೂರು ಮಿತ್ರ'ಗೆ ಆಶ್ಚರ್ಯ ವ್ಯಕ್ತಪಡಿಸಿದರು.

ಮೈಸೂರು ಗುಜರಾತಿ ಸಮಾಜದಲ್ಲಿ ನವರಾತ್ರಿ ಉತ್ಸವ...




ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ಮೈಸೂರು ಗುಜರಾತಿ ಸಮಾಜದ ಭವನದಲ್ಲಿ ಸೆ.22ರಿಂದ ಅ.1ರವರೆಗೆ ನವರಾತ್ರಿ ಉತ್ಸವ ಆಯೋಜಿಸಲಾಗಿದೆ. ಸಮಾಜದ ವತಿಯಿಂದ ಹಮ್ಮಿಕೊಂಡಿರುವ ಈ ಉತ್ಸವದಲ್ಲಿ ಸಮುದಾಯದವರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಸಮಾಜದ ಅಧ್ಯಕ್ಷ ಮೆಹುಲ್ ಪಟೇಲ್, ಉಪಾಧ್ಯಕ್ಷ ಭರತ್ ಪಟೇಲ್, ಕಾರ್ಯದರ್ಶಿ ಕಮಲೇಶ್ ವೋಧಾ, ಖಜಾಂಚಿ ಜತಿನ್ ಭ್ಟಾಂಬ್ ಶಾ, ಜಂಟಿ ಕಾರ್ಯದರ್ಶಿ ವಿಶಾಲ್ ಶಾ, ಲೋಕೇಶ್ ಸೋನಿ, ಸಮಿತಿ ಸದಸ್ಯರಾದ ದತೇಶ್ ಸೋನಿ, ವಿತೇಶ್ ಶಾ, ಗೌರವ್ ಮಾಳವೀಯ, ಮಯಾಂಕ್ ದೋಷಿ, ನಿರ್ಮಲ್ ಶಾ, ಬಿಪಿನ್ ಭಾಟಿಯಾ, ಕರಣ್ ಶಾ, ಮೋನಿಲ್ ಈ ಉತ್ಸವದ ಸಂಘಟಕರಾಗಿದ್ದಾರೆ.

ರಿಂಗ್ ರಸ್ತೆಯಲ್ಲಿ ಸರಣಿ ಅಪಘಾತ

ಮೈಸೂರು, ಸೆ.30(ಎಸ್‌ಪಿಎನ್)– ಮೈಸೂರಿನ ಬೋಗಾದಿ ರಿಂಗ್ ರೋಡ್ ಜಂಕ್ಷನ್ ಬಳಿ ಇಂದು ಸಂಜೆ ಸರಣಿ ಅಪಘಾತ ಸಂಭವಿಸಿದೆ. ವೇಗವಾಗಿ ಬಂದ ಬಿಐಟಿ ಬಸ್ ಸಿಗ್ನಲ್ ಬಳಿ ನಿಂತಿದ್ದ ಇನ್ನೋವಾ ಕಾರಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಇನ್ನೋವಾ ಕಾರು ಮುಂದಿದ್ದ ರೆನಾಲ್ಟ್ ಕ್ವಿಡ್‌ಗೆ ಅಪ್ಪಳಿಸಿದರೆ, ಈ ವಾಹನ ಅದರ ಮುಂದಿದ್ದ ಮಾರುತಿ ಸ್ವಿಫ್ಟ್‌ಗೆ ಡಿಕ್ಕಿ ಹೊಡೆದು ಕೊನೆಗೆ ಸ್ವಿಫ್ಟ್ ಕಾರು ರಸ್ತೆ ಬದಿ ನಿಂತಿದ್ದ ಟಾಟಾ ಏಸ್‌ಗೆ ಡಿಕ್ಕಿಯಾಗಿದೆ. ಈ ಅಪಘಾತದಲ್ಲಿ ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಆದರೆ ವಾಹನಗಳು ಜಖಂಗೊಂಡಿವೆ. ಈ ವಾಹನಗಳ ಮಾಲೀಕರು ಪೊಲೀಸರ ಸಮ್ಮುಖದಲ್ಲಿ ರಾಜಿ–ಸಂಧಾನ ಯತ್ನ ನಡೆಸಿದ್ದರು.

ವಿಶ್ವದ ಅಗ್ರ ವಿಜ್ಞಾನಿಗಳ ಪಟ್ಟಿಯಲ್ಲಿ ಕೋಟೆಯ ಡಾ.ಸುರೇಂದ್ರರಿಗೆ ಸ್ಥಾನ



ಮೈಸೂರು,ಸೆ.30– ಸ್ಟ್ಯಾನ್‌ಫೋರ್ಡ್ ಮತ್ತು ಎಲ್ಸೆವಿಯರ್‌ನ ವಿಶ್ವದ ಅಗ್ರ ಶೇ.2ರಷ್ಟು ವಿಜ್ಞಾನಿಗಳ ಪಟ್ಟಿಯಲ್ಲಿ ಬೆಂಗಳೂರು ನಗರದ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಡಾ.ಬಿ.ಎಸ್.ಸುರೇಂದ್ರ ಸ್ಥಾನ ಪಡೆದಿದ್ದಾರೆ.

ಅಂತಾರಾಷ್ಟ್ರೀಯ ಪೀರ್–ರಿವ್ಯೂಡ್ ಜರ್ನಲ್‌ಗಳಲ್ಲಿ ಪ್ರಕಟವಾದ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಅವರಿಗೆ ಈ ಸ್ಥಾನ ದೊರೆತಿದೆ. ಡಾ.ಸುರೇಂದ್ರ ಅವರ ಸಾಧನೆಗಾಗಿ ಅವರ ತಂದೆ ರೈತ ಸಿದ್ದೇಗೌಡ, ಸ್ನೇಹಿತರಾದ ಡಾ.ಕೊಸಗಿ ಶಾವಸ್‌ಪ್ರಸಾದ್, ಡಾ.ದಯಾನಂದ್, ಎಸ್.ಎಂ.ಸೋಮನಗೌಡ, ಡಾ.ತೋಂಟದಾರ್ಯ ಸೇರಿದಂತೆ ಕಾಲೇಜಿನ ಸಿಬ್ಬಂದಿ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.


ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ


ಮೈಸೂರು, ಸೆ.30(ಜಿಎ)–ಮುಖ್ಯ ಮಂತ್ರಿ ಸಿದ್ದರಾಮಯ್ಯ ಎರಡು ದಿನಗಳ ಕಾಲ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಅ.2 ರಂದು ದಸರಾ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ

ನಾಳೆ(ಬುಧವಾರ) ಬೆಂಗಳೂರಿನಿಂದ ಮೈಸೂರಿಗೆ ಮಧ್ಯಾಹ್ನ 3.25ಕ್ಕೆ ವಿಶೇಷ ವಿಮಾನದ ಮೂಲಕ ಸಿದ್ದರಾಮಯ್ಯ ಆಗಮಿಸಲಿದ್ದು, ರಾತ್ರಿ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 156ನೇ ಜನ್ಮದಿನದ ಅಂಗವಾಗಿ ಅ.2ರಂದು ಬೆಳಿಗ್ಗೆ 8.30ಕ್ಕೆ ಮೈಸೂರಿನ ಗಾಂಧಿ ಚೌಕದಲ್ಲಿರುವ ಅವರ ಪ್ರತಿಮೆಗೆ ಗೌರವ ಸಮರ್ಪಣೆ ಮಾಡಲಿದ್ದಾರೆ. ನಂತರ ಚಾಮುಂಡಿ ಬೆಟ್ಟದ ತಪ್ಪಲ ಸುತ್ತೂರಿನ ಶಾಖಾ ಮಠಕ್ಕೆ ಭೇಟಿ ನೀಡಲಿದ್ದಾರೆ. ಇದಾದ ಬಳಿಕ ಮಧ್ಯಾಹ್ನ 1 ಗಂಟೆಗೆ ಮೈಸೂರು ದಸರಾ ಅಂಗವಾಗಿ ಅರಮನೆ ಆವರಣದ ಬಲರಾಮ ದ್ವಾರದ ಬಳಿ ನಂದಿಧ್ವಜ ಪೂಜೆ ನೆರವೇರಿಸಲಿದ್ದಾರೆ. ಸಂಜೆ 4.42 ರಿಂದ 5.06ರ ವೇಳೆಗೆ ವಿಶ್ವವಿಖ್ಯಾತ ಮೈಸೂರು ದಸರಾ ಪ್ರಮುಖ ಆಕರ್ಷಣೆ ವಿಜಯದಶಮಿ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ರಾತ್ರಿ 7 ಗಂಟೆಗೆ ಬನ್ನಿಮಂಟಪದಲ್ಲಿ ಪಂಜಿನ ಕವಾಯತು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮೈಸೂರಲ್ಲೇ ವಾಸ್ತವ್ಯ ಹೂಡುವ ಅವರು, ಅ.3ರಂದು ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಮರಳಲಿದ್ದಾರೆ.









ನಾಳೆ ಮಡಿಕೇರಿ ದಸರಾ ಜನೋತ್ಸವ ಶೋಭಾಯಾತ್ರೆ

ಮಳೆ ನಡುವೆಯೇ ದಶ ಮಂಟಪಗಳ ಸಿದ್ಧತೆ, ಸ್ಟುಡಿಯೋ ಸೆಟ್ಟಿಂಗ್, ಕೂಲ್ ಫಯರ್ ಅಳವಡಿಕೆ, ಲೈಟಿಂಗ್ಸ್‌ಗಳ ಮೆರಗು


ನಗರದ 4 ಶಕ್ತಿ ಕರಗ ದೇವತೆಗಳ ಹಿರಿಯಕ್ಕಳಾದ ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ಮಂಟಪ ಅಂತಿಮ ಹಂತದ ಸಿದ್ಧತೆಯಲ್ಲಿರುವುದು.

ಮಡಿಕೇರಿ,ಸೆ.30– ಎರಡು ಶತಮಾನಕ್ಕೂ ಹೆಚ್ಚಿನ ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆಯು ಅ.2ರಂದು ನಡೆಯಲಿದ್ದು, ಮಳೆಯ ನಡುವೆಯೇ ದಶಮಂಟಪ ಸಮಿತಿಗಳು ಅಂತಿಮ ಹಂತದ ತಯಾರಿಯಲ್ಲಿ ತೊಡಗಿದ್ದು, ಸಮಿತಿಗಳಲ್ಲಿರುವ ಯುವ ಸಮೂಹ ಅತೀ ಉತ್ಸಾಹದಿಂದ ಭರದ ಸಿದ್ಧತೆಯಲ್ಲಿ ತೊಡಗಿಕೊಂಡಿದೆ.

ಈಗಾಗಲೇ ವಿವಿಧ ಕಥಾ ಸಾರಾಂಶಕ್ಕೆ ತಕ್ಕಂತೆ ಮಂಟಪಗಳು, ಕಲಾಕೃತಿಗಳು, ಟ್ರ್ಯಾಕ್ಟರ್ ಸೆಟ್ಟಿಂಗ್, ಲಿಫ್ಟಿಂಗ್ ಕ್ರೇನ್‌ಗಳು, ಫ್ರಂಟ್ ಸೆಟ್‌ಗಳನ್ನು ಮಂಟಪಗಳಲ್ಲಿ ಅಳವಡಿಸಲಾಗಿದ್ದು, ಶೇ.80ರಷ್ಟು ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ. ಆಯುಧ ಪೂಜೆಯ ರಾತ್ರಿ ವೇಳೆಗೆ ಬಹುತೇಕ ಮಂಟಪಗಳ ಸಿದ್ಧತೆ ಪೂರ್ಣವಾಗಲಿದ್ದು, ಅ.2ರ ಬೆಳಗಿನಿಂದ ಸಂಜೆವರೆಗೆ ಕೊನೆಯ ಹಂತದ ಕಾರ್ಯಗಳಾಗಿ ಸ್ಟುಡಿಯೋ ಸೆಟ್ಟಿಂಗ್, ಕೂಲ್ ಫಯರ್ ಅಳವಡಿಕೆ, ಕಲಾಕೃತಿಗಳಿಗೆ ಸ್ಪಾಟ್ ಲೈಟ್‌ಗಳ ಅಳವಡಿಕೆ, ಮಂಟಪಗಳ ಚಲನ ವಲನಗಳ ಹಿನ್ನೆಲೆ ಧ್ವನಿ ಪರೀಕ್ಷೆ ನಡೆಲಿದೆ. ಅ.2 ರಾತ್ರಿ ಅಂದಾಜು 10 ಗಂಟೆಯ ಬಳಿಕ ನಗರದ ಮುಖ್ಯ ಬೀದಿಗಳಲ್ಲಿ ವೈಭವದ ದಶ ಮಂಟಪಗಳ ಶೋಭಾ ಯಾತ್ರೆ ನಡೆಯಲಿದೆ.

ಕಾಲಿಡಲು ಸ್ಥಳವಿಲ್ಲದಂತೆ ಸಹಸ್ರಾರು ಪ್ರೇಕ್ಷಕರ ಸಮ್ಮುಖದಲ್ಲಿ ದಶ ಮಂಟಪಗಳು ದೇವ ಲೋಕವನ್ನೇ ಧರೆಗಿಳಿಸುವ ಮೂಲಕ 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಂಯ' ಸಂದೇಶ ಸಾರಲಿವೆ. ದಸರಾ ಸಂಪ್ರದಾಯದಂತೆ ನಗರದ ಪೇಟೆ ಶ್ರೀ ರಾಮ ಮಂದಿರದ ಆಕರ್ಷಕ ಮಂಟಪಕ್ಕೆ ಅಕ್ಟೋಬರ್ 2ರ ರಾತ್ರಿ ದೇವಾಲಂಯದ ಮುಂಭಾಗ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ದಶ ಮಂಟಪಗಳ ಶೋಭಾಯಾತ್ರೆ ಆರಂಭ ಕಾಣಲಿದೆ. ಒಂದೂವರೆ ಶತಮಾನದ ಭವ್ಯ ಇತಿಹಾಸ ಹೊಂದಿರುವ ಪೇಟೆ ಶ್ರೀರಾಮಮಂದಿರದ ಮಂಟಪದಲ್ಲಿ ಈ ಬಾರಿ 'ಶ್ರೀ ಕೃಷ್ಣನಿಂದ ಗೀತೋಪದೇಶ' ಎಂಬ ಪೌರಾಣಿಕ ಕಥೆಯನ್ನಾಧರಿಸಿದ ಸಾರಾಂಶ ಅಳವಡಿಸಲಾಗಿದೆ. ಈ ಮಂಟಪ ಮೊದಲಿಗೆ ನಾಲ್ಕು ಶಕ್ತಿ ದೇವತೆಗಳ ದೇಗುಲಕ್ಕೆ ತೆರಳುವ ಮೂಲಕ ಅಲ್ಲಿನ ಮಂಟಪಗಳನ್ನು ಶೋಭಾಯಾತ್ರೆಗೆ ಆಹ್ವಾನಿಸಲಿದೆ.

ಮಡಿಕೇರಿ ದಸರಾದ ಮೂಲ ಕೇಂದ್ರ ಬಿಂದುವಾದ 4 ಶಕ್ತಿ ದೇವತೆಗಳ ಕರಗಗಳು ಬಣ್ಣಬಣ್ಣದ ಪುಷ್ಪಗಳಿಂದ ಅಲಂಕೃತಗೊಂಡು ತಮ್ಮ ಮೂಲ ಸ್ಥಾನದಲ್ಲಿ ಪೂಜೆ ಸಲ್ಲಿಸಿ ನವ ರಾತ್ರಿಯ ಬೆಳಗಿನ ಜಾವ ಬನ್ನಿ ಮಂಟಪದತ್ತ ತೆರಳಲಿವೆ. ಇದೇ ಸಂದರ್ಭ ಶೋಭಾಯಾತ್ರೆಯಲ್ಲಿ ಸಾಗುವ ದಶ ಮಂಟಪಗಳಿಂದ ಕರಗಗಳು ಪೂಜೆ ಪಡೆಯಲಿವೆ. ಬೆಳಗಿನ ಜಾವ ಬನ್ನಿ ಮಂಟಪಕ್ಕೆ ತೆರಳುವ ಕರಗಗಳು ಮೊದಲು ಬನ್ನಿ ಕಡಿದು ತಮ್ಮ ಮೂಲ ಸ್ಥಾನಕ್ಕೆ ಆಗಮಿಸಲಿವೆ.

ದಶ ಮಂಟಪಗಳ ಸಾರಾಂಶ: ಸುವರ್ಣ ಮಹೋತ್ಸವ ಸಂಭ್ರಮದಲ್ಲಿರುವ ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಮಂಟಪದಲ್ಲಿ ಈ ಬಾರಿ 'ದೇವ ದೇವತೆಗಳ ಕಾಳಗ, ಶರಬಾವತಾರ ಹಾಗೂ ಪ್ರತ್ಯುಂಗ ದೇವಿಯಿಂದ ನರಸಿಂಹನ ಉಗ್ರ ಶಮನ' ಎಂಬ ಕಥಾ ಸಾರಾಂಶ ಅಳವಡಿಸಲಾಗಿದೆ. ಶ್ರೀ ಚೌಡೇಶ್ವರಿ ದೇವಾಲಯ 'ಮಹಾ ಸಾಧ್ವಿ ಸೀತೆಯ ಚಂಡಿಕಾವತಾರ' ಕಥಾ ಸಾರಾಂಶದೊಂದಿಗೆ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳಲಿದೆ. ದೇಚೂರು ಶ್ರೀ ರಾಮ ಮಂದಿರ ದೇವಾಲಯ ಮಂಟಪದಲ್ಲಿ 'ಶ್ರೀ ರಾಮಾಂಜನೇಯ ವೈಭವ', ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯ 'ಪರಶಿವನಿಂದ ಜಲಾಂಧರನ ವಧೆ', ಶ್ರೀ ಕೋಟೆ ಮಹಾಗಣಪತಿ ದೇವಾಲಯ 'ಶ್ರೀ ವಿಘ್ನ ರಾಜನಿಂದ ಮಮತಾಸುರನ ಸಂಹಾರ', ಶ್ರೀ ಕರವಲೆ ಭಗವತಿ ಮಹಿಷ ಮರ್ದಿನಿ ದೇವಾಲಯ 'ಸಂಜೀವಿನಿ ಸಸ್ಯಕ್ಕಾಗಿ ದ್ರೋಣ ಗಿರಿಯನ್ನು ಹೊತ್ತು ತರುವ ಆಂಜನೇಯ', ಶ್ರೀ ಕಂಚಿ ಕಾಮಾಕ್ಷಿ ದೇವಾಲಯ 'ಪರಶುರಾಮನಿಂದ ಕಾರ್ತಿಕ ವೀರನ ಸಂಹಾರ' ಪೇಟೆ ಶ್ರೀ ರಾಮಮಂದಿರ 'ಶ್ರೀ ಕೃಷ್ಣನಿಂದ ಗೀತೋಪದೇಶ' ಹಾಗೂ ಶ್ರೀ ದಂಡಿನ ಮಾರಿಯಮ್ಮ ದೇವಾಲಯದ ಮಂಟಪದಲ್ಲಿ 'ಶಿವನಿಂದ ಅಂಧಾಸುರನ ವಧೆ' ಶ್ರೀ ಕೋದಂಡ ರಾಮ ಮಂಟಪದಲ್ಲಿ 'ಆದಿ ಚುಂಚನಗಿರಿ ಕಾಲ ಭೈರವ ಮಹಿಮೆ' ಎಂಬ ಕಥಾ ಸಾರಾಂಶದ ಚಲನವಲನ ಅಳವಡಿಕೆ ಮಾಡಲಾಗಿದೆ.

ಮೂರ್ಛೆ ತಪ್ಪಿದ ಚಾಲಕ: ನಿಯಂತ್ರಣ ತಪ್ಪಿದ ಟಿಟಿ

ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡ ಸ್ಮಾರಕ ಕಾಂಪೌಂಡ್‌ಗೆ ಡಿಕ್ಕಿ: ಮೂವರಿಗೆ ಗಾಯ



ಮಡಿಕೇರಿ,ಸೆ.30– ಚಾಲಕ ಮೂರ್ಛೆ ತಪ್ಪಿದ ಪರಿಣಾಮ ಟಿ.ಟಿ. ವಾಹನವೊಂದು ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡ ಪ್ರತಿಮೆ ಇರುವ ಸ್ಮಾರಕದ ಕಾಂಪೌಂಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಗಾಯಗೊಂಡಿರುವ ಘಟನೆ ಸಂಭವಿಸಿದೆ.

ದಸರಾ ಜನೋತ್ಸವದ ಹಿನ್ನೆಲೆಯಲ್ಲಿ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಖ್ಯಾತ ಸಂಗೀತಗಾರ ರಘು ದೀಕ್ಷಿತ ಅವರ ಸಂಗೀತ ಕಾರ್ಯಕ್ರಮವನ್ನು ಆಯುಧ ಪೂಜೆ ದಿನ ಸಂಜೆ ಆಯೋಜಿಸಲಾತ್ತು. ಈ ಹಿನ್ನೆಲೆಯಲ್ಲಿ ರಘು ದೀಕ್ಷಿತ್ ಅವರ ಸೌಂಡ್ ಸಿಸ್ಟಮ್ ತಂಡದ ಒಟ್ಟು 10 ಮಂದಿ ಬೆಂಗಳೂರಿನ ಹೆಣ್ಣೂರುನಿಂದ ಟಿಟಿ ವಾಹನದಲ್ಲಿ ಮಡಿಕೇರಿ ಕಡೆಗೆ ಬರುತ್ತಿದ್ದರು. ಮಡಿಕೇರಿ ನಗರ ಪ್ರವೇಶಿಸಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಬರುತ್ತಿದ್ದ ಸಂದರ್ಭ ಟಿ.ಟಿ. ವಾಹನ ಚಾಲಕನು ಏಕಾಏಕಿ ಮೂರ್ಛೆ ತಪ್ಪಿ ಚಾಲಕನ ನಿಯಂತ್ರಣ ಕಳೆದುಕೊಂಡ ಟಿ.ಟಿ. ವಾಹನ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡ ಅವರ ಪ್ರತಿಮೆ ಇರುವ ಸ್ಮಾರಕದ ಕಾಂಪೌಂಡ್‌ಗೆ ಡಿಕ್ಕಿ ಹೊಡೆದಿದೆ.

ಪರಿಣಾಮ ಟಿ.ಟಿ. ವಾಹನ ಚಾಲಕ ಮತ್ತು ಇತರ 3 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಈ ಘಟನೆಯಿಂದ ಪ್ರತಿಮೆಗೆ ಯಾವುದೇ ಹಾನಿಯಾಗಿಲ್ಲವಾದರೂ ಸ್ಮಾರಕದ ಕಾಂಪೌಂಡ್‌ಗೆ ತೀವ್ರ ಹಾನಿ ಸಂಭವಿಸಿದೆ. ಅಪಘಾತದ ತೀವ್ರತೆಗೆ ಟಿ.ಟಿ. ವಾಹನದ ಮುಂಭಾಗ ಜಖಂಗೊಂಡಿದೆ. ಘಟನಾ ಸ್ಥಳಕ್ಕೆ ಅಡಿಷನಲ್ ಎಸ್.ಪಿ. ದಿನೇಶ್ ಕುಮಾರ್, ನಗರ ಸಭಾ ಪೌರಾಯುಕ್ತ ರಮೇಶ್, ಗೌಡ ಸಮಾಜದ ಪ್ರಮುಖರಾದ ಅಂಬೇಕಲ್ ನವೀನ್ ಕುಶಾಲಪ್ಪ, ಸಂಚಾರಿ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶೋಭಾಯಾತ್ರೆಗೆ ಬಿಗಿ ಪೊಲೀಸ್ ಬಂದೋಬಸ್ತ್: ಎಸ್ಪಿ ರಾಮರಾಜನ್

ಮಡಿಕೇರಿ,ಸೆ.30: ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಗೋಣಿಕೊಪ್ಪದಲ್ಲಿ ವೈಭವದ ದಸರಾ ಆಚರಣೆ ಹಿನ್ನೆಲೆಯಲ್ಲಿ ಜನರ ಸುರಕ್ಷತೆಯನ್ನು ಗಮನದಲ್ಲಿಟ್ಟು ಅಗತ್ಯ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ಹಿಂದಿನ ಸಾಲಿಗಿಂತಲೂ ಹೆಚ್ಚಿನ ಪೊಲೀಸ್ ಸಿಬ್ಬಂದಿ ಮತ್ತು ಭದ್ರತಾ ವ್ಯವಸ್ಥೆ ಒದಗಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಮಾಹಿತಿ ನೀಡಿದ ಎಸ್.ಪಿ. ರಾಮರಾಜನ್ ಅವರು ಈ ಬಾರಿ ಮಡಿಕೇರಿ ದಸರಾಕ್ಕೆ ಕೆಎಸ್‌ಆರ್‌ಪಿ, ಡಿಎಆರ್ ಸಹಿತ ಒಟ್ಟು 1500 ಹಾಗೂ ಗೋಣಿಕೊಪ್ಪ ದಸರಾ ಕಾರ್ಯಕ್ರಮಕ್ಕೆ 600 ಪೊಲೀಸ್ ಸಿಬ್ಬಂದಿಗಳನ್ನು ಬಂದೋಬಸ್ತ್‌ಗೆ ಬಳಸಿಕೊಳ್ಳಲಾಗುತ್ತಿದೆ.

ಎಂದಿನಂತೆ ಈ ಬಾರಿಯೂ ಮುಖ ಮುಚ್ಚುವ ಮಾಸ್ಕ್, ಕರ್ಕಶ ಶಬ್ದ ಹೊರ ಸೂಸುವ ತುತ್ತೂರಿಗಳಿಗೆ ದಸರಾ ಉತ್ಸವದಲ್ಲಿ ನಿಷೇಧ ಹೇರಲಾಗಿದೆ. ಇಂತಹ ವಸ್ತುಗಳನ್ನು ಮಾರಾಟ ಮಾಡುವುದನ್ನು ತಡೆಯಲು ನಗರಸಭೆಗೆ ಸೂಚಿಸಲಾಗಿದೆ. ಇದನ್ನು ಬಳಸುವವರ ವಿರುದ್ಧವೂ ಕಾನೂನು ಕ್ರಮ ಜರುಗಲಿದೆ. ಮಹಿಳಾ ಸುರಕ್ಷತೆ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಇಲಾಖೆಯಿಂದ ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದ್ದು, ಇದಕ್ಕಾಗಿಯೇ ಹಲವು ಸುತ್ತಿನ ಸಭೆ ನಡೆಸಿ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ. – ಕೆ.ರಾಮರಾಜನ್.

ಮಹಿಳೆಯರ ಸುರಕ್ಷತೆ, ಜನ ಸಂದಣಿ ಏರ್ಪಡುವ ಸ್ಥಳಗಳಲ್ಲಿ ಸೂಕ್ತ ನಿಯಂತ್ರಣಕ್ಕೆ ಜಂಬೋ ತಂಡಗಳನ್ನು ರಚಿಸಲಾಗಿದೆ. ಓರ್ವ ಮಹಿಳಾ ಮತ್ತು ಓರ್ವ ಎಸ್‌ಐ ದರ್ಜೆಯ ಅಧಿಕಾರಿ ಸಹಿತ 10ರಿಂದ 15 ಮಂದಿ ಸಿಬ್ಬಂದಿಗಳು ಈ ತಂಡದಲ್ಲಿರಲಿದ್ದು, ಅಹಿತಕರ ಘಟನೆಗಳ ಬಗ್ಗೆ ಹದ್ದಿನ ಕಣ್ಣಿಡಲಿದ್ದಾರೆ. ಮಡಿಕೇರಿಯಲ್ಲಿ 10 ಮತ್ತು ಗೋಣಿಕೊಪ್ಪ ದಸರಾದಲ್ಲಿ 4 ಜಂಬೋ ತಂಡಗಳು ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ಹೇಳಿದರು.

ಮಡಿಕೇರಿ ನಗರದಲ್ಲೇ 75 ಅತ್ಯಾಧುನಿಕ ಸಿ.ಸಿ ಕ್ಯಾಮರಾ ಸಹಿತ ಕಮಾಂಡ್ ಸೆಂಟರ್ ತೆರೆಯಲಾಗಿದೆ. ಅದೇ ಮಾದರಿಯಲ್ಲಿ ಗೋಣಿಕೊಪ್ಪದಲ್ಲೂ ಅಗತ್ಯ ಸಿ.ಸಿ. ಕ್ಯಾಮರಾ ಅಳವಡಿಸಿದ್ದು, ಆಯಾ ಠಾಣೆಗಳಲ್ಲಿಯೇ ಕಮಾಂಡ್ ಸೆಂಟರ್ ತೆರೆಯಲಾಗಿದೆ ಎಂದು ಹೇಳಿದರು. ರಸ್ತೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡುವವರ ಮೇಲೆ ಕಣ್ಣಿಡಲಾಗುತ್ತದೆ. ಇಂತಹ ವ್ಯಕ್ತಿಗಳನ್ನು ವಶಕ್ಕೆ ಪಡೆದು ಅವರ ವಿಡಿಯೋ, ಫೋಟೋ ಹಾಗೂ ವಿಳಾಸ ಪಡೆದು ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಅವರು ಇದೇ ಸಂದರ್ಭದಲ್ಲಿ ಎಚ್ಚರಿಸಿದರು.

ಟಿಎಪಿಸಿಎಂಎಸ್ ಚುನಾವಣೆ: ಶೇ.87 ರಷ್ಟು ಮತದಾನ


ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮತ ಚಲಾಯಿಸಿದರು. ಮತ್ತೊಂದು ಚಿತ್ರದಲ್ಲಿ ಸರದಿ ಸಾಲಿನಲ್ಲಿ ನಿಂತಿರುವ ಮತದಾರರು

ಪಾಂಡವಪುರ, ಸೆ.30– ತಾಲೂಕು ಟಿಎಪಿಸಿಎಂಎಸ್‌ನ ಆಡಳಿತ ಮಂಡಳಿಯ 12 ನಿರ್ದೇಶಕ ಸ್ಥಾನಕ್ಕೆ ಮಂಗಳವಾರ ಬಿರುಸಿನ ಮತದಾನ ನಡೆಯಿತು.

ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಮತಕೇಂದ್ರದಲ್ಲಿ ಷೇರುದಾರ ಮತದಾರರು ಬೆಳಿಗ್ಗೆಯಿಂದಲೇ ಆಗಮಿಸಿ ಮತ ಚಲಾಯಿಸಿದರು. ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಿತು. ಮತದಾನಕ್ಕಾಗಿ 13 ಮತಗಟ್ಟೆಗಳನ್ನು ತೆರೆಯಲಾಗಿತ್ತು. 4892 ಮತಗಳ ಪೈಕಿ 4244 ಮತಗಳು ಚಲಾವಣೆಗೊಂಡಿದ್ದು ಶೇ.86.75 ಚಲಾವಣೆಯಾಗಿವೆ.

ಬೆಳಿಗ್ಗೆಯಿಂದಲೇ ಆರಂಭಗೊಂಡ ಬಿರುಸಿನ ಮತದಾನ ಮಧ್ಯಾಹ್ನ ಆಗುತ್ತಿದ್ದಂತೆಯೇ ಮತಗಟ್ಟೆಯತ್ತ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಆಗಮಿಸಿ ಸರತಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು. ವಯೋವೃದ್ಧರು, ವಿಕಲಚೇತನರನ್ನು ವಾಹನಗಳ ಮೂಲಕ ಮತ ಕೇಂದ್ರಗಳಿಗೆ ಕರೆ ತಂದು ಮತಚಲಾಯಿಸಲಾಯಿತು

ವಿಕಲಚೇತನರಿಗೆ ಸಮಸ್ಯೆ: ಸರಕಾರಿ ಶಾಲೆಯ ನೆಲಮಹಡಿಯಲ್ಲಿ ಕೊಠಡಿಗಳು ಖಾಲಿ ಇದ್ದರೂ ಸಹ ಚುನಾವಣಾಧಿಕಾರಿಗಳು ಮೊದಲ ಹಾಗೂ ಎರಡನೇ ಮಹಡಿಯ ಕೊಠಡಿಗಳಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಿದ್ದರು. ಇದರಿಂದಾಗಿ ವಯೋವೃದ್ದರು, ವಿಕಲಚೇತನರು ಹಾಗೂ ಅನಾರೋಗ್ಯಕ್ಕೆ ಒಳಗಾದವರು ಪಡಿಪಾಟಲು ಪಡಬೇಕಾಯಿತು. ವೃದ್ದರು, ವಿಕಲಚೇತನರು ಮತ ಚಲಾಯಿಸಲು ಅರ್ಧ ಗಂಟೆ ಕಾದು ಕುಳಿತು ಮತಚಲಾಯಿಸ ಬೇಕಾಯಿತು. ವೃದ್ಧರು, ವಿಕಲಚೇತನರು ಮತ ಕೇಂದ್ರದಲ್ಲಿ ಕೆಳಗಡೆ ಕುಳಿತು ತಮ್ಮ ಗುರುತಿನ ಚೀಟಿಯನ್ನು ಆಯಾ ಮತಗಟ್ಟೆಗೆ ಬೇರೆಯವರಿಂದ ಕಳುಹಿಸಿಕೊಟ್ಟರೆ ಆಯಾ ಮತ ಕೇಂದ್ರ ಅಧಿಕಾರಿಗಳು ಬ್ಯಾಲೆಟ್ ಪತ್ರಿಕೆಯೊಂದಿಗೆ ಕೆಳಗಡೆ ಬಂದು ಮತ ಹಾಕಿಸಿಕೊಂಡು ತೆರಳುತ್ತಿದ್ದರು, ಈ ವ್ಯವಸ್ಥೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಮತದಾರರು ಬೇಸರ ವ್ಯಕ್ತಪಡಿಸಿದರು.

ಟಿಎಪಿಸಿಎಂಎಸ್ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಎಲ್ಲಾ ಕ್ಷೇತ್ರ ದಲ್ಲೂ ಗೆಲುವು ಸಾಧಿಸಿ ಸಂಘದ ಆಡಳಿತ ಚುಕ್ಕಾಣಿಯನ್ನು ಹಿಡಿಯಲಿದ್ದಾರೆ. ಮತದಾರರು ನಮ್ಮ ಅಭ್ಯರ್ಥಿಗಳನ್ನು ಬೆಂಬಲಿಸಲಿದ್ದಾರೆ ಎನ್ನುವ ವಿಶ್ವಾಸವಿದೆ ಎಂದು ಸುದ್ದಿಗಾರರ ಬಳಿ ಆಶಯ ವ್ಯಕ್ತಪಡಿಸಿದರು.

ಜನಮನ ಗೆದ್ದ ಕಾವೇರಿ ಆರತಿ

ಐದು ದಿನಗಳ ಕಾವೇರಿ ಆರತಿಗೆ ವರ್ಣರಂಜಿತ ತೆರೆ


ಗಂಗಾರತಿ ಮಾದರಿಯಲ್ಲಿ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿಯನ್ನು ಮಾಡಿದರು.

ಕೃಷ್ಣರಾಜಸಾಗರ, ಸೆ.30– ರಾಜ್ಯದ ಇತಿಹಾಸದಲ್ಲೇ ಪ್ರಪ್ರಥಮವಾಗಿ ನಡೆದ 'ಕಾವೇರಿ ಆರತಿ' ಕಾರ್ಯಕ್ರಮ ಕೇವಲ ರಾಜ್ಯದಲ್ಲಿ ಮಾತ್ರವಲ್ಲದೆ ದೇಶ ವಿದೇಶಗಳಲ್ಲೂ ಕೂಡ ಮೆಚ್ಚುಗೆಗೆ ಪಾತ್ರವಾಗಿದೆ. ಸೆ.26ರಿಂದ 30ರವರೆಗೆ ಐದು ದಿನಗಳ ಕಾಲ ನಡೆದ ಕಾವೇರಿ ಆರತಿಯನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡಿದ್ದು, ಮಂಗಳವಾರ ರಾತ್ರಿ ಕಾರ್ಯಕ್ರಮಕ್ಕೆ ವರ್ಣರಂಜಿತ ತೆರೆ ಬಿದ್ದಿತು.

ಕಾಶಿಯಲ್ಲಿ ಗಂಗಾರತಿ ನೋಡಲು ಸಾಧ್ಯವಾಗದವರು ಕೆಆರ್‌ಎಸ್‌ನ ಬೃಂದಾವನದಲ್ಲಿ ನಡೆದ ಕಾವೇರಿ ಆರತಿಯನ್ನು ಕಂಡು ಭಾವುಕರಾಗಿ ಕಾವೇರಿ ಮಾತೆಗೆ ವಂದಿಸಿ ನಮಿಸಿದರು. ಇದು ಕೇವಲ ದಸರಾಗೆ ಮಾತ್ರ ಸೀಮಿತವಾಗದೆ ಪ್ರತಿ ವಾರವೂ ಈ ಕಾರ್ಯಕ್ರಮ ನೆರವೇರಬೇಕೆಂಬ ಮಾತುಗಳು ಕೂಡ ಸಾರ್ವಜನಿಕ ವಲಯದಲ್ಲಿ ಬಲವಾಗಿ ಕೇಳಿಬಂದವು.

ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಈ ಪೂಜಾ ಕೈಂಕರ್ಯ ಉತ್ತರ ಭಾರತ ಶೈಲಿ ಜೊತೆಗೆ ದಕ್ಷಿಣ ಭಾರತದ ಸಂಪ್ರದಾಯ ಸಮ್ಮಿಲನವಾಗಿತ್ತು. ಕಾವೇರಿ ಆರತಿ ರಾಜ್ಯದ ಇತಿಹಾಸದಲ್ಲಿ ಹೊಸ ಮೈಲಿಗಲ್ಲನ್ನು ಸೃಷ್ಟಿಸಿದೆ. ವಿಶ್ವಪ್ರಸಿದ್ಧ ಕೆಆರ್‌ಎಸ್‌ಗೆ ಹೊಸ ಸ್ವರೂಪವನ್ನು ತಂದುಕೊಡುವುದರ ಜೊತೆಗೆ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಕ್ಕಂತಾಗಿದೆ.

ವ್ಯಾಪಾರ ವಹಿವಾಟು ಹೆಚ್ಚಳ: ಸೆ26ರಿಂದ ಕಾವೇರಿ ಆರತಿ ಕಾರ್ಯಕ್ರಮ ಆರಂಭವಾದ ಬಳಿಕ ಕೆಆರ್‌ಎಸ್‌ಗೆ ಆಗಮಿಸಿದ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಗಣ್ಯರ ದಂಡು: ಕಡೆಯ ದಿನದ ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ, ವಾಗ್ಮಿ ಪ್ರೊ. ಕೃಷ್ಣೇಗೌಡ, ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ ಭಾಗವಹಿಸಿದ್ದರು. ವಾರಣಾಸಿ ತಂಡದ ಕಾವೇರಿ ಆರತಿ ಇಂದು ಸಹ ಗಮನ ಸೆಳೆಯಿತು. ಬಳಿಕ ಖ್ಯಾತ ಗಾಯಕ ಹೇಮಂತ್ ಮತ್ತು ತಂಡದಿಂದ ಸಂಗೀತ ರಸಸಂಜೆ ಕಾರ್ಯಕ್ರಮ ಜರುಗಿತು.

ಕಿಕ್ಕೇರಿಯಲ್ಲಿ ಸ್ವಚ್ಛತೆ ಸೇವೆ–ಪಾಕ್ಷಿಕ ಕಾರ್ಯಕ್ರಮ

ಕಿಕ್ಕೇರಿ: ಇಡೀ ಸಮಾಜದಲ್ಲಿನ ಪರಿಸರ ನೈರ್ಮಲ್ಯತೆಗೆ ಜೀವನವನ್ನೇ ಮುಡಿಪಾಗಿಟ್ಟಿರುವ ಸಫಾಯಿ, ಪೌರಕಾರ್ಮಿಕರ ಆರೋಗ್ಯ ಬಹುಮುಖ್ಯವಾಗಿದೆ ಎಂದು ಶಾಸಕ ಎಚ್.ಟಿ. ಮಂಜು ಹೇಳಿದರು. ಪಟ್ಟಣದ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಸ್ವಚ್ಛತೆ ಸೇವೆ–ಪಾಕ್ಷಿಕ ಕಾರ್ಯಕ್ರಮದಲ್ಲಿ ಮಾತನಾಡಿ, ಗ್ರಾಮ ಶುಚಿತ್ವ ದೇಶದ ಆರ್ಥಿಕ, ಆರೋಗ್ಯ ಸುಸ್ಥಿರತೆಗೆ ಸಾಕಾರವಾಗಲಿದೆ. ಇಂತಹ ದಿಟ್ಟ ಕೆಲಸವನ್ನು ಅಸಹ್ಯ ಪಡದೆ ಮಾಡುವ ಪೌರಕಾರ್ಮಿಕರನ್ನು ಗೌರವಿ ಸುವ ಕೆಲಸ ಎಲ್ಲರಿಂದ ಆಗಬೇಕಿದೆ ಎಂದರು.

ಹಾವು ಕಡಿತಕ್ಕೆ ರೈತ ಮಹಿಳೆ ಬಲಿ


ಗೌರಮ್ಮ

ಕಿಕ್ಕೇರಿ, ಸೆ.30–ತೋಟದಲ್ಲಿ ಸೇವಂತಿಗೆ ಹೂವು ಕೀಳಲು ತೆರಳಿದ್ದಾಗ ವಿಷಪೂರಿತ ಹಾವು ಕಡಿದು ರೈತ ಮಹಿಳೆಯೋರ್ವಳು ಸಾವಿಗೀಡಾದ ಘಟನೆ ಮಂಗಳವಾರ ಜರುಗಿದೆ.

ಹೋಬಳಿಯ ಮರಿಯನ ಹೊಸೂರು ಗ್ರಾಮದ ರೈತ ಕೆಂಪೇಗೌಡರ ಪತ್ನಿ ಗೌರಮ್ಮ (45) ಮೃತ ಮಹಿಳೆ. ಮಂಗಳವಾರ ತಮ್ಮ ತೋಟದಲ್ಲಿ ಬೆಳೆಯಲಾಗಿದ್ದ ಸೇವಂತಿಗೆ ಹೂವು ಕೀಳಲು ಬೆಳಗ್ಗೆ ತೆರಳಿದ್ದರು. ಹೂವು ಕೀಳುವಾಗ ಮುಖದ ಮೂಗಿನ ಭಾಗಕ್ಕೆ ವಿಷಪೂರಿತ ಹಾವು ಕಡಿದಿದೆ. ತೀವ್ರ ಅಸ್ವಸ್ಥರಾದ ಇವರನ್ನು ಚನ್ನರಾಯಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮಹಿಳೆ ಆಸ್ಪತ್ರೆಯಲ್ಲಿ ಮೃತರಾದರು. ಮೃತ ಮಹಿಳೆ ಪತಿ, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

ಹರಿಹರಪುರ ಹಿರಿಯ ವಿದ್ಯಾರ್ಥಿಗಳಿಂದ ಗುರುವಂದನೆ


ಗುರುವಂದನಾ ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿಗಳು ಗುರುಗಳನ್ನು ಸನ್ಮಾನಿಸಿದರು.

ಕೆ.ಆರ್.ಪೇಟೆ: ನಮ್ಮಿಂದ ಪಾಠ ಕಲಿತ ವಿದ್ಯಾರ್ಥಿಗಳು 25ವರ್ಷ ಗಳ ನಂತರ ಒಂದೆಡೆ ಸೇರಿ ನಮ್ಮನ್ನು ನೆನಪಿಸಿಕೊಂಡು ಗುರುವಂದನೆ ಸಲ್ಲಿಸಿರುವುದು, ನಮ್ಮ ಶಿಕ್ಷಕ ವೃತ್ತಿ ಜೀವನದ ಸಾರ್ಥಕತೆಯನ್ನು ಸೂಚಿಸುತ್ತದೆ ಎಂದು ನಿವೃತ್ತ ಮುಖ್ಯ ಶಿಕ್ಷಕ ಕೆ.ಮಾದೇಗೌಡ ಪ್ರಶಂಸಿಸಿದರು.

ತಾಲೂಕಿನ ಹರಿಹರಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸ ಮಾಡಿರುವ ಹಿರಿಯ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವು ಪಾಠ ಮಾಡುವಾಗ ಕಲಿಕೆಯ ಮಟ್ಟ ಶ್ರೇಷ್ಠವಾಗಿರಬೇಕು ಎಂಬ ಹಿನ್ನೆಲೆಯಲ್ಲಿ ನಾನಾ ಕಾರಣಕ್ಕಾಗಿ ನಿಮ್ಮ ಭವಿಷ್ಯದ ದೃಷ್ಟಿಯಿಂದ ದಂಡಿಸಿರುತ್ತೇವೆ. ನಮ್ಮ ಪೆಟ್ಟಿನಿಂದ ನೀವು ಚೆನ್ನಾಗಿ ಓದಿ ಉನ್ನತ ಸ್ಥಾನವನ್ನು ಗಿಟ್ಟಿಸಿದ್ದೀರಿ. ಇದು ಶಿಕ್ಷಕರಾದ ನಮಗೆ ಹೆಚ್ಚು ಸಂತೋಷ ಕೊಡುತ್ತದೆ ಎಂದರು.

ನಿವೃತ್ತ ಉಪನ್ಯಾಸಕ ಜೈನಹಳ್ಳಿ ಜೆ.ಜಿ.ರಾಜೇಗೌಡ, ಬಿ.ಸಿ.ವಿಜಯ್‌ಕುಮಾರ್ ಮಾತನಾಡಿ ಹಳೇ ದಿನಗಳನ್ನು ನೆನಪಿಸಿದರು.

ಗೌರವ ಸಮರ್ಪಣೆ: ನಿವೃತ್ತ ಶಿಕ್ಷಕರಾದ ಕೆ.ಮಾದೇಗೌಡರು, ಜೆ.ಜಿ.ರಾಜೇಗೌಡರು, ಎಂ.ಎನ್.ನಾಗೇಶ್, ಕೆ.ಕೆ.ಪುಟ್ಟಣ್ಣಯ್ಯ, ಬಿ.ಎನ್.ಪರಶಿವಮೂರ್ತಿ, ಎಂ.ಎಸ್. ರಾಜಮ್ಮ, ಡಾ.ಬಿ.ಸಿ.ವಿಜಯ್‌ಕುಮಾರ್, ಎಂ.ಎಸ್.ವೆಂಕಟರಾಮು, ಎ.ಬಿ.ಮಹಾದೇವ್, ದಿವಂಗತ ಬಿ.ಲತಾ ಟೀಚರ್ ಅವರ ಪತಿ ನಿವೃತ್ತ ಸೈನಿಕ ಮಲ್ಲಿಕಾರ್ಜುನಸ್ವಾಮಿ, ತಾಯಿಯ ಹೆಸರಿನಲ್ಲಿ ಶಾಲೆಗೆ 50 ಸಾವಿರ ರೂ.ಗಳ ಪ್ರೊಜೆಕ್ಟರ್ ನೀಡಿದ ಪುತ್ರಿ ನಾರಾಯಣ ಆಸ್ಪತ್ರೆಯ ವೈದ್ಯೆ ಡಾ.ದರ್ಶಿನಿ ಅವರುಗಳಿಗೆ ಗುರುಕಾಣಿಕೆ ನೀಡಿ, ಫಲತಾಂಬೂಲ ನೀಡಿ, ಸನ್ಮಾನಿಸಿ ಗೌರವಿಸುವ ಮೂಲಕ ಗುರುವಂದನೆ ಸಲ್ಲಿಸಿದರು.

ಕಬ್ಬಿನ ಗದ್ದೆಯಲ್ಲಿ ಚಿರತೆ ಮರಿಗಳು ಪ್ರತ್ಯಕ್ಷ

ಅರಣ್ಯಾಧಿಕಾರಿಗಳಿಂದ ರಕ್ಷಣೆ, ಗ್ರಾಮಸ್ಥರಲ್ಲಿ ಆತಂಕ



ಹನೂರು: ತಾಲೂಕಿನ ಕಾಂಚಳ್ಳಿ–ಬಸಪ್ಪನ ದೊಡ್ಡಿ ಮಾರ್ಗ ಮಧ್ಯದಲ್ಲಿ ಬರುವ ಪ್ರಕಾಶ ಎಂಬುವರ ಕಬ್ಬಿನ ಗದ್ದೆಯಲ್ಲಿ ಎರಡು ಚಿರತೆ ಮರಿಗಳು ಪ್ರತ್ಯಕ್ಷವಾಗಿವೆ.

ತಾಲೂಕಿನ ಹನೂರು ಪಟ್ಟಣದ ನಿವಾಸಿ ಪ್ರಕಾಶ್ ಎಂಬುವರಿಗೆ ಸೇರಿದ ಬಸಪ್ಪನ ದೊಡ್ಡಿ ಗ್ರಾಮದ ಗದ್ದೆಯಲ್ಲಿ ಕಬ್ಬು ಕಟಾವು ಮಾಡುವ ವೇಳೆ ಎರಡು ಚಿರತೆ ಮರಿಗಳು ಪ್ರತ್ಯಕ್ಷವಾಗಿದ್ದು ರೈತರನ್ನು ಮತ್ತಷ್ಟು ಆತಂಕಕ್ಕೀಡು ಮಾಡಿದೆ.

ಮಾಹಿತಿ ತಿಳಿಯುತ್ತಿದ್ದಂತೆ ಹನೂರು ಬಫರ್ ವಲಯದ ವಲಯ ಅರಣ್ಯಾಧಿಕಾರಿ ನಾಗರಾಜು ಮತ್ತು ಸಿಬ್ಬಂದಿ ವರ್ಗದವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಎರಡು ಚಿರತೆ ಮರಿಗಳನ್ನು ಸುರಕ್ಷಿತವಾಗಿ ರಕ್ಷಣೆ ಮಾಡಿ, ಹಿರಿಯ ಅಧಿಕಾರಿಗಳ ಮಾರ್ಗದರ್ಶನದ ಮೇರೆಗೆ ಚಿರತೆಯನ್ನು ಬೇರೆ ಕಡೆ ಸ್ಥಳಾಂತರಿಸಲು ಕ್ರಮ ವಹಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಚಿರತೆ ಸೆರೆ ಹಿಡಿಯಲು ಆಗ್ರಹ: ಮರಿ ಚಿರತೆ ಜೊತೆಗೆ ತಾಯಿ ಸಹ ಇದೆ ಎಂದು ಕಬ್ಬು ಕಟಾವು ಮಾಡಿರುವ ಕಾರ್ಮಿಕರು ಹೇಳಿದ್ದು ತಕ್ಷಣ ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆಯ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹ ಮಾಡಿದ್ದಾರೆ.

ಆತಂಕದಲ್ಲಿ ಜನರು: ಗುಂಡಾಪುರ, ಬಸಪ್ಪನ ದೊಡ್ಡಿ, ಗಂಗನ ದೊಡ್ಡಿ ಗ್ರಾಮಗಳ ವ್ಯಾಪ್ತಿಯಲ್ಲಿ ಈ ಹಿಂದೆಯೇ ಚಿರತೆ ಹಾವಳಿ ಹೆಚ್ಚಾಗಿದ್ದು ಕುರಿ, ಮೇಕೆ ಹಾಗೂ ನಾಯಿ ಸೇರಿದಂತೆ ಸಾಕುಪ್ರಾಣಿಗಳನ್ನು ಬಲಿ ಪಡೆದು ಸಾಕಷ್ಟು ಸಾವು ನೋವುಗಳನ್ನು ಉಂಟು ಮಾಡಿದ್ದ ನಿದರ್ಶನವು ಇದೆ. ಈ ಸಂಬಂಧ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಅಮ್ಜದ್ ಖಾನ್ ಮಾತನಾಡಿ, ರೈತರಿಗೆ ಉಪಟಳ ನೀಡುತ್ತಿರುವ ಚಿರತೆಯನ್ನು ಸೆರೆ ಹಿಡಿಯುವಂತೆ ಒತ್ತಾಯಿಸಿದ್ದರು, ಈ ಹಿನ್ನೆಲೆ ಚಿರತೆ ಸೆರೆ ಹಿಡಿಯಲು ಬೋನು ಸಹ ಅಳವಡಿಸಲಾಗಿತ್ತು. ಆದರೆ ಚಾಲಾಕಿ ಚಿರತೆ ಬಲೆಗೆ ಬಿದ್ದಿರಲಿಲ್ಲ. ಇದೀಗ ಮತ್ತೆ ಚಿರತೆ ಮರಿಗಳು ಪ್ರತ್ಯಕ್ಷವಾಗಿರುವುದು ಮತ್ತಷ್ಟು ಚಿರತೆಗಳು ಇರಬಹುದು ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ ಹನೂರು ಬಫರ್ ವಲಯದ ವಲಯ ಅರಣ್ಯಾಧಿಕಾರಿ ನಾಗರಾಜು ಕೆಎಂ, ರಾಮಾಪುರ ವಲಯ ಅರಣ್ಯ ಅಧಿಕಾರಿ ಉಮಾಪತಿ, ಸಿಬ್ಬಂದಿಗಳಾದ ಗಿರೀಶ್,ನಂದೀಶ್, ಅಶೋಕ್, ಚಿನ್ನಸ್ವಾಮಿ ಸುರೇಶ್ ಭಾಗವಹಿಸಿದ್ದರು.

ಒಣ ಗಾಂಜಾ ಸಾಗಿಸುತ್ತಿದ್ದ ಇಬ್ಬರ ಬಂಧನ

ಯಳಂದೂರು, ಸೆ.30– ತಾಲೂಕಿನ ಬಿ.ಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಪುರಾಣಿ ಪೋಡು ಬಸ್ ನಿಲ್ದಾಣದ ಬಳಿ ಅಕ್ರಮವಾಗಿ ಗಾಂಜಾವನ್ನು ಸಾಗಿಸುತ್ತಿದ್ದ ಇಬ್ಬರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಅಕ್ರಮವಾಗಿ ಒಣ ಗಾಂಜಾವನ್ನು ಸಾಗಿಸುತ್ತಿದ್ದ ಖಚಿತ ಮಾಹಿತಿಯನ್ನು ಆಧರಿಸಿ ದಾಳಿ ನಡೆಸಿದ ಅಧಿಕಾರಿಗಳು ಅವರ ಬಳಿ 575 ಗ್ರಾಂ, ಗಾಂಜಾವನ್ನು ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ದಾಳಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಾಸ್ಕರ್ ಅಕ್ಷಯ್ ಅಶೋಕ್, ಆರ್‌ಎಫ್‌ಒ ಸತೀಶ್ ಕುಮಾರ್, ಡಿಆರ್‌ಎಫ್‌ಒ ಗಳಾದ ಕೃಷ್ಣಮೂರ್ತಿ, ಮಧು, ಭಾನುಪ್ರಕಾಶ್, ಯಳಂದೂರು ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಕಾಶ್, ಸಿಬ್ಬಂದಿಗಳಾದ ಕೆ.ಪಿ.ನಾಗೇಂದ್ರ, ಜಡೇಸ್ವಾಮಿ, ಇದ್ದರು.

ಕಾಡಾನೆ ದಾಳಿಗೆ ವಿಕಲಚೇತನ ಬಲಿ



ಚಾಮರಾಜನಗರ: ಜಿಲ್ಲೆಯ ಗಡಿ ಭಾಗದ ಪುಣಜನೂರು–ತಾಳವಾಡಿ ಮಾರ್ಗದಲ್ಲಿರುವ ಎತ್ತಗಟ್ಟಿ ಬೆಟ್ಟದ ಬಳಿ ಕಾಡಾನೆ ದಾಳಿಗೆ ಒಳಗಾಗಿ ವಿಕಲಚೇತನ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಮಿಳುನಾಡಿನ ಕೃಷ್ಣಪುರದ ಮಹದೇವ ಮೃತಪಟ್ಟ ವ್ಯಕ್ತಿ. ಇವರು ಮಂಗಳವಾರ ಪುಣಜನೂರು–ತಾಳವಾಡಿ ಮಾರ್ಗದಲ್ಲಿರುವ ಮಹದೇಶ್ವರ ದೇವಸ್ಥಾನಕ್ಕೆ ಹೋಗಿ ಬರುವಾಗ ಬೆಟ್ಟದ ಬಳಿ ಆನೆ ದಾಳಿ ನಡೆದಿದೆ.

ಸ್ಥಳಕ್ಕೆ ಚಾಮರಾಜನಗರ ಗ್ರಾಮಾಂತರ ಠಾಣೆಯ ಪೊಲೀಸರು ಹಾಗೂ ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತಾರಣ್ಯದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆಗೆ ಶಾಸಕರಿಂದ ಚಾಲನೆ


ದೀಕ್ಷಾಭೂಮಿ ಯಾತ್ರೆಗೆ ಶಾಸಕ ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಚಾಮರಾಜನಗರ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೈಗೊಂಡಿರುವ ಡಾ.ಬಿ.ಆರ್.ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಿಂದ ಎರಡು ಬಸ್ಸುಗಳಲ್ಲಿ ಹೊರಟ 95 ಮಂದಿ ತಂಡಕ್ಕೆ ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಬೀಳ್ಕೊಟ್ಟು, ಶುಭ ಕೋರಿದರು.

ಇದಕ್ಕೂ ಮೊದಲು ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ. ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಯಾತ್ರೆಗೆ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಜಿ.ಪಂ.ಸಿಇಓ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ, ನಂಜುಂಡೇಗೌಡ, ದಲಿತ ಮುಖಂಡರಾದ ಸಿ.ಕೆ.ಮಂಜುನಾಥ್, ಸಿ.ಎಂ.ಕೃಷ್ಣಮೂರ್ತಿ, ಆರ್.ಬಸವರಾಜು, ಸಿ.ಎಂ.ಶಿವಣ್ಣ, ಬುದ್ಧ ಮಹೇಶ್, ಕಂದಹಳ್ಳಿ ನಾರಾಯಣ್, ಬ್ಯಾಡಮೂಡ್ಲು ಬಸವಣ್ಣ, ಸಿದ್ದರಾಜು ಇತರರು ಹಾಜರಿದ್ದರು.

ಬಲಗೈ ಸಮುದಾಯ ಧರ್ಮದ ಕಾಲಂನಲ್ಲಿ ಬೌದ್ಧ ಎಂದೇ ನಮೂದಿಸಲು ಮನವಿ


ವಿಚಾರ ಸಂಕಿರಣ ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಚಾಮರಾಜನಗರ: ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಹೊಲೆಯರ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಎಲ್ಲ ಗಣ್ಯರು ಜಾತಿಗಣತಿ ಸಮೀಕ್ಷೆಯಲ್ಲಿ ಧರ್ಮ ಕಾಲಂನಲ್ಲಿ ಬೌದ್ಧ, ಜಾತಿ ಕಾಲಂನಲ್ಲಿ ಪರಿಶಿಷ್ಠಜಾತಿ, ಉಪಜಾತಿ ಕಾಲಂನಲ್ಲಿ ಹೊಲೆಯ ಎಂದೇ ನಮೂದಿಸುವಂತೆ ಸಮುದಾಯದವರಲ್ಲಿ ಮನವಿ ಮಾಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ನಡೆದ ಹೊಲಯರ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಜಾತಿ ಗಣತಿ ಸಮೀಕ್ಷೆಯಲ್ಲಿ ನಾವು ಧರ್ಮ: ಬೌದ್ಧ, ಜಾತಿ:ಪರಿಶಿಷ್ಟ ಜಾತಿ, ಉಪಜಾತಿ: ಹೊಲಯ ಎಂದೇ ನಮೂದಿಸೋಣ. ನಮ್ಮ ದೇಶದಲ್ಲಿರುವ ಎಲ್ಲ ಸಮುದಾಯಗಳವರು ಮೀಸಲಾತಿ ಪ್ರಯೋಜನ ಪಡೆಯುತ್ತಿದ್ದಾರೆ. ನಾವು ಬಲಗೈ ಸಂಬಂಧಿತ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪಡೆಯಲು ಹೋರಾಟ ನಡೆಸಬೇಕು ಎಂದು ತಿಳಿಸಿದರು.

ಜಾತಿ ಸಮೀಕ್ಷೆ ವಿರೋಧಿಸಿವರೇ ಈಗ ಜಾತಿ ಸಮೀಕ್ಷೆ ನಡೆಸುವುದಾಗಿ ಹೇಳುತ್ತಿದ್ದಾರೆ. ಕೆನೆ ಪದರ ಮಾನದಂಡ ಮೀಸಲಾತಿ ಪಡೆಯುತ್ತಿರುವ ಎಲ್ಲ ಜಾತಿಗಳಿಗೂ ಅನ್ವಯವಾಗಬೇಕು. ಕೇವಲ ಪರಿಶಿಷ್ಟ ಜಾತಿಗಳಿಗೆ ಸೀಮಿತವಾಗಬಾರದು. ಈ ನಿಟ್ಟಿನಲ್ಲಿ ನಾವು ಹೋರಾಟ ನಡೆಸಬೇಕಿದೆ ಎಂದು ಸಲಹೆ ನೀಡಿದರು.

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಆದಿಕರ್ನಾಟಕ, ಆದಿ ದ್ರಾವಿಡ, ಇದನ್ನು ಬರೆಯಿಸಬೇಡಿ. ಧರ್ಮ ಕಾಲಂನಲ್ಲಿ ಬೌದ್ಧ ಎಂದು ಬರೆಸಿ ದರೆ ಯಾವುದೇ ತೊಂದರೆ ಆಗಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಉರಿಲಿಂಗಿ ಪೆದ್ದಿಮಠದ ಜ್ಞಾನ ಪ್ರಕಾಶಸ್ವಾಮಿಜೀ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ರಾಜು ಮಾತನಾಡಿದರು.

ಜಂಬೂಸವಾರಿ ಪುಷ್ಪಾರ್ಚನೆಯ ಅಂತಿಮ ಹಂತದ ತಾಲೀಮು



ಮೈಸೂರು ಅರಮನೆ ಆವರಣದಲ್ಲಿ ಮಂಗಳವಾರ ನಡೆದ ಜಂಬೂಸವಾರಿಯ ಅಂತಿಮ ತಾಲೀಮಿನಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸಿಎಫ್ ಡಾ.ರವಿಶಂಕರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಅಂಬಾರಿ ಆನೆ ಅಭಿಮನ್ಯುವಿನ ಮೇಲೆ ಪುಷ್ಪಾರ್ಚನೆ ಮಾಡಿದರು.

> ಜಂಬೂಸವಾರಿಗೆ ಕಾಡಿನಿಂದ ನಾಡಿಗೆ ಆಗಮಿಸಿರುವ 14 ಆನೆಗಳು ಎಲ್ಲಾ ತಾಲೀಮಿನಲ್ಲೂ ಉತ್ತಮವಾಗಿ ಪ್ರದರ್ಶನ ನೀಡಿವೆ. ಜಂಬೂಸವಾರಿ ವೇಳೆ ಸಾರ್ವಜನಿಕರು ಕೂಗಾಡಿ ಆನೆಗಳಿಗೆ ತೊಂದರೆ ಕೊಡದೆ ಶಾಂತ ರೀತಿಯಲ್ಲಿ ವರ್ತಿಸಬೇಕು.
> - ಡಾ.ರವಿಶಂಕರ್,
> ಸಿಎಫ್, ಮೈಸೂರು ವೃತ್ತ



ಪಥಸಂಚಲನದಲ್ಲಿ ಪಾಲ್ಗೊಂಡಿರುವ ಪೊಲೀಸ್ ತುಕಡಿ ಹಾಗೂ ಪೊಲೀಸ್ ಬ್ಯಾಂಡ್ ವಾದನದ ತಂಡ

ಮೈಸೂರು, ಸೆ.30(ಎಂಟಿವೈ)– ಜಂಬೂಸವಾರಿಗೆ ಕ್ಷಣಗಣನೆ ಆರಂಭವಾಗಿದ್ದು, ಮೈಸೂರು ಅರಮನೆ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ ಗಜಪಡೆ ಹಾಗೂ ಅಶ್ವಪಡೆ ಸೇರಿದಂತೆ ಜಂಬೂಸವಾರಿಯ ಪುಷ್ಪಾರ್ಚನೆಯ ಅಂತಿಮ ತಾಲೀಮು ಯಶಸ್ವಿಯಾಗಿ ನಡೆಯಿತು.

ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಗೆ ಕೇವಲ 24 ಗಂಟೆ ಮಾತ್ರವಿದೆ. ಈ ಬಾರಿ ಚಿನ್ನದ ಅಂಬಾರಿ ಹೊರುವ ಅಭಿಮನ್ಯುವಿನ ಮೇಲೆ ಅಂಬಾರಿಯಲ್ಲಿ ಆಸೀನಳಾಗುವ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ತಾಲೀಮಿನಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಅರಣ್ಯ ಇಲಾಖೆಯ ಮೈಸೂರು ವೃತ್ತದ ಸಿಎಫ್ ಡಾ.ರವಿಶಂಕರ್, ಡಿಸಿಎಫ್ ಡಾ. ಐ.ಬಿ.ಪ್ರಭುಗೌಡ ಪುಷ್ಪಾರ್ಚನೆ ಮಾಡುವ ಮೂಲಕ ಅಂತಿಮ ತಾಲೀಮು ವೀಕ್ಷಿಸಿದರು.

ಜಂಬೂಸವಾರಿ ಮೆರವಣಿಗೆಯ ದಿನ ಅರಮನೆ ಆವರಣದಲ್ಲಿ ಗಜಪಡೆ ಮಾರ್ಗ ಪರಿಚಯಿಸುವುದರೊಂದಿಗೆ ಇಂದು ಪೂರ್ಣ ಪ್ರಮಾಣದ ತಾಲೀಮು ನಡೆಸಲಾಯಿತು. ಅಂಬಾರಿ ಅಭಿಮನ್ಯುವಿನೊಂದಿಗೆ ಕುಮ್ಕಿ ಆನೆಗಳಾದ ಕಾವೇರಿ ಮತ್ತು ರೂಪಾ, ಗಾದಿ, ನಮ್ದಾ ಕಟ್ಟುವ ಕೋಡಿ ಸೋಮೇಶ್ವರ ದೇವಾಲಯದ ಬಳಿಯಿಂದ ಅಂಬಾರಿ ಕಟ್ಟುವ ಸ್ಥಳಕ್ಕೆ ಕರೆತರಲಾಯಿತು. ಅಂಬಾರಿ ಕಟ್ಟಿದ ನಂತರ ಪುಷ್ಪಾರ್ಚನೆ ಮಾಡುವ ಸ್ಥಳಕ್ಕೆ ಕರೆತರಲಾಯಿತು.

ಈ ವೇಳೆ ವೇದಿಕೆ ಮೇಲಿದ್ದ ಅಧಿಕಾರಿಗಳು ಪುಷ್ಪಾರ್ಚನೆ ಮಾಡಿದರು. ಪರೇಡ್ ಕಮಾಂಡರ್ ಪಥಸಂಚಲನಕ್ಕೆ ಅನುಮತಿ ಪಡೆದು ಸೂಚನೆ ನೀಡುತ್ತಿದ್ದಂತೆಯೇ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆ ನುಡಿಸಿತು. ಈ ಸಂದರ್ಭದಲ್ಲಿ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಫಿರಂಗಿ ದಳದ ಸಿಬ್ಬಂದಿ ಒಂದು ನಿಮಿಷದೊಳಗೆ 7 ಫಿರಂಗಿ ಬಳಸಿ ತಲಾ ಮೂರು ಸುತ್ತಿನಂತೆ 21 ಬಾರಿ ಕುಶಾಲತೋಪು ಸಿಡಿಸಿದರು.

ಅರಮನೆ ಮುಂಭಾಗ ನಡೆದ ತಾಲೀಮಿನಲ್ಲಿ ಅಂಬಾರಿ ಆನೆ ಅಭಿಮನ್ಯು, ಆತನ ಎಡ ಬಲದಲ್ಲಿ ಕುಮ್ಕಿ ಆನೆಗಳಾದ ಕಾವೇರಿ ಮತ್ತು ರೂಪಾ, ಅಶ್ವಾರೋಹಿ ದಳದ ಕುದುರೆಗಳು, ವಿವಿಧ ಪೊಲೀಸ್ ತುಕಡಿಗಳು, ಪೊಲೀಸ್ ಬ್ಯಾಂಡ್ ಭಾಗವಹಿಸಿದ್ದವು. ನಿಶಾನೆ ಆನೆ ಧನಂಜಯ, ನೌಪತ್ ಆನೆಯಾಗಿ ಗೋಪಿ ಮುಂದೆ ಸಾಗುತ್ತಿದ್ದಂತೆ ಉಳಿದ ಆನೆಗಳು ಸಾಲಾನೆಗಳಾಗಿ ಸಾಗಿದವು.

ಭದ್ರತೆ ಹೆಚ್ಚಿಸಲಾಗಿದೆ: ಈ ವೇಳೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ, ಇಂದು ಅರಣ್ಯ ಹಾಗೂ ಪೊಲೀಸ್ ಇಲಾಖೆಯಿಂದ ಜಂಬೂಸವಾರಿಯ ಅಂತಿಮ ತಾಲೀಮು ನಡೆಸಲಾಗಿದೆ. ಗಜಪಡೆ, ಅಶ್ವಾರೋಹಿ ದಳ, ಪೊಲೀಸ್ ತುಕಡಿಗಳು ಯಾವ ಸ್ಥಾನದಲ್ಲಿ ನಿಲ್ಲಬೇಕು, ಹೇಗೆ ಭಾಗವಹಿಸಬೇಕು ಎಂದು ತಾಲೀಮಿನಲ್ಲಿ ಮನವರಿಕೆ ಮಾಡಿಕೊಡಲಾಗಿದೆ. ಅಲ್ಲದೆ, ಜಂಬೂಸವಾರಿ ಮೆರವಣಿಗೆಯ ಯಶಸ್ಸಿಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಎಲ್ಲಾ ಸಿದ್ಧತಾ ಕಾರ್ಯಗಳು ಮುಗಿದಿವೆ ಎಂದರು.

ದಸರಾ ಮಹೋತ್ಸವಕ್ಕೆ ಎರಡು ಹಂತದ ಭದ್ರತೆ ಕೈಗೊಳ್ಳಲಾಗಿದೆ. ಮೆರವಣಿಗೆ ಸಾಗುವ ಮಾರ್ಗದಲ್ಲಿ ವ್ಯಾಪಕ ಬಂದೋಬಸ್ತ್ ಮಾಡಲಾಗುವುದು. ಜಿಲ್ಲೆ ಮಾತ್ರವಲ್ಲದೇ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿರುವ ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಎರಡನೇ ಹಂತದ ಭದ್ರತಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಮಫ್ತಿಯಲ್ಲಿರುವ ಪೊಲೀಸರು ಎಲ್ಲೆಡೆ ನಿಗಾ ವಹಿಸಲಿದ್ದಾರೆ. ಮೆರವಣಿಗೆ ಸಾಗುವ ಮಾರ್ಗ ಸೇರಿದಂತೆ ಆಯಕಟ್ಟಿನ ಜನನಿಬಿಡ ಸ್ಥಳದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ದೇಶ-ವಿದೇಶಗಳಿಂದ ಆಗಮಿಸುವ ಪ್ರವಾಸಿಗರಿಗೆ ರಕ್ಷಣೆ ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿಸಿಪಿಗಳಾದ ಆರ್.ಎನ್.ಬಿಂದುಮಣಿ, ಸುಂದರ್‌ರಾಜ್, ಸಿದ್ದನಗೌಡ ಪಾಟೀಲ್, ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಸೇರಿದಂತೆ ಹಲವರು ಇದ್ದರು.

ದಸರಾ ಸಂಭ್ರಮದಲ್ಲೇ ಭಿಕ್ಷಾಟನೆಗಿಳಿದ ಮಕ್ಕಳ ರಕ್ಷಣೆಗೆ ‘ಆಪರೇಷನ್ ನವರಾತ್ರಿ’

●ಹತ್ತಾರು ಮಕ್ಕಳ ರಕ್ಷಿಸಿ ಪುನರ್ವಸತಿ ●ಕಂದಮ್ಮಗಳೊಂದಿಗೆ ಭಿಕ್ಷೆ ಬೇಡುತ್ತಿದ್ದ ಮಹಿಳೆಯರಿಗೂ ಬುದ್ಧಿಮಾತು



ಅಪಾಯಕಾರಿ ಬಣ್ಣವನ್ನು ಮೈಗೆಲ್ಲಾ ಬಳಿದುಕೊಂಡು ಭಿಕ್ಷಾಟನೆ ಮಾಡುತ್ತಿದ್ದ ಮಕ್ಕಳನ್ನು ರಕ್ಷಿಸಿರುವುದು.

ಮೈಸೂರು,ಸೆ.30– ಮೈಸೂರು ದಸರಾ ಸಂಭ್ರಮದ ನಡುವೆ ಭಿಕ್ಷಾಟನೆ ಮಾಡುತ್ತಿರುವ ಮಕ್ಕಳ ರಕ್ಷಣೆಗೆ ‘ಆಪರೇಷನ್ ನವರಾತ್ರಿ’ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕ ಮತ್ತು ಮಕ್ಕಳ ಸಹಾಯವಾಣಿ(1098/112) ಘಟಕದ ಅಧಿಕಾರಿಗಳ ತಂಡದಿಂದ ಈ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಇಂದು ಐವರು ಸೇರಿದಂತೆ ದಸರಾ ಆರಂಭವಾದಾಗಿನಿಂದ ಇಪ್ಪತ್ತಕ್ಕೂ ಹೆಚ್ಚು ಮಕ್ಕಳನ್ನು ರಕ್ಷಿಸಲಾಗಿದೆ. ಪುಟ್ಟ ಕಂದಮ್ಮಗಳೊಂದಿಗೆ ಭಿಕ್ಷಾಟನೆ ಮಾಡುತ್ತಿದ್ದ ಇಬ್ಬರು ಮಹಿಳೆಯರನ್ನೂ ವಶಕ್ಕೆ ಪಡೆದು, ತಿಳುವಳಿಕೆ ನೀಡಲಾಗಿದೆ.

ಅರಮನೆ ಹೊರಭಾಗ, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ವಸ್ತು ಪ್ರದರ್ಶನದ ಬಳಿ ಸೇರಿದಂತೆ ಹೆಚ್ಚು ಪ್ರವಾಸಿಗರು ಸೇರುವ ಸ್ಥಳಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿದ್ದ ಹತ್ತಾರು ಮಕ್ಕಳನ್ನು ರಕ್ಷಣೆ ಮಾಡಿ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿದ ನಂತರ ಮಕ್ಕಳಿಗೆ ವಯಸ್ಸಿನ ಆಧಾರದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ.

ಶಾಲೆ ಮಕ್ಕಳು!: ರಕ್ಷಣೆ ಮಾಡಲಾಗಿರುವ ಮಕ್ಕಳೆಲ್ಲಾ ಹೊರಗಿನಿಂದ ವಲಸೆ ಬಂದು ಮೈಸೂರಿನಲ್ಲಿ ನೆಲೆಸಿರುವ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಅವರು ಶಾಲೆಗೂ ಹೋಗುತ್ತಿದ್ದು, ದಸರಾವಾದ್ದರಿಂದ ಮೈಗೆಲ್ಲಾ ಅಪಾಯಕಾರಿ ಬಣ್ಣ ಬಳಿದು, ಭಿಕ್ಷಾಟನೆಗೆ ಬಿಟ್ಟಿದ್ದಾರೆ. ಇತರೆ ದಿನಗಳಲ್ಲೂ ಶಾಲೆ ಬಿಟ್ಟ ನಂತರ ಸಂಜೆವರೆಗೂ ಭಿಕ್ಷಾಟನೆ ಮಾಡುತ್ತಾರೆಂಬ ಮಾಹಿತಿ ಇದೆ. ರಕ್ಷಿಸಲ್ಪಟ್ಟ ಮಕ್ಕಳ ಜೇಬು, ಬ್ಯಾಗ್‌ಗಳನ್ನು ಪರಿಶೀಲಿಸಿದಾಗ ನೂರಾರು ರೂ. ಪತ್ತೆಯಾಗಿದೆ. ಈ ಮಕ್ಕಳನ್ನು ಬಲವಂತವಾಗಿ ಭಿಕ್ಷಾಟನೆಗೆ ತಳ್ಳಿದ್ದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ. ಭಿಕ್ಷೆ ನೀಡುವ ಬದಲು ಸಹಾಯವಾಣಿಗೆ ಮಾಹಿತಿ ನೀಡಿದರೆ ಆ ಮಕ್ಕಳ ಭವಿಷ್ಯ ಕಾಪಾಡಬಹುದಾಗಿದೆ. ಇಲ್ಲವಾದರೆ ಭಿಕ್ಷಾಟನೆಯಿಂದ ಅಡ್ಡದಾರಿ ಹಿಡಿಯುವುದಲ್ಲದೆ ಅದನ್ನೇ ವೃತ್ತಿಯಾಗಿಸಿಕೊಳ್ಳುವ ಅಪಾಯವಿದೆ ಎಂದು ಮಕ್ಕಳ ಸಹಾಯವಾಣಿ ಘಟಕದ ಅಧಿಕಾರಿಯೊಬ್ಬರು ಮನವಿ ಮಾಡಿದ್ದಾರೆ.

ಈ ಬಾರಿಯ ಮೈಸೂರು ದಸರಾ ವಸ್ತುಪ್ರದರ್ಶನ ಒಂದು ಸಮುದಾಯದ ಸ್ವತ್ತಾಯ್ತು!

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಆರೋಪ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಸೆ30(ಬಿಎಲ್‌ಯು)– ರಾಜರ ಕಾಲದ ಇತಿಹಾಸವುಳ್ಳ ಮೈಸೂರು ದಸರಾ ವಸ್ತುಪ್ರದರ್ಶನ ಒಂದು ಸಮುದಾಯದವರ ಸ್ವತ್ತಾಗಿದೆ ಎಂದು ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಗಂಭೀರ ಆರೋಪ ಮಾಡಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಸ್ತು ಪ್ರದರ್ಶನದಲ್ಲಿರುವ ಬಹುತೇಕ ಸ್ಟಾಲ್ ಆ ಸಮುದಾಯಕ್ಕೆ ಮೀಸಲಾಗಿದೆ. ಇಲ್ಲಿನ ಮಾರಾಟ ಮಾಡುವ ಸಣ್ಣ ಪುಟ್ಟ ವ್ಯಾಪಾರವೆಲ್ಲಾ ಒಂದು ಸಮುದಾಯದ ವಶವಾಗಿದೆ ಎಂದು ಆಪಾದಿಸಿದರು.

ಟಿಕೆಟ್ ಕೌಂಟರ್‌ನಲ್ಲಿ ಟಿಕೆಟ್ ನೀಡುವುದರಿಂದ ಹಿಡಿದು ಇಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಗುತ್ತಿಗೆ ನೌಕರರು ಆ ಸಮುದಾಯದವರೇ ಆಗಿದ್ದಾರೆ. ಎಲ್ಲೋ ಕೆಲವು ಕಡೆ ಬೆರಳೆಣಿಕೆಯಷ್ಟು ಮಾತ್ರ ಹಿಂದೂಗಳಿದ್ದಾರೆ ಎಂದು ಶ್ರೀನಿವಾಸ ಗೌಡ ದೂರಿದರು.

ವಸ್ತು ಪ್ರದರ್ಶನದಲ್ಲಿ ದುಬಾರಿ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದ್ದು, ಬೆಲೆ ನಿಯಂತ್ರಣವಿಲ್ಲದ ಕಾರಣ ವ್ಯಾಪಾರಸ್ಥರು ಜನರನ್ನು ಸುಲಿಗೆ ಮಾಡುತ್ತಿದ್ದಾರೆ. ವಸ್ತುಪ್ರದರ್ಶನದ ಎಲೆಕ್ಟ್ರಿಕ್ ಗುತ್ತಿಗೆಯನ್ನು ಅಯೂಬ್ ಖಾನ್ ಅವರು ತಮ್ಮ ಸಂಬಂಧಿಯೊಬ್ಬರಿಗೆ ನೀಡಿದ್ದಾರೆ. ಕಳಪೆ ಗುಣಮಟ್ಟದ ವಿದ್ಯುತ್ ವೈಯರ್, ಎಲೆಕ್ಟಿಕಲ್ ಉಪಕರಣಗಳನ್ನು ಅಳವಡಿಸಿರುವ ಗುತ್ತಿಗೆದಾರರು ಭಾರೀ ಲಾಭ ಮಾಡುತ್ತಿದ್ದಾರೆ.

ಈ ಹಿಂದೆ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪಕ್ಷದಿಂದ ಅಧ್ಯಕ್ಷರಾಗಿದ್ದವರು ಎಂದೂ ಇಂತಹ ಅವ್ಯವಸ್ಥೆ ಮಾಡಿರಲಿಲ್ಲ ಎಂದು ಶ್ರೀನಿವಾಸಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಟೆಂಡರ್‌ನಿಂದ 12 ಕೋಟಿ ಲಾಭ ಬಂದಿದೆ, ಬ್ಯಾಂಕ್‌ನಲ್ಲಿ 8 ಕೋಟಿ ಠೇವಣಿ ಇದೆ. ಈ ಹಣದ ಖರ್ಚು ವೆಚ್ಚದ ಬಗ್ಗೆ ಸಮಗ್ರ ಮಾಹಿತಿ ನೀಡಬೇಕು. ವಸ್ತುಪ್ರದರ್ಶನದ ಟೆಂಡರ್ ಸೇರಿದಂತೆ ಹಲವು ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ. ಈ ಸಂಬಂಧ ನಮ್ಮಲ್ಲಿ ದಾಖಲಾತಿಗಳಿದ್ದು, ಸೂಕ್ತ ಸಮಯದಲ್ಲಿ ಅದನ್ನು ಬಹಿರಂಗ ಮಾಡುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ, ಅಲ್ಪ ಸಂಖ್ಯಾತ ಮೋರ್ಚಾ ಕಾರ್ಯದರ್ಶಿ ಪ್ರಭಾಕರ್ ಜೈನ್, ಜಿಲ್ಲಾ ವಕ್ತಾರ ದಯಾನಂದ ಪಟೇಲ್, ಮಾಧ್ಯಮ ಸಂಚಾಲಕ ಮಹದೇವಸ್ವಾಮಿ, ಮುಖಂಡ ವಸಂತ ಕುಮಾರ್ ಉಪಸ್ಥಿತರಿದ್ದರು.

ಕವಿಗಳ ಹೆಸರು ಮಾಯ; ಕಾಂಗ್ರೆಸ್ ನಾಯಕರ ಹೆಸರು ರಾರಾಜನೆ

ಮೈಸೂರು ದಸರಾ ವಸ್ತುಪ್ರದರ್ಶನದ ಎ ಒನ್ ಬ್ಲಾಕ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ನಾಮಕರಣ ಮಾಡಿದ್ದು, ಈಗ ಕವಿಗಳ ಹೆಸರು ಮಾಯವಾಗಿ ಕಾಂಗ್ರೆಸ್ ನಾಯಕರ ಹೆಸರು ರಾರಾಜಿಸುತ್ತಿದೆ ಎಂದು ಶ್ರೀನಿವಾಸಗೌಡ ದೂರಿದರು.

ವಸ್ತು ಪ್ರದರ್ಶನದ ಆವರಣದಲ್ಲಿರುವ ಫೌಂಟೇನ್ ಗೆ ಮಾಜಿ ಸಚಿವ ದಿವಂಗತ ಅಜೀಜ್ ಸೇಠ್ ಹೆಸರಿಟ್ಟಿದ್ದಾರೆ. ಕುಸ್ತಿ ಅಖಾಡಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೆಸರು ನಾಮಕರಣ ಮಾಡಿದ್ದಾರೆ. ದಸರಾ ವಸ್ತುಪ್ರದರ್ಶನ ಮೈಸೂರು ಮಹಾರಾಜರ ಪರಿಕಲ್ಪನೆಯಾಗಿದೆ. ಪ್ರತಿಯೊಂದು ರಸ್ತೆ ಹಾಗೂ ಬ್ಲಾಕ್‌ಗಳಿಗೆ ಕವಿಗಳ ಹೆಸರು ನಾಮಕರಣ ಮಾಡಲಾಗಿತ್ತು. ಆದರೆ ಈಗ ಕವಿಗಳ ಹೆಸರು ಮಾಯವಾಗಿ ಕಾಂಗ್ರೆಸ್ ನಾಯಕರ ಹೆಸರು ರಾರಾಜಿಸುತ್ತಿದೆ ಎಂದು ಕಿಡಿಕಾರಿದರು.

ಇದೊಂದು ಆಧಾರ ರಹಿತ ಆರೋಪ

ಬಿಜೆಪಿಯವರು ಆರೋಪ ಮಾಡಿರುವಂತೆ ದಸರಾ ವಸ್ತು ಪ್ರದರ್ಶನದಲ್ಲಿ ಒಂದು ಸಮುದಾಯಕ್ಕೆ ಆದ್ಯತೆ ನೀಡಿಲ್ಲ. ವಸ್ತು ಪದರ್ಶನದಲ್ಲಿ ಮಾಡಿರುವ ಎಲ್ಲಾ ಅಭಿವೃದ್ಧಿಗೆ ಪಾರಂಪರಿಕ ಶೈಲಿಯ ರೂಪ ನೀಡಲಾಗಿದೆ. ಅಲ್ಲದೆ ವಸ್ತು ಪ್ರದರ್ಶನದ ಗುತ್ತಿಗೆಯನ್ನು ಹಿಂದೂ ಧರ್ಮದವರಿಗೇ ನೀಡಲಾಗಿದೆ. ಬಿಜೆಪಿಯವರು ಆಪಾದಿಸಿದಂತೆ ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಆನ್ ಲೈನ್ ಮೂಲಕ ಟೆಂಡರ್ ನೀಡಲಾಗಿದ್ದು, ಪಾರದರ್ಶಕತೆ ಕಾಪಾಡಲಾಗಿದೆ. ಈಗ ಕಾಮಗಾರಿ ಮಾಡಿರುವ ಯಾವುದೇ ಗುತ್ತಿಗೆದಾರನಿಗೆ ನಯಾ ಪೈಸೆ ಹಣ ಇನ್ನೂ ಬಿಡುಗಡೆ ಮಾಡಿಲ್ಲ. ಆದರೆ ಬಿಜೆಪಿಯವರು ವಾಸ್ತವಾಂಶ ಮರೆಮಾಚಿ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ.

-ಅಯೂಬ್ ಖಾನ್, ಅಧ್ಯಕ್ಷರು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ಆಹಾರ ಮೇಳ 8 ದಿನಕ್ಕೆ ಸೀಮಿತಗೊಳಿಸಿ

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮನವಿ



ನಾರಾಯಣಗೌಡ

ಮೈಸೂರು,ಸೆ.30(ಪಿಎಂ)– ದಸರಾ ಪ್ರಯುಕ್ತ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಆಹಾರ ಮೇಳದ ಅವಧಿಯನ್ನು ಪ್ರತಿ ವರ್ಷದಂತೆ 8 ದಿನಗಳಿಗೆ ಸೀಮಿತಗೊಳಿಸಬೇಕೆಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಕೋರಿದ್ದಾರೆ.

2003ರಿಂದ 2024ರವರೆಗೆ ದಸರಾ ಆಹಾರ ಮೇಳವು 8 ದಿನಗಳಿಗೆ ಮಾತ್ರ ಸೀಮಿತವಾಗುತ್ತಿತ್ತು. ಆದರೆ ಆಹಾರ ಮೇಳದ ಅವಧಿಯನ್ನು 15 ದಿನಗಳಿಗೆ ವಿಸ್ತರಿಸಿ ಆಹಾರ ಮೇಳ ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ್ ಆದೇಶ ಮಾಡಿದ್ದಾರೆ. ಇದರಿಂದ ನಗರದ ಹೋಟೆಲ್ ಉದ್ಯಮಿಗಳಿಗೆ ಅಪಾರ ನಷ್ಟ ಉಂಟಾಗಲಿದೆ.

ಜಿಎಸ್‌ಟಿ, ಬಾಡಿಗೆ, ಲೈಸನ್ಸ್‌ಗಳು ಸೇರಿದಂತೆ ಎಲ್ಲವನ್ನೂ ನಿರ್ವಹಣೆ ಮಾಡಿಕೊಂಡು ಬರುತ್ತಿರುವ ಹೋಟೆಲ್ ಉದ್ಯಮಿಗಳು, ವರ್ಷಕ್ಕೊಂದು ದಸರಾ ಹಬ್ಬದಲ್ಲಿ ವ್ಯಾಪಾರ ಮಾಡೋಣವೆಂದು ಅಂದುಕೊಂಡರೆ, ಆಹಾರ ಮೇಳದ ಪರಿಣಾಮವಾಗಿ ಮೈಸೂರಿನ ರೆಸ್ಟೋರೆಂಟ್‌ಗಳಿಗೆ ಸಂಜೆಯ ಮೇಲೆ ವ್ಯಾಪಾರವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತಿವರ್ಷ ಕೇವಲ 8 ದಿನ ಮಾತ್ರ ಆಹಾರ ಮೇಳ ನಡೆದಿದ್ದು, ಇದೀಗ ಅದರ ಅವಧಿಯನ್ನು 15 ದಿನಗಳಿಗೆ ವಿಸ್ತರಿಸಿರುವುದು ನಗರದ ಹೋಟೆಲ್ ಉದ್ಯಮಕ್ಕೆ ಅಪಾರ ನಷ್ಟಕ್ಕೆ ಕಾರಣವಾಗಲಿದೆ. ಹಾಗಾಗಿ ಜಿಲ್ಲಾ ಉಸ್ತುವಾರಿ ಸಚಿವರು ಕೂಡಲೇ ಅವಧಿ ವಿಸ್ತರಣೆ ರದ್ದುಗೊಳಿಸಲು ಕ್ರಮ ವಹಿಸಬೇಕೆಂದು ಪ್ರಕಟಣೆಯಲ್ಲಿ ಅವರು ವಿನಂತಿಸಿದ್ದಾರೆ.

ಮೈಸೂರು ಪೇಯಿಂಟ್ಸ್ ಅಧ್ಯಕ್ಷರಾಗಿ ಹೆಚ್.ಡಿ.ಗಣೇಶ್ ಅಧಿಕಾರ ಸ್ವೀಕಾರ



ಮೈಲ್ಯಾಕ್ ಅಧ್ಯಕ್ಷರಾಗಿ ಹೆಚ್.ಡಿ.ಗಣೇಶ್ ಅಧಿಕಾರ ಸ್ವೀಕರಿಸಿದರು

ಮೈಸೂರು, ಸೆ.30– ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ(ಮೈಲ್ಯಾಕ್) ಅಧ್ಯಕ್ಷರಾಗಿ ಹೆಚ್.ಡಿ.ಗಣೇಶ್ ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಕುಟುಂಬ ಸಮೇತ ಮೈಲ್ಯಾಕ್ ಆವರಣಕ್ಕೆ ಆಗಮಿಸಿದ ಹೆಚ್.ಡಿ.ಗಣೇಶ್ ಅವರನ್ನು ಇಲ್ಲಿನ ಅಧಿಕಾರಿಗಳು ಆತ್ಮೀಯವಾಗಿ ಬರಮಾಡಿಕೊಂಡರು. ಮೊದಲಿಗೆ ಅರಳಿ ಮರದ ಬಳಿಯ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿದ ನಂತರ, ಕಾರ್ಖಾನೆ ಸಂಸ್ಥಾಪಕರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ನಂತರ, ಅಧ್ಯಕ್ಷರ ಕೊಠಡಿಗೆ ತೆರಳಿದ ಹೆಚ್.ಡಿ.ಗಣೇಶ್ ದೇವರ ಫೋಟೋಗೆ ಪೂಜೆ ಸಲ್ಲಿಸಿ, ಅಧಿಕಾರ ವಹಿಸಿಕೊಂಡರು. ಈ ವೇಳೆ ಮೈಲ್ಯಾಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಮೊಹಮ್ಮದ ಇರ್ಫಾನ್ ಹೂಗುಚ್ಛ ನೀಡಿ, ಅಭಿನಂದಿಸಿದರು. ಅಲ್ಲದೆ ಕಾಂಗ್ರೆಸ್ ಮುಖಂಡರು, ಗಣೇಶ್ ಅವರ ಸ್ನೇಹಿತರು, ಹಿತೈಷಿಗಳು ಹೂಗುಚ್ಛ ನೀಡಿ, ಶುಭ ಕೋರಿದರು.

ಒಕ್ಕಲಿಗ ನಿಗಮದ ಅಧ್ಯಕ್ಷರಾಗಿ ಆತ್ಮಾನಂದ

ಸುಜ್ಞಾನಮೂರ್ತಿ-ವಿಶ್ವಕರ್ಮ, ರಾಮಪ್ರಸಾದ್-ಆರ್ಯವೈಶ್ಯ

ಬೆಂಗಳೂರು, ಸೆ 30: ಮತ್ತೆ ನಾಲ್ಕು ನಿಗಮ-ಮಂಡಳಿಗಳಿಗೆ ಅಧ್ಯಕ್ಷರು, ಉಪಾಧ್ಯಕ್ಷರ ನೇಮಕ ಮಾಡಲಾಗಿದೆ. ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಮಂಡ್ಯದ ಎಂ.ಎಸ್. ಆತ್ಮಾನಂದ, ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸುಜ್ಞಾನಮೂರ್ತಿ, ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕೆ.ವಿ. ರಾಮಪ್ರಸಾದ್ ಮತ್ತು ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾಗಿ ಜಿ.ವಿ. ಬಾಲಾಜಿ ಅವರನ್ನ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ

ಮೆಟ್ಟಿಲು ಮೂಲಕ ಬೆಟ್ಟ ಹತ್ತಿ ಚಾಮುಂಡೇಶ್ವರಿ ದರ್ಶನ ಪಡೆದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಮಂಗಳವಾರ ಮೆಟ್ಟಿಲು ಮಾರ್ಗದಲ್ಲಿ ಬೆಟ್ಟ ಹತ್ತಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ಮೈಸೂರು,ಸೆ.30– ನವರಾತ್ರಿ ಹಿನ್ನೆಲೆಯಲ್ಲಿ ಪ್ರತಿ ವರ್ಷದಂತೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಮಂಗಳವಾರ ಮೆಟ್ಟಿಲು ಮಾರ್ಗದಲ್ಲಿ ಚಾಮುಂಡಿ ಬೆಟ್ಟಕ್ಕೆ ತೆರಳಿ, ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದರು.

ನವರಾತ್ರಿ ಸಂದರ್ಭ ಹಾಗೂ ಆಷಾಢ ಮಾಸದಲ್ಲಿ ಮೆಟ್ಟಿಲು ಹತ್ತಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯುವ ಸಂಪ್ರದಾಯವನ್ನು ಹಲವು ವರ್ಷಗಳಿಂದ ರೂಢಿಸಿಕೊಂಡಿರುವ ಶೋಭಾ ಕರಂದ್ಲಾಜೆ, ಮಂಗಳವಾರ ಸಂಜೆ ಬೆಟ್ಟದ ಪಾದದ ಬಳಿ ಪೂಜೆ ಸಲ್ಲಿಸಿ ಬೆಟ್ಟ ಹತ್ತಿದರು. ಇವರೊಂದಿಗೆ ಶಾಸಕ ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಖಂಡರಾದ ಬಿ.ಪಿ.ಮಂಜುನಾಥ್, ಹೇಮಾ ನಂದೀಶ್, ಮಂಗಳಾ ಸೋಮಶೇಖರ್, ಜಗದೀಶ್, ಗಿರಿಧರ್, ಕೇಬಲ್ ಮಹೇಶ್ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಹಾಗೂ ಬೆಂಬಲಿಗರು ಹೆಜ್ಜೆ ಹಾಕಿದರು.

ಚಾಮುಂಡೇಶ್ವರಿ ದೇವಾಲಯದ ಬಳಿ ಶೋಭಾ ಕರಂದ್ಲಾಜೆ ಅವರನ್ನು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಅವರು ಸ್ವಾಗತಿಸಿದರು. ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ಕೆಲಕಾಲ ಪ್ರಾರ್ಥಿಸಿದ ಶೋಭಾ ಅವರು, ರಸ್ತೆ ಮಾರ್ಗವಾಗಿ ಶ್ರೀ ಸುತ್ತೂರು ಮಠ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು.

ಗಜ ಪಾಲಕರಿಗೆ ಉಪಾಹಾರ: ಪ್ರತಿ ವರ್ಷದಂತೆ ಗಜಪಡೆಯ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬದವರಿಗೆ ಬುಧವಾರ ಬೆಳಗ್ಗೆ ಉಪಾಹಾರ ವ್ಯವಸ್ಥೆ ಮಾಡಿದ್ದು, ತಾವೂ ಪಂಕ್ತಿಯಲ್ಲಿ ಆಹಾರ ಸೇವಿಸಲಿದ್ದಾರೆ. ಯಾವ ಪಕ್ಷ ಆಡಳಿತದಲ್ಲಿರಲಿ, ತಾವು ಎಷ್ಟೇ ಕಾರ್ಯದೊತ್ತಡದಲ್ಲಿರಲಿ ದಸರಾ ವೇಳೆ ಮೈಸೂರಿಗೆ ಆಗಮಿಸಿ, ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ಗಜಪಾಲಕರಿಗೆ ಊಟ ಹಾಕಿಸುವುದನ್ನು ಸಂಪ್ರದಾಯವಾಗಿ ಪಾಲಿಸಿಕೊಂಡು ಬಂದಿದ್ದಾರೆ.

ಸೋಸಲೆ ಗ್ರಾಪಂಗೆ ಭಾಗ್ಯ ಎಂ.ಶಿವಕುಮಾರ್ ಅಧ್ಯಕ್ಷೆ



ನೂತನ ಅಧ್ಯಕ್ಷೆ ಎಂ.ಭಾಗ್ಯ ಅವರನ್ನು ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಸೆ.30– ಕುತೂಹಲಕಾರಿ ಬೆಳವಣಿಗೆಯೊಂದರಲ್ಲಿ ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಸೋಸಲೆ ಗ್ರಾಪಂನಲ್ಲಿ ಪಕ್ಷೇತರ ಅಭ್ಯರ್ಥಿ ಭಾಗ್ಯ ಎಂ.ಶಿವಕುಮಾರ್ ಗೆಲುವು ಸಾಧಿಸುವ ಮೂಲಕ ಗ್ರಾಪಂ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಎನ್.ಶೈಲಜಾ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಯಿತು. ಪ.ಜಾತಿ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಎಂ.ಭಾಗ್ಯ ಶಿವಕುಮಾರ್ ಹಾಗೂ ಎಸ್.ಎನ್.ರೇಖಾಪ್ರಭ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಮತದಾನದಲ್ಲಿ ಗ್ರಾಪಂನ 20 ಸದಸ್ಯರು ಮತದಾನ ಮಾಡಿದರು. ಈ ವೇಳೆ ಎಸ್.ಎನ್.ರೇಖಾಪ್ರಭ 7 ಮತಗಳನ್ನು ಪಡೆದು ಪರಾಭವಗೊಂಡರೇ, 13 ಮತಗಳನ್ನು ಪಡೆದ ಎಂ.ಭಾಗ್ಯ ಶಿವಕುಮಾರ್ ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದರು. ಜಿಪಂ ಸಹಾಯಕ ಕಾರ್ಯಪಾಲಕ ಅಭಿಯಂತರೆ ಪಿ.ಎನ್.ಚರಿತಾ ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು. ಈ ವೇಳೆ ಗ್ರಾಪಂ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ನೂತನ ಅಧ್ಯಕ್ಷೆ ಎಂ.ಭಾಗ್ಯ ಶಿವಕುಮಾರ್ ಮಾತನಾಡಿ, ಸದಸ್ಯರು ತಮ್ಮ ಮೇಲೆ ನಂಬಿಕೆ ಇಟ್ಟು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದು, ಅವರ ನಂಬಿಕೆ ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಪಂಚಾಯ್ತಿಗೆ ಬರುವ ಅನುದಾನವನ್ನು ಗ್ರಾಪಂ ವ್ಯಾಪ್ತಿಗೆ ಸೇರಿದ ಗ್ರಾಮಗಳಿಗೆ ಹಂಚುವ ಮೂಲಕ ಗ್ರಾಮದ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ. ಸರ್ವ ಸದಸ್ಯರು ಅಭಿವೃದ್ಧಿ ಬಗ್ಗೆ ತುಡಿತ ಹೊಂದಿರುವ ನನಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಚುನಾವಣೆಯಲ್ಲಿ ನಿಕಟಪೂರ್ವ ಅಧ್ಯಕ್ಷೆ ಶೈಲಜಾ, ಉಪಾಧ್ಯಕ್ಷೆ ಸಿ.ಪ್ರೀತಿ, ಸದಸ್ಯರಾದ ಎಸ್.ಪುಟ್ಟಸ್ವಾಮಿ, ಎನ್.ನಾಗೇಂದ್ರ, ಸುವರ್ಣ, ಎಸ್.ಎನ್.ಮಧುಸೂದನ್, ಎಂ.ಮಹೇಶ್, ಎಸ್.ವಿ.ಮಹೇಶ್ ಕುಮಾರ್, ನಾಗರತ್ನ, ಆರ್.ಮಲ್ಲೇಶ್, ರಾಜಮ್ಮ, ಪಿ.ಜ್ಞಾನೇಂದ್ರ, ಸುಂದರ, ಎಸ್.ಹೇಮ, ಎಂ.ಚಾಂದಿನಿ, ಆಶಾ, ಸಿ.ನಾರಾಯಣ ಹಾಗೂ ಎಸ್.ವಿ.ಮಂಜುನಾಥ್ ಸೇರಿದಂತೆ ಇತರರಿದ್ದರು.

ಪ್ರಿಯಕರನೊಂದಿಗೆ ಅಕ್ರಮ ಸಂಬಂಧ: ಪತ್ನಿ ಹತ್ಯೆಗೈದ ಪತಿ

ಪತ್ನಿಯ ಪ್ರಿಯಕರನ ಮೇಲೂ ಮಾರಕಾಸ್ತ್ರದಿಂದ ತೀವ್ರ ಹಲ್ಲೆ



ವಿಜಯ್

ಹುಣಸೂರು, ಸೆ.30– ಪ್ರಿಯಕರನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಪತ್ನಿಯನ್ನು ಪತಿ ಮಾರಕಾಸ್ತ್ರದಿಂದ ಕೊಲೆ ಮಾಡಿ, ಬಳಿಕ ಪತ್ನಿಯ ಪ್ರಿಯಕರನ ಮೇಲೂ ಹಲ್ಲೆ ನಡೆಸಿ ತೀವ್ರ ಗಾಯಗೊಳಿಸಿರುವ ಘಟನೆ ತಾಲೂಕಿನ ಮೂಕನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಶಿವರಾಮ ಬೋವಿ ಅವರ ಪುತ್ರ ವಿಜಯ್(37) ಎಂಬಾತ ತನ್ನ ಪತ್ನಿ ಗೀತಾಳನ್ನು (33) ಹತ್ಯೆ ಮಾಡಿದ್ದು, ಘಟನೆ ಯಲ್ಲಿ ತೀವ್ರ ಗಾಯಗೊಂಡಿರುವ ಅದೇ ಗ್ರಾಮದ ಬಸವರಾಜು ಅವರ ಪುತ್ರ ದಿಲೀಪ್ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಳೆದ 15 ವರ್ಷಗಳ ಹಿಂದೆ ವಿಜಯ್ ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮದ ನಿವಾಸಿ ವೆಂಕಟರಮಣ, ಚೆನ್ನಮ್ಮ ದಂಪತಿ ಪುತ್ರಿ ಗೀತಾಳನ್ನು ವಿವಾಹವಾಗಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಆದರೆ ಗೀತಾ ಗ್ರಾಮದ ದಿಲೀಪ್ ಎಂಬ ಯುವಕನೊಂದಿಗೆ ಕಳೆದ ಎರಡ್ಮೂರು ವರ್ಷಗಳಿಂದ ಅಕ್ರಮ ಸಂಬಂಧ ಹೊಂದಿದ್ದಳು. ಈ ವಿಚಾರ ಹೊರಬಂದು ಗ್ರಾಮದ ಹಿರಿಯರು ಎರಡ್ಮೂರು ಬಾರಿ ನ್ಯಾಯ ಪಂಚಾಯಿತಿ ನಡೆಸಿ ಗೀತಾಳನ್ನು ವಿಜಯ್ ಜೊತೆ ಕಳುಹಿಸಿಕೊಟ್ಟಿದ್ದರು. ಆದರೂ ಅಕ್ರಮ ಸಂಬಂಧ ಮುಂದುವರೆಸಿದ್ದ ಗೀತಾ ಗಂಡನನ್ನು ಬಿಟ್ಟು ಬಂದು ದಿಲೀಪ್‌ನೊಂದಿಗೆ ಇದ್ದಳು. ಆದರೆ ಕಳೆದ 8 ತಿಂಗಳ ಹಿಂದೆ ಗೀತಾ ನ್ನ ಗಂಡ ಬೇಕು ಎಂದು ಹುಣಸೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ವೇಳೆ ಪೊಲೀಸರು ವಿಜಯ್ ನನ್ನು ಕರೆಸಿ ತಿಳುವಳಿಕೆ ಹೇಳಿ ಗೀತಾಳನ್ನು ಕಳುಹಿಸಿ ಕೊಟ್ಟಿದ್ದರು. ಇಷ್ಟಾದರೂ ದಿಲೀಪ್‌ನೊಂದಿಗೆ ಅಕ್ರಮ ಸಂಬಂಧ ಮುಂದುವರೆಸಿದ್ದಳು. ಇದರಿಂದ ವಿಜಯ್ ತೀವ್ರ ಆಕ್ರೋಶಗೊಂಡಿದ್ದ ಎನ್ನಲಾಗಿದೆ.

ವಿಜಯ್ ಸೋಮವಾರ ಮಧ್ಯಾಹ್ನ ಮನೆಯಿಂದ ಹೊರ ಹೋಗಿದ್ದರು. ಸಂಜೆ ಸುಮಾರು 7.30ರ ವೇಳೆಗೆ ಮನೆಗೆ ಬಂದಾಗ ಗೀತಾ ತನ್ನ ಪ್ರಿಯಕರ ದಿಲೀಪ್‌ನೊಂದಿಗೆ ಸಿಕ್ಕಿ ಬಿದ್ದಿದ್ದಾಳೆ. ಇದರಿಂದ ರೊಚ್ಚಿಗೆದ್ದ ವಿಜಯ್ ಮನೆಯಲ್ಲಿದ್ದ ಮಚ್ಚಿನಿಂದ ದಿಲೀಪ್ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಈ ವೇಳೆ ದಿಲೀಪ್ ತಪ್ಪಿಸಿಕೊಂಡರೂ ಬಿಡದ ವಿಜಯ್ ಆತನನ್ನು ಹಿಂಬಾಲಿಸಿಕೊಂಡು ಹೋಗಿ ನಡು ರಸ್ತೆಯಲ್ಲೇ ಕಾಲು ಸೇರಿದಂತೆ ವಿವಿಧ ಭಾಗಗಳಿಗೆ ಮಚ್ಚಿನಿಂದ ಹಲ್ಲೆ ನಡೆಸಿದ್ದು, ಸಾರ್ವಜನಿಕರು ಕೂಗಿಕೊಂಡಿದ್ದರಿಂದ ಆತನನ್ನು ಅಲ್ಲೇ ಬಿಟ್ಟು ಮನೆಗೆ ತೆರಳಿ ಪತ್ನಿ ಗೀತಾಳ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಆಕೆ ತಪ್ಪಿಸಿಕೊಂಡು ಮನೆಯಿಂದ ಹೊರಬಂದರೂ ಬಿಡದ ವಿಜಯ್ ಪತ್ನಿಯ ಕುತ್ತಿಗೆ ಮೇಲೆ ಹಲ್ಲೆ ನಡೆಸಿ ಹತ್ಯೆಗೈದು ಬಳಿಕ ಹುಣಸೂರು ಠಾಣೆಗೆ ಶರಣಾಗಿದ್ದಾನೆ. ಈ ವೇಳೆ ತೀವ್ರ ಗಾಯಗೊಂಡಿದ್ದ ದಿಲೀಪ್‌ನನ್ನು ಆತನ ಸಹೋದರ ಶ್ರೀನಿವಾಸ್ ಹಾಗೂ ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಮಗಳ ಹತ್ಯೆ ವಿಷಯ ತಿಳಿದು ಮೂಕನಹಳ್ಳಿಗೆ ಆಗಮಿಸಿದ ಗೀತಾಳ ಪೋಷಕರು, ವಿಜಯ್ ಹಾಗೂ ಗೀತಾ ಅನ್ಯೋನ್ಯವಾಗಿದ್ದರು. ಆದರೆ ಇತ್ತೀಚೆಗೆ ಅವರ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಈ ವೇಳೆ ನಾವು ಆಗಮಿಸಿ ಇಬ್ಬರನ್ನು ಸಮಾಧಾನ ಮಾಡಿದ್ದೇವು. ಆದರೆ ನನ್ನ ಅಳಿಯ ವಿಜಯ್ ಅವರ ಅಣ್ಣ ಸುರೇಶ್, ತಮ್ಮ ಹೇಮಂತ್ ಕುಮಾರ್ ಹಾಗೂ ತಾಯಿ ಭಾಗ್ಯಮ್ಮ ಸೇರಿ ತಮ್ಮ ಮಗಳನ್ನು ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಹುಣಸೂರು ನಗರ ಠಾಣೆಗೆ ದೂರು ನೀಡಿದ್ದಾರೆ.

ಬಿಜೆಪಿ ನಗರಾಧ್ಯಕ್ಷರು ಜವಾಬ್ದಾರಿ ಅರಿತು ಮಾತನಾಡಲಿ

ಶಾಸಕ ದರ್ಶನ್ ಅವಧಿಯಲ್ಲಿ ಅಭಿವೃದ್ಧಿ ಕುಂಠಿತವಾಗಿಲ್ಲ: ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್



ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿದರು.

ನಂಜನಗೂಡು, ಸೆ.30– ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು ಅವರು ಪ್ರಚಾರದ ಗೀಳಿಗಾಗಿ, ಮಾಜಿ ಶಾಸಕ ಬಿ.ಹರ್ಷವರ್ಧನ್ ಅವರ ಒತ್ತಡಕ್ಕೆ ಮಣಿದು ಶಾಸಕರ ವಿರುದ್ಧ ಹೇಳಿಕೆ ನೀಡಿದ್ದಾರೆ. ಅವರು ತಮ್ಮ ಸ್ಥಾನದ ಜವಾಬ್ದಾರಿ ಅರಿತು ಮಾತನಾಡಬೇಕು ಎಂದು ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ 76 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅತಿಥಿ ಗೃಹ ನಿರ್ಮಾಣಕ್ಕೆ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ದೇವಾಲಯದ ಹುಂಡಿ ಹಣದಲ್ಲಿ ಅತಿಥಿಗೃಹ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ಗುದ್ದಲಿ ಪೂಜೆ ನೆರವೇರಿಸಿದ್ದರು. ಅಲ್ಲದೇ ಬೆಳ್ಳಿರಥ ನಿರ್ಮಾಣಕ್ಕೆ 2.90 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಸಿದ್ಧವಾಗಿದ್ದು, ಕೆಲ ತಾಂತ್ರಿಕ ಕಾರಣಗಳಿಂದಾಗಿ ಬೆಳ್ಳಿರಥ ನಿರ್ಮಾಣ ತಡವಾಗಿದೆ. ಈ ಸಂಬಂಧ ಸಚಿವ ರಾಮಲಿಂಗ ರೆಡ್ಡಿ ಅವರೊಂದಿಗೆ ಶಾಸಕರು ಚರ್ಚಿಸಿದ್ದಾರೆ. ಶೀಘ್ರ ಬೆಳ್ಳಿರಥ ನಿರ್ಮಾಣ ಹಾಗೂ ದೇವಾಲಯದ ಅಭಿವೃದ್ಧಿಗೆ ಚಾಲನೆ ನೀಡಲಿದ್ದಾರೆ. ಜೊತೆಗೆ ಒಳಚರಂಡಿ ಕಾಮಗಾರಿಗೆ 2006ರಿಂದ ಇಲ್ಲಿವರೆಗೆ 93 ಕೋಟಿ 56 ಲಕ್ಷ ಅನುದಾನ ಬಿಡುಗಡೆಯಾಗಿದೆ. ಮಾಜಿ ಶಾಸಕ ಹರ್ಷವರ್ಧನ್ ಅವಧಿಯಲ್ಲಿ 140 ಕೋಟಿ ಬಿಡುಗಡೆಯಾಗಿದೆ ಎಂದಿರುವುದು ಹಾಸ್ಯಸ್ಪದ. ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು ಶಾಸಕರು ಒತ್ತು ನೀಡಿದ್ದಾರೆ ಎಂದರು.

ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಶಾಸಕ ದರ್ಶನ್ ಅವರ ಅಧಿಕಾರವಧಿಯಲ್ಲಿ ಅಭಿವೃದ್ಧಿ ಕುಂಠಿತವಾಗಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 30 ಕೋಟಿ ವೆಚ್ಚದ ಅಭಿವೃದ್ಧಿ ಕೆಲಸಗಳು ನಡೆದಿವೆ. ಜೊತೆಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಹೊಸದಾಗಿ 10 ಕೋಟಿ ಅನುದಾನ ಬಂದಿದೆ. ಅಲ್ಲದೇ ನಗರೋತ್ಥಾನ ಯೋಜನೆಯಡಿ ಬಿಡುಗಡೆಗೊಂಡಿದ್ದ 13 ಕೋಟಿ ಅನುದಾನಕ್ಕೆ ಈಗಾಗಲೇ ಟೆಂಡರ್ ಪೂರ್ಣಗೊಂಡಿದೆ. ಕ್ಷೇತ್ರದಲ್ಲಿ ಸಾಗರೋಪಾದಿಯಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ನಗರಸಭೆಯಲ್ಲಿ ಭ್ರಷ್ಟಾಚಾರ ಎಂದಿರುವ ಬಿಜೆಪಿ ಸದಸ್ಯರು ದಲ್ಲಾಳಿಗಳ ರೀತಿ ಖಾತೆ ಮಾಡಿಸಲು ಮುಗಿಬೀಳುತ್ತಿದ್ದಾರೆ. ದಾಖಲೆ ಇಲ್ಲದ ನಿವೇಶನಗಳು, ಮನೆಗಳಿಗೆ ಖಾತೆ ಮಾಡಿಕೊಡಲು ನಗರಸಭಾ ಆಯುಕ್ತರಿಗೆ ಒತ್ತಡ ತರುತ್ತಿದ್ದಾರೆ. ಆದ್ದರಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ. ಜೊತೆಗೆ ನಗರಸಭೆ ಇತಿಹಾಸದಲ್ಲಿ ಇಲ್ಲಿವರೆಗೆ 3 ಸಾವಿರ ಖಾತೆಗಳು ನಡೆದಿತ್ತು. ಸರ್ಕಾರ 'ಬಿ' ಖಾತೆ ಕೊಡಲು ಆದೇಶಿಸಿದ ನಂತರ 9 ತಿಂಗಳ ಅವಧಿಯಲ್ಲಿ 2800 ಖಾತೆಗಳನ್ನು ಮಾಡಿಕೊಡಲಾಗಿದೆ. ಶಾಸಕ ದರ್ಶನ್ ಅವರ ಜನಪ್ರಿಯತೆ ಸಹಿಸದೇ ಇಲ್ಲಿನ ಬಿಜೆಪಿಯವರು ಗೊಂದಲ ಸೃಷ್ಟಿಸುತ್ತಿದ್ದಾರೆ. ಮುಂದಾದರೂ ಆರೋಪಿಸುವುದನ್ನು ಬಿಟ್ಟು ಅಭಿವೃದ್ಧಿ ಕೆಲಸಗಳಿಗೆ ಸಹಕಾರ ನೀಡಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯರಾದ ಗಾಯತ್ರಿ ಮೋಹನ್, ರಮೇಶ್, ರವಿ, ಕೆ.ಎಂ.ಬಸವರಾಜು, ಮಾಜಿ ಪುರಸಭಾ ಅಧ್ಯಕ್ಷ ಶ್ರೀಧರ್, ಮುಖಂಡರಾದ ಕಮಲೇಶ್, ಮಹದೇವು, ರಾಜೇಶ್, ಸತೀಶ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ ಉಪಸ್ಥಿತರಿದ್ದರು.

ಬಂಗಾರಪ್ಪ ಬಡಾವಣೆಗೆ ಮೂಲ ಸೌಕರ್ಯ ಕಲ್ಪಿಸುವೆ

ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಭರವಸೆ



ಬೋರ್‌ವೆಲ್ ಕೊರೆಯುವುದಕ್ಕೆ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಚಾಲನೆ ನೀಡಿದರು

ತಿ.ನರಸೀಪುರ, ಸೆ.30– ಪಟ್ಟಣದ ಹೊರವಲಯದ ಬಂಗಾರಪ್ಪ ಬಡಾವಣೆಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವುದಾಗಿ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಭರವಸೆ ನೀಡಿದರು.

ಪಟ್ಟಣದ ಬಂಗಾರಪ್ಪ ಬಡಾವಣೆ ನಿವಾಸಿಗಳು ಬೋರ್‌ವೆಲ್ ಕೊರೆಸುವಂತೆ ಪುರಸಭೆಗೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಮಂಗಳವಾರ ಬೋರ್‌ವೆಲ್ ಕೊರೆಸುವುದಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೈರಾಪುರ ಹಾಗೂ ಆಲಗೂಡು ಗ್ರಾಪಂಗಳನ್ನು ವಿಲೀನಗೊಳಿಸಿ, ಪುರಸಭೆಗೆ ಸೇರ್ಪಡೆಗೊಳಿಸಿದ ನಂತರ ಬಂಗಾರಪ್ಪ ಬಡಾವಣೆ ಅಭಿವೃದ್ಧಿಯಾಗಿಲ್ಲ. ಬಡಾವಣೆ ಅಭಿವೃದ್ಧಿಗೊಳಿಸುವಂತೆ ಸಿಎಂ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಗಿದೆ. ಮತ್ತೊಮ್ಮೆ ಎಂಎಲ್‌ಸಿ ಡಾ.ಯತೀಂದ್ರ ಅವರ ಗಮನಕ್ಕೆ ತಂದು ಅಗತ್ಯ ಮೂಲ ಸೌಕರ್ಯ ಕಲ್ಪಿಸುವುದಾಗಿ ತಿಳಿಸಿದರು.

ಬಡಾವಣೆಯಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರಿದ್ದು, ಸಿಎಂ ಸಿದ್ದರಾಮಯ್ಯನವರ ಅಧಿಕಾರವಧಿಯಲ್ಲೇ ಬಡಾವಣೆಯನ್ನು ಹೈಟೆಕ್ ಆಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಬಂಗಾರಪ್ಪ ಬಡಾವಣೆ ನನ್ನ 13ನೇ ವಾರ್ಡ್‌ಗೆ ಸೇರಿದ್ದು, ಸಂಪೂರ್ಣ ಸಕಾರಾತ್ಮಕವಾಗಿ ಸ್ಪಂದಿಸಿ ಪುರಸಭೆಯಿಂದ ಆಗಬೇಕಾದ ಕೆಲಸಗಳನ್ನು ಮಾಡಿಸಿಕೊಡುತ್ತೇನೆ ಎಂದರು.

ಈ ವೇಳೆ ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಕೆ.ಸಿ.ತ್ರಿವೇಣಿ, ಕಿರಿಯ ಅಭಿಯಂತರು ಕೆ.ಆರ್.ಚಂದ್ರಶೇಖರ್, ಗುತ್ತಿಗೆದಾರರ ಜಗದೀಶ್, ನಾಮ ನಿರ್ದೇಶಕ ಜೋಗಿ ನಾಗರಾಜ್, ಶ್ರೀಕಾಂತ್ ರಾಜ್ ಅರಸ್, ಪ್ರಶಾಂತ್ ಈಡಿಗರ್, ಕೃಷ್ಣಮೂರ್ತಿ, ಆಲಗೂಡು ರಾಜು, ಮಹಾದೇವ್, ನಾಗಣ್ಣ, ಕೃಷ್ಣಾಚಾರ್, ಮಹದೇವಯ್ಯ, ರಾಮಣ್ಣ, ಕೃಷ್ಣಶೆಟ್ಟಿ, ಕೃಷ್ಣ ನಾಯಕ್ ಉಪಸ್ಥಿತರಿದ್ದರು.

ಮಲ್ಲಣ್ಣ ನಿಧನ



ನಂಜನಗೂಡು, ಸೆ.30– ಹಿರಿಯ ದಲಿತ ಮುಖಂಡ ಹಾಗೂ ರಾಜಕೀಯ ಮುತ್ಸದಿ ದೇವರಸನಹಳ್ಳಿ ಗ್ರಾಮದ ನಿವಾಸಿ ಮಲ್ಲಣ್ಣ(75) ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ದೇವರಸನಹಳ್ಳಿಯ ಮೃತರ ತೋಟದಲ್ಲಿ ನೆರವೇರಿಸಲಾಯಿತು.

ಮೂರನೇ ಪುಟದಿಂದ

ನಾಳೆ ದಸರಾ ಜಂಬೂಸವಾರಿ



ಅರಮನೆ ಆವರಣದಲ್ಲಿ ಪ್ರೇಕ್ಷಕರ ಗ್ಯಾಲರಿ ನಿರ್ಮಾಣ.

ಪೊಲೀಸರು ಇತ್ತ ಗಮನಹರಿಸಲೇಬೇಕು

ಹೈವೇ ವೃತ್ತದಿಂದ ಅಂಬಾರಿ ಆನೆ ಸಾಗಿದ ಬಳಿಕ ಪಂಜಿನ ಕವಾಯತು ಮೈದಾನಕ್ಕೆ ಹೋಗುವವರನ್ನು ಹೈವೇ ವೃತ್ತದಿಂದ ಜೋಡಿ ತೆಂಗಿನಮರ ಸ್ಮಶಾನ ಮಾರ್ಗದಲ್ಲಿ ತೆರಳಲು ಅನುವು ಮಾಡಿಕೊಡಬಹುದಾಗಿದೆ. ಆದರೆ, ಜೋಡಿ ತೆಂಗಿನ ಮರದ ರಸ್ತೆಯಲ್ಲಿ ಹೈವೆ ವೃತ್ತದ ಜಂಕ್ಷನ್‌ವರೆಗೂ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಈ ಪರ್ಯಾಯ ವ್ಯವಸ್ಥೆಗೆ ಅಡ್ಡಿಯಾಗುತ್ತದೆ. ಪರಿಣಾಮ ನೆಲ್ಸನ್ ಮಂಡೇಲಾ ರಸ್ತೆಯಲ್ಲೇ ತೆರಳಬೇಕಾದ ಅನಿವಾರ್ಯತೆಯಿಂದ ವಿಪರೀತ ವಾಹನ ದಟ್ಟಣೆ ನಿರ್ಮಾಣವಾಗುತ್ತದೆ. ಆದ್ದರಿಂದ ಹೈವೇ ವೃತ್ತದಿಂದ ಇಂದಿರಾ ಕ್ಯಾಂಟೀನ್ ಜಂಕ್ಷನ್‌ವರೆಗೆ ಜೋಡಿ ತೆಂಗಿನ ಮರದ ಸ್ಮಶಾನ ರಸ್ತೆಯಲ್ಲಿ ವಾಹನ ನಿಲುಗಡೆಯನ್ನು ನಿರ್ಬಂಧಿಸಿದರೆ ಸುಗಮ ವಾಹನ ಸಂಚಾರ ನಿರ್ವಹಣೆಗೆ ಸಹಕಾರಿಯಾಗಲಿದೆ.

ಹೊಂದಿರುವವರಿಗೆ ಪ್ರತ್ಯೇಕ ಬ್ಲಾಕ್‌ಗಳಲ್ಲಿ ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ. ವಿವಿಧ ಗೇಟ್‌ಗಳಿಂದ ಅರಮನೆ ಆವರಣಕ್ಕೆ ಪ್ರವೇಶಿಸುವವರಿಗೆ ಗೊಂದಲವಾಗದಂತೆ ಪ್ರತ್ಯೇಕ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಜಂಬೂಸವಾರಿ ತೆರಳುವ ವೇಳೆ ಯಾರೂ ಮುಂದೆ ಹೋಗದಂತೆ ಎತ್ತರದ ತಾತ್ಕಾಲಿಕ ತಡೆಗೋಡೆ ನಿರ್ಮಿಸಲಾಗಿದೆ.

ಮಾರ್ಗದುದ್ದಕ್ಕೂ ಭದ್ರತೆ: ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಹಳೆ ಆರ್‌ಎಂಸಿ, ಬಂಬೂ ಬಜಾರ್ ವೃತ್ತ, ಹೈವೆ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ ಸೇರಿದಂತೆ ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಮೆರವಣಿಗೆ ಸಾಗುವ ವೇಳೆ ಯಾರೂ ರಸ್ತೆಗೆ ನುಸುಳದಂತೆ ಕ್ರಮ ವಹಿಸಲಾಗಿದೆ.

ಅಪಾರ ಜನಸ್ತೋಮದ ನಿರೀಕ್ಷೆ: ಜಂಬೂಸವಾರಿ ವೀಕ್ಷಣೆಗೆ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ಜನಸ್ತೋಮ ಹರಿದು ಬರುವ ಸಾಧ್ಯತೆ ಇದೆ. ಈ ಬಗ್ಗೆ ಪೊಲೀಸ್ ಗುಪ್ತಚರ ವಿಭಾಗದಿಂದ ಮಾಹಿತಿ ಬಂದಿರುವ ಹಿನ್ನೆಲೆಯಲ್ಲಿ ಜಂಬೂಸವಾರಿ ದಿನ ಜನಸಾಗರ ಸೇರುವ ನಿರೀಕ್ಷೆಯೊಂದಿಗೆ ಅಗತ್ಯ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ.

ಪೊಲೀಸರ ಸರ್ಪಗಾವಲು: ಜಂಬೂಸವಾರಿ ಮೆರವಣಿಗೆಗೆ ಈ ಬಾರಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಿಕೊಳ್ಳಲಾಗುತ್ತಿದೆ. ನಿನ್ನೆಯಷ್ಟೇ ಎರಡನೇ ಹಂತದ ಭದ್ರತೆಗೆ ವಿವಿಧೆಡೆಯಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿ ಆಗಮಿಸಿದ್ದಾರೆ. ಪೊಲೀಸರ ಸರ್ಪಗಾವಲಿನಲ್ಲಿ ನಡೆಯುವ ದಸರಾ ಜಂಬೂಸವಾರಿ ಮೆರವಣಿಗೆ ನೆರವೇರಲಿದೆ. ಜಂಬೂಸವಾರಿ ಮಾರ್ಗದುದ್ದಕ್ಕೂ ಹೆಜ್ಜೆ ಹೆಜ್ಜೆಗೂ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುತ್ತದೆ. ಅರಮನೆ ಹಾಗೂ ಬನ್ನಿಮಂಟಪ ಪಂಜಿನ ಕವಾಯತು ಮೈದಾನದ ಬಳಿ ಹಿಂದಿಗಿಂತ ಹೆಚ್ಚಿನ ಭದ್ರತೆಗೆ ಕ್ರಮ ವಹಿಸಲಾಗಿದೆ. ಜಂಬೂಸವಾರಿಗೆ ವಿಶೇಷವಾಗಿ ಕಮಾಂಡೋ ಪಡೆ ಸರ್ಪಗಾವಲಿರಲಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿ ಸುಮಾರು ಆರೂವರೆ ಸಾವಿರಕ್ಕೂ ಅಧಿಕ ಪೊಲೀಸರ ಭದ್ರತೆ ಕಲ್ಪಿಸಲಾಗುತ್ತಿದೆ. ಮಫ್ತಿಯಲ್ಲೂ ನೂರಾರು ಪೊಲೀಸರು ನಿಗಾ ಇಡಲಿದ್ದಾರೆ. ಮೆರವಣಿಗೆ ಸಾಗುವ ಮಾರ್ಗ, ವಿವಿಧ ವೃತ್ತ ಹಾಗೂ ಜನಸೇರುವ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ನಿರಂತರವಾಗಿ ದೃಶ್ಯಾವಳಿಯನ್ನು ವೀಕ್ಷಿಸಲಾಗುತ್ತಿದೆ. ಸೆ.22ರಂದು ಆರಂಭವಾದ ಪ್ರಸಕ್ತ ಸಾಲಿನ ನಾಡಹಬ್ಬ ದಸರಾ ಮಹೋತ್ಸವಕ್ಕೆ ಚಾಲನೆ ದೊರೆತು, ಅತ್ಯಾಕರ್ಷಕ ವಿದ್ಯುತ್ ದೀಪಾಲಂಕೃತ ನಗರದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಹಾರ ಮೇಳ, ಫಲಪುಷ್ಪ ಪ್ರದರ್ಶನ ಇನ್ನಿತರ ಕಾರ್ಯಕ್ರಮಕ್ಕೆ ಸಾವಿರಾರು ಮಂದಿ ಸಾಕ್ಷಿಯಾಗಿದ್ದಾರೆ.

ಇಲಾಖೆಯಿಂದ ಎಲ್ಲಾ ಎಚ್ಚರಿಕಾ ಕ್ರಮ

ಕಾಲ್ತುಳಿತ ದುರಂತಗಳು: 2025ರ ಜೂನ್ 4ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂ ಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಬಲಿಯಾದ ಘಟನೆ ಹಾಗೂ ತಮಿಳುನಾಡಿನ ಕರೂರಿನಲ್ಲಿ ನಡೆದ ರ‍್ಯಾಲಿಯಲ್ಲಿ 41 ಮಂದಿ ಸಾವನ್ನಪ್ಪಿದ ದುರಂತದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಡಳಿತವು ವಿಜಯದಶಮಿ ಮೆರವಣಿಗೆ ಯುದ್ದಕ್ಕೂ ಕಟ್ಟಡ ಮತ್ತು ಮರಗಳ ಮೇಲೇರಿ ಕೂರುವುದು, ನಿಲ್ಲುವುದನ್ನು ನಿಷೇಧಿಸಿದೆ. ಅಲ್ಲದೆ, ಯಾವುದೇ ಸಣ್ಣ–ಪುಟ್ಟ ಅಹಿತಕರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಈ ಹಿಂದೆ ದಸರಾ ಮೆರವಣಿಗೆ ವೀಕ್ಷಿಸಲು, ಜನರು ತಮ್ಮ ಪ್ರಾಣವನ್ನು ಲೆಕ್ಕಿಸದೇ ಅಪಾಯದ ಅಂಚಿನಲ್ಲಿರುವ ಮರಗಳು ಹಾಗೂ ಹಳೆಯ ಕಟ್ಟಡಗಳ ಮೇಲೇರುತ್ತಿದ್ದು ದನ್ನು ಈ ಬಾರಿ ಖಡಾ ಖಂಡಿತವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಿಳುವಳಿಕೆ ಫಲಕ: ಜಂಬೂಸವಾರಿ ಮಾರ್ಗದುದ್ದಕ್ಕೂ ಎರಡೂ ಬದಿಗಳಲ್ಲಿ ಎಚ್ಚರಿಕೆ ಫಲಕಗಳನ್ನು ಅಳವಡಿಸಲಾಗಿದೆ. 'ಕಟ್ಟಡಗಳು ಹಾಗೂ ಮರಗಳ ಮೇಲೆ ಸಾರ್ವಜನಿಕರು ಹತ್ತುವುದನ್ನು ನಿಷೇದಿಸಲಾಗಿದೆ' ಎಂಬ ನೂರಾರು ಫಲಕಗಳು ರಾರಾಜಿಸುತ್ತಿವೆ. ಅ.2ರಂದು ಪೊಲೀಸರು ಕಟ್ಟಡಗಳ ಮೇಲೆ ನಿರಂತರವಾಗಿ ನಿಗಾವಹಿಸಿ, ಛಾವಣಿಗಳ ಮೇಲೇರುವುದನ್ನು ತಡೆಯುತ್ತಾರೆ. ಅಲ್ಲದೇ ರಾಜಮಾರ್ಗದಲ್ಲಿ ಸಾಲುಗಟ್ಟಿ ನಿಲ್ಲುವ ಲಕ್ಷಾಂತರ ಪ್ರೇಕ್ಷಕರಿಗೆ ಸಮಯದ ಸೂಚನೆಗಳನ್ನು ತಿಳಿಸಲು ಧ್ವನಿವರ್ಧಕಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕರನ್ನು ಎಚ್ಚರಿಸಲು ಮಾರ್ಗದುದ್ದಕ್ಕೂ ನೂರಾರು ಸೈನ್‌ಬೋರ್ಡ್‌ಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಪೊಲೀಸರ ಕಟ್ಟುನಿಟ್ಟಿನ ಕ್ರಮ: ವಿಜಯದಶಮಿ ಮೆರವಣಿಗೆಯಂದು ರಾಜಮಾರ್ಗದಲ್ಲಿ ದುರ್ಬಲವಾಗಿರುವ ಹಾಗೂ ಶಿಥಿಲಾವಸ್ಥೆಯ ಮರಗಳು, ಕಟ್ಟಡಗಳು ಮತ್ತು ಜಾಹೀರಾತು ಫಲಕಗಳ ಮೇಲೇರುವುದನ್ನು ತಡೆಯಲು ಪೊಲೀಸ್ ಸಿಬ್ಬಂದಿ ನಿಯೋಜಿಸಿ ನಿಯಮ ಉಲ್ಲಂಘಿಸುವವರ ವಿರುದ್ಧ ತ್ವರಿತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಇಂತಹ ಶಿಥಿಲವಾದ ಕಟ್ಟಡಗಳ ಮಾಲೀಕರೊಂದಿಗೆ ಸಭೆ ನಡೆಸಿ, ಮೆರವಣಿಗೆ ದಿನ ಜನರು ಮೇಲೇರದಂತೆ ನಿಯಂತ್ರಿಸಲು ಕಟ್ಟಡಗಳನ್ನು ಸೀಲ್ ಮಾಡುವುದಾಗಿ ತಿಳಿಸಲಾಗಿದೆ. ಛಾವಣಿಗೆ ಪ್ರವೇಶಿಸುವ ಸ್ಥಳವನ್ನು ಬಂದ್ ಮಾಡಿ ಅಲ್ಲಿ ಪೊಲೀಸರನ್ನು ನಿಯೋಜಿಸಲಾಗುವುದು ಎಂದು ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಎಚ್ಚರಿಸಿದ್ದಾರೆ.

ಆಸ್ಪತ್ರೆಗಳಲ್ಲಿ ವಾರ್ಡ್ ಮೀಸಲು, ವೈದ್ಯಕೀಯ ಸೇವೆಗೆ ಸಿದ್ಧತೆ: ಜಂಬೂಸವಾರಿ ಮೆರವಣಿಗೆ ಹಿನ್ನೆಲೆಯಲ್ಲಿ ಎಂತಹ ತುರ್ತು ಪರಿಸ್ಥಿತಿಯನ್ನು ಎದುರಿಸಲು ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಜಿಲ್ಲಾಸ್ಪತ್ರೆ, ಜೆಎಸ್‌ಎಸ್ ಆಸ್ಪತ್ರೆ, ಕೆಆರ್‌ಎಸ್ ರಸ್ತೆಯ ಟ್ರಾಮಾ ಕೇರ್ ಸೆಂಟರ್, ರಾಜಮಾತೆ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ವಾರ್ಡ್‌ಗಳು, ವೈದ್ಯರು ಹಾಗೂ ಸಿಬ್ಬಂದಿಯನ್ನು ಮೀಸಲಿರಿಸುವಂತೆ ತಿಳುವಳಿಕೆ ನೀಡಲಾಗಿದೆ. ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಸೂಕ್ತ ಆರೋಗ್ಯ ಸೇವೆ ನೀಡುವುದಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ಡೈರೆಕ್ಟರ್ ಡಾ.ಕೆ.ಆರ್. ದಾಕ್ಷಾಯಣಿ ತಿಳಿಸಿದ್ದಾರೆ ಎಂದು ಸೀಮಾ ಲಾಟ್ಕರ್ ಹೇಳಿದ್ದಾರೆ.

ಜಂಬೂಸವಾರಿ ಮೆರವಣಿಗೆಗೆ ಪೊಲೀಸರ ಅತ್ಯುನ್ನತ ಭದ್ರತೆ

ಮೈಸೂರಿನಲ್ಲಿ ಇದೂವರೆಗೆ ನಡೆದ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆದಿಲ್ಲ. ಸಣ್ಣ ಪುಟ್ಟ ಅವ್ಯವಸ್ಥೆ ಬಿಟ್ಟರೆ ಜಂಬೂಸವಾರಿ ಮೆರವಣಿಗೆ ಸಾಂಗವಾಗಿ ಸಾಗಿದೆ. ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಶಾಂತಿಯುತವಾಗಿ ದಸರಾ ಕಾರ್ಯಕ್ರಮಗಳು ನೆರವೇರಿವೆ.

ಅದರಂತೆ ಈ ವರ್ಷ ಕೂಡ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಂಡಿದೆ. 6,384 ಸಿವಿಲ್ ಹಾಗೂ ಟ್ರಾಫಿಕ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಅಲ್ಲದೆ 35 ಕೆಎಸ್‌ಆರ್ ಪಿ ತುಕಡಿಗಳು, 15 ಸಿಎಆರ್ ಮತ್ತು ಡಿಎಆರ್ ತುಕಡಿಗಳು, 29 ಎಎಸ್‌ಸಿ (ಆರ್ಮಿ ಸರ್ವೀಸ್ ಕಾರ್ಪ್ ಟೀಂ), 1 ಗರುಡಾ ಫೋರ್ಸ್ ಹಾಗೂ 1,200 ಹೋಂ ಗಾರ್ಡ್‌ಗಳನ್ನು ಕೂಡ ನಿಯೋಜಿಸಲಾಗಿದೆ. ಐವರು ಎಸ್ಪಿ, 35 ಡಿವೈಎಸ್ಪಿ, 140 ಸಿವಿಲ್ ಇನ್ಸ್‌ಪೆಕ್ಟರ್ ಆಯಾ ಸ್ಥಳದಲ್ಲಿ ಭದ್ರತೆಯ ಉಸ್ತುವಾರಿ ವಹಿಸಲಿದ್ದಾರೆ. ಪೊಲೀಸ್ ಇಲಾಖೆಯಿಂದ 220 ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಅಲ್ಲದೆ ಖಾಸಗಿಯಾಗಿ ಮನೆ ಮತ್ತು ಕಚೇರಿಗಳಲ್ಲಿ ಅಳವಡಿಸಿರುವ 34,616 ಸಿಸಿಟಿವಿ ಕ್ಯಾಮರಾಗಳನ್ನು ಪೊಲೀಸ್ ಇಲಾಖೆಯ ಆ್ಯಪ್‌ಗೆ ಸಂಪರ್ಕ ಕಲ್ಪಿಸಿ ಸುತ್ತಲಿನ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಲಿದ್ದಾರೆ.

ಜಂಬೂ ಸವಾರಿ ಮೆರವಣಿಗೆಗೆ ಸಂಬಂಧಿಸಿದಂತೆ ಜನರು ಆತಂಕ ಹಾಗೂ ಗಾಸಿಪ್ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಬಾರದು. ಒಂದು ವೇಳೆ ಹಾಕಿದರೆ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಸಲಾಗಿದೆ. ಇದಕ್ಕಾಗಿ ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಾಯಿಸಲು ಪ್ರತ್ಯೇಕವಾಗಿ 53 ಪೊಲೀಸರ ತಂಡ ರಚನೆ ಮಾಡಲಾಗಿದೆ.

ಆಯುಧಪೂಜೆಗೆ ಭರ್ಜರಿ ತಯಾರಿ...



ಬುಧವಾರದ ಆಯುಧಪೂಜೆಗೆ ಅಗತ್ಯವಿರುವ ಕುಂಬಳಕಾಯಿ, ಹೂ ಇನ್ನಿತರ ಪೂಜಾ ಸಾಮಾಗ್ರಿಗಳ ಖರೀದಿ ಮಂಗಳವಾರ ಮೈಸೂರಲ್ಲಿ ಜೋರಾಗಿತ್ತು.

ಜಂಬೂ ಸವಾರಿ ಮೆರವಣಿಗೆ ಕ್ಷಣಗಣನೆ

ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ತರಾತುರಿ ಕಾಮಗಾರಿ



ಜಂಬೂಸವಾರಿ ಸಾಗುವ ಮಾರ್ಗದಲ್ಲಿ ತರಾತುರಿಯಲ್ಲಿ ಫಲಕಗಳ ಅಳವಡಿಕೆ, ಮರಗಳಲ್ಲಿರುವ ವಿದ್ಯುತ್ ವೈರ್‌ಗಳನ್ನು ಜೋಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಮೈಸೂರು, ಸೆ.30(ಬಿಎಲ್‌ಯು)– ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆ ಕ್ಷಣಗಣನೆ ಆರಂಭವಾಗಿದೆ. ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ಮೆರ ವಣಿಗೆ ಸಾಗುವ ರಾಜಮಾರ್ಗದಲ್ಲಿ ಈಗ ಸುಣ್ಣ ಬಣ್ಣ ಬಳಿಯುವುದು ಸೇರಿದಂತೆ ಇತರೆ ಕಾಮಗಾರಿಯನ್ನು ತರಾತುರಿಯಲ್ಲಿ ಮಾಡುತ್ತಿದ್ದಾರೆ.

ದಸರಾ ಆರಂಭಕ್ಕೆ ಮೊದಲು ಎಲ್ಲಾ ಕಾಮಗಾರಿಗಳು ಮುಗಿಯಬೇಕು. ಆದರೆ ಈಗ ದಸರಾ ಆರಂಭವಾಗಿ ಜಂಬೂಸವಾರಿ ಮೆರವಣಿಗೆ ಕೆಲವು ಗಂಟೆ ಇರುವಾಗಲೂ ಕಾಮಗಾರಿ ಮಾಡುತ್ತಲೆ ಇದ್ದಾರೆ. ಜಂಬೂಸವಾರಿ ಮೆರವಣಿಗೆ ಸಾಗುವ ಬಂಬೂಬಜಾರ್‌ನಲ್ಲಿ ಮೆಟ್ಟಿಲುಗಳಿಗೆ ಬಣ್ಣ ಬಳಿದು, ಗಿಡ–ಗಂಟೆಗಳನ್ನು ಈಗ ಕೀಳುತ್ತಿದ್ದಾರೆ. ಅಲ್ಲದೆ ಆಯುರ್ವೇದಿಕ್ ಆಸ್ಪತ್ರೆ ಬಳಿಯ ವೃತ್ತಕ್ಕೂ ಕೂಡ ಈಗ ಬಣ್ಣ ಬಳಿಯಲಾಗುತ್ತಿದೆ. ಮರಗಳಿಗೆ ಫಲಕಗಳನ್ನು ಅಳವಡಿಸುವುದು, ವಿದ್ಯುತ್ ವೈರ್‌ಗಳನ್ನು ಜೋಡಿಸುವ ಕಾರ್ಯ ಇನ್ನೂ ನಡೆಯುತ್ತಿದೆ.

ಕುಡಿಯುವ ನೀರಿನ ವ್ಯವಸ್ಥೆ

ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಗೆ ಕಾತುರರಾಗುವ ಜನರು ಗಂಟೆ ಗಟ್ಟಲೆ ಕಾಯುತ್ತಾರೆ. ಮಧ್ಯಾಹ್ನ ಮೆರವಣಿಗೆ ನಡೆದರೆ, ಬೆಳಗ್ಗಿನಿಂದಲೇ ಚಾಪೆ ಹಾಸಿ ಸ್ಥಳ ಕಾಯ್ದಿರಿಸಿಕೊಂಡಿರುತ್ತಾರೆ. ಈ ವೇಳೆ ಬಿಸಿಲಿನ ತಾಪಕ್ಕೆ ಬಸವಳಿದ ಜನರಿಗೆ ಕೆ.ಆರ್.ಆಸ್ಪತ್ರೆ ಬಳಿ ಪೆಂಡಾಲ್ ಹಾಕಿ ಕುಡಿಯುವ ನೀರು ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ.



ಸನ್ಮಾನ

ಮೈಸೂರಿನ ಮಂಜುನಾಥಪುರಂನಲ್ಲಿ ನವರಾತ್ರಿ ಉತ್ಸವಕ್ಕೆ ಆಗಮಿಸಿದ ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಬಡಾವಣೆಯ ಮುಖಂಡರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾಜಿ ನಗರಪಾಲಿಕೆ ಸದಸ್ಯ ಗುರುವಿನಾಯಕ್, ಮುಖಂಡರಾದ ಟೆನ್ನಿಸ್ ಗೋಪಿ, ಬಸಪ್ಪ, ರಾಮಣ್ಣ, ಗೋವಿಂದರಾಜು ಮುಂತಾದವರು ಉಪಸ್ಥಿತರಿದ್ದಾರೆ.

ನಟ ದರ್ಶನ್‌ಗೆ ಕನಿಷ್ಠ ಸೌಲಭ್ಯ ನಿರಾಕರಣೆ: ಅ. 9ಕ್ಕೆ ತೀರ್ಪು ಕಾಯ್ದಿರಿಸಿದ ಕೋರ್ಟ್

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮತ್ತೆ ಜೈಲು ಪಾಲಾಗಿರುವ ನಟ ದರ್ಶನ್ ಅವರು ಜೈಲಿನಲ್ಲಿ ತಮಗೆ ಕನಿಷ್ಠ ಸೌಲಭ್ಯ ನಿರಾಕರಿಸಲಾಗಿದೆ ಎಂದು ಆರೋಪಿಸಿ ಕೋರ್ಟ್ ಮೆಟ್ಟಿಲೇರಿದ್ದು, ಮಂಗಳವಾರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಅಕ್ಟೋಬರ್ 9ಕ್ಕೆ ತೀರ್ಪು ಕಾಯ್ದಿರಿಸಿದೆ.

ವಿಚಾರಣೆ ವೇಳೆ ಜೈಲು ಅಧಿಕಾರಿಗಳು 57ನೇ ಸೆಷನ್ಸ್ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದು, ಎರಡು ಕಡೆಯ ವಾದ ಪ್ರತಿವಾದ ಆಲಿಸಿದ ನ್ಯಾಯಾಧೀಶರು ಆದೇಶ ಕಾಯ್ದಿರಿಸಿದ್ದಾರೆ.

ರೋಚಕ ಕ್ಷಣಗಳಿಗೆ ಸಾಕ್ಷಿಯಾದ ದಸರಾ ಪೂರ್ವಾಭ್ಯಾಸದ ವೈಮಾನಿಕ ಪ್ರದರ್ಶನ

ಆಗಸದಲ್ಲಿ ಲಾಗ ಹಾಕಿದ ಲೋಹದ ಹಕ್ಕಿಗಳು

● ಭಾರತೀಯ ವಾಯುಸೇನೆಯ ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದ ವಿಮಾನಗಳ ಕರಾಮತ್ತು ● ಸಾರ್ವಜನಿಕರಿಲ್ಲದೆ ನಡೆದ ಪೂರ್ವಾಭ್ಯಾಸ ಪ್ರದರ್ಶನ


ವಜ್ರದ ಆಕಾರದ ವಿನ್ಯಾಸದಲ್ಲಿ ಹಾರಾಟ ನಡೆಸುತ್ತಿರುವ ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡದ ಎಲ್ಲಾ 9 ವಿಮಾನಗಳು.


ತ್ರಿವರ್ಣ ಹೊಗೆ ಚಿಮ್ಮಿಸುತ್ತಾ ಹಾರಾಡಿ ರಾಷ್ಟ್ರಾಭಿಮಾನ ಮೆರೆದ ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದ ವಿಮಾನಗಳು.

ಮೈಸೂರು,ಸೆ.30(ಪಿಎಂ)- ಆಗಸದಲ್ಲಿ ಲಾಗ ಹಾಕಿದ ಲೋಹದ ಹಕ್ಕಿಗಳು, ಒಂದರ ಮೇಲೆ ಒಂದರಂತೆ ಸುರುಳಿಯೊಡೆದು, ಶರವೇಗದಲ್ಲಿ ಮುನ್ನುಗ್ಗುವ ಸಾಹಸಮಯ ಪ್ರದರ್ಶನದೊಂದಿಗೆ ಉಗುಳುವ ಹೊಗೆ ಮಾದರಿಯಲ್ಲಿ ಚಿತ್ತಾರದ ಚಮತ್ಕಾರದೊಂದಿಗೆ ರೋಮಾಂಚನ ಕ್ಷಣಗಳಿಗೆ ಸಾಕ್ಷಿಯಾದವು.

ಮೈಸೂರು ದಸರಾದ ಪ್ರಯುಕ್ತ ಅ.1ರಂದು ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ವೈಮಾನಿಕ ಪ್ರದರ್ಶನ ಹಮ್ಮಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ಮಂಗಳವಾರ ಇದೇ ಮೈದಾನದಲ್ಲಿ ನಡೆದ ಪೂರ್ವಾಭ್ಯಾಸ ಪ್ರದರ್ಶನದಲ್ಲಿ ಇಂತಹ ರೋಚಕತೆ ಅನಾವರಣಗೊಂಡಿತು. ಸುಮಾರು 25 ನಿಮಿಷಗಳ ಕಾಲ ಭಾರತೀಯ ವಾಯು ಸೇನೆಯ ಸೂರ್ಯಕಿರಣ್ ಏರೋ ಬ್ಯಾಟಿಕ್ ತಂಡದ 9 ವಿಮಾನಗಳು ಬಾನಂಗಳದಲ್ಲಿ ಚಿತ್ರ-ವಿಚಿತ್ರವಾಗಿ ಹಾರಾಟ ನಡೆಸಿ ನೋಡುಗರು ಉಸಿರು ಬಿಗಿಹಿಡಿಯುವಂತೆ ಮಾಡಿದವು.

ಆಕಾಶದತ್ತ ಕಣ್ಣಾಡಿಸುತ್ತಾ ಕಾದು ಕುಳಿತಿದ್ದ ಪ್ರೇಕ್ಷಕರಿಗೆ ಬಿಳಿ ಪಟ್ಟೆ ಹೊಂದಿರುವ ಕೆಂಪು ಬಣ್ಣದ 9 ಯುದ್ಧ ವಿಮಾನಗಳು ಭಾರಿ ಸದ್ದಿನೊಂದಿಗೆ ಗೋಚರಿಸಿ ಸಂಚಲನ ಉಂಟು ಮಾಡಿದವು. ಮೈದಾನದ ಮುಖ್ಯದ್ವಾರದ ದಿಕ್ಕಿನಿಂದ ಹಾರಿ ಬಂದು ಶರವೇಗದಲ್ಲಿ ನೇರವಾಗಿ ಸಾಗಿ ಕಣ್ಮರೆಯಾಗುವಷ್ಟು ದೂರ ಹೋದವು. ಕೆಲವೇ ಕ್ಷಣಗಳಲ್ಲಿ ಮತ್ತೆ ಪ್ರತ್ಯಕ್ಷವಾದವು. ಆ ಮೂಲಕ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಅಭಿವೃದ್ಧಿಪಡಿಸಿದ ವಿಶ್ವದ ಅತ್ಯಂತ ಶಕ್ತಿಶಾಲಿ ಫೈಟರ್ ಏರ್‌ಕ್ರಾಫ್ಟ್‌ಗಳಲ್ಲಿ ಒಂದಾದ 'ತೇಜಸ್'ನ ಆಕಾರದಲ್ಲಿ ಹಾರಾಡಿದವು. ಗ್ರೂಪ್ ಕ್ಯಾಪ್ಟನ್ ಸಿದ್ಧೇಶ್ ಕಾರ್ತಿಕ್ ಮುಂದಾಳತ್ವದಲ್ಲಿ ಈ ಆಕಾರ ಮೂಡಿಬಂದಿತು. ಅಲ್ಲದೆ, ಚಂದ್ರಯಾನ 3ರ ಯಶಸ್ಸು ಸಂಕೇತಿಸುವಂತೆ ವಿನ್ಯಾಸ ಸಹ ರಚಿಸಲಾಯಿತು.

ಗ್ರೂಪ್ ಕ್ಯಾಪ್ಟನ್ ಅಜಯ್ ದಶರಥಿ ನೇತೃತ್ವದಲ್ಲಿ ನಡೆದ ಈ ಪ್ರದರ್ಶನದಲ್ಲಿ ಎರಡು ವಿಧದಲ್ಲಿ ವಜ್ರ ವಿನ್ಯಾಸ ಸಹ ಮೂಡಿಸಿ ಪ್ರೇಕ್ಷಕರಿಗೆ ಪುಳಕ ಉಂಟು ಮಾಡಲಾಯಿತು. ವಜ್ರದ ಆಕಾರದಂತೆ ವಿಮಾನಗಳು ಹಾರಾಟ ಮಾಡಿದಾಗ ಪ್ರೇಕ್ಷಕರು ಬೆಕ್ಕಸಬೆರಗಾದರು. ಬಳಿಕ ಇಂಗ್ಲಿಷ್‌ನ 'ವಿ' ಅಕ್ಷರದ ಆಕಾರದಲ್ಲಿ ವಿಮಾನಗಳು ಹಾರಾಡಿದವು. ಆ ಮೂಲಕ ಭಾರತೀಯ ಸೇನೆಯ ವಿಜಯದ ಸಂಕೇತ ವನ್ನು ಹೆಮ್ಮೆಯಿಂದ ಪ್ರದರ್ಶಿಸಲಾಯಿತು. ಮತ್ತೊಂದು ವಿನ್ಯಾಸದಲ್ಲಿ ಮತ್ತೆ ವಜ್ರದ ರಚನೆಯಲ್ಲಿ ವಿಮಾನಗಳು ಹಾರಾಡಿ ಬೆರಗು ಮೂಡಿಸಿದವು.

ತಂಡದ ಸಿಗ್ನೇಚರ್ ಸ್ಟಂಟ್ ರೋಚಕತೆ ಮೂಡಿಸಿತು. ವಿಮಾನಗಳು ವಿಭಿನ್ನ ದಿಕ್ಕುಗಳಲ್ಲಿ ಹಾರಾಡಿ ಅಂಬರವನ್ನೇ ಚುಂಬಿಸುವಂತೆ ಭಾಸವಾಗಿ ಬೆರಗು ಮೂಡಿಸಿದವು. ಸಿಂಕ್ರೋ ಸಾಹಸ ಪ್ರದರ್ಶನದಲ್ಲಿ ವಿಮಾನಗಳು ಆದಷ್ಟು ನೆಲದ ದಿಕ್ಕಿನತ್ತ ಹತ್ತಿರದಲ್ಲಿ ಹಾರಾಡಿ ಸಂಚಲನ ಉಂಟುಮಾಡಿದವು. ಅಲ್ಲದೆ, ಹಾರಾಡುತ್ತಲೇ ಎಲ್ಲವೂ ಒಟ್ಟಾಗಿ ಉರುಳಾಡುತ್ತಾ ಹಾರಾಟ ಮಾಡಿ ರೋಚಕ ದೃಶ್ಯಾವಳಿಯ ಚಿತ್ತಾರ ಬರೆದವು.

ಒಂದರ ಹಿಂದೆ ಒಂದು ಬಂದ ಐದು ವಿಮಾನಗಳು, ತ್ರಿವರ್ಣವನ್ನು ಹೊಗೆ ಮಾದರಿ ಸೂಸಿ ಆಗಸದಲ್ಲಿ ರಂಗೋಲಿ ಬರೆದು ದೇಶಾಭಿಮಾನ ಮೆರೆದವು. ನಂತರ ಏಕಕಾಲದಲ್ಲಿ ಸುರುಳಿಯಂತೆ ಪರಸ್ಪರ ಸುತ್ತಾಟದ ಹಾರಾಟ ನಡೆಸಿ ನೋಡುಗರ ಮನಕ್ಕೆ ಲಗ್ಗೆಯಿಟ್ಟವು. ಆಕಾಶದಲ್ಲಿ ತ್ರಿವರ್ಣ ಸೂಸಿ ಬಣ್ಣ ದೋಕುಳಿಯಾಡಿ ದೇಶಾಭಿಮಾನ ಮೆರೆದವು. ಈ ವೇಳೆ ಹಾಕ್ ಎಂಕೆ 132 ವಿಮಾನ ಆದಷ್ಟು ಹತ್ತಿರದಲ್ಲಿ ಪ್ರೇಕ್ಷಕರಿಗೆ ಗೋಚರಿಸಿತು. ಆ ಬಳಿಕ ವಿಮಾನಗಳು ವಿಭಿನ್ನ ದಿಕ್ಕುಗಳಲ್ಲಿ ಚದುರಿ ಹೋದವು.

ಎರಡು ವಿಮಾನಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹಾರುತ್ತಾ ಸಾಗಿ, ಮತ್ತೆ ಮುಖಾಮುಖಿಯಾಗಿ ಸಾಗಿ ಬಿಳಿ ಹೊಗೆ ಮಾದರಿಯನ್ನು ಸೂಸಿ ಹೃದಯದ ಸಂಕೇತದ ಚಿತ್ರ ಬಿಡಿಸಿ ಪ್ರೇಕ್ಷಕರಿಗೆ ಪ್ರೀತಿಯ ಚುಂಬನ ನೀಡಿದವು. ಮತ್ತೊಂದು ವಿಮಾನ ಬಾಣ ಚಿತ್ರಿಸಿ ಪುಳಕವಿಟ್ಟಿತು. ಪೈಲಟ್‌ಗಳು ಅತ್ಯಂತ ಶಿಸ್ತು ಮತ್ತು ಧೈರ್ಯಶಾಲಿಯಾಗಿ ಪ್ರದರ್ಶನ ನೀಡುವ ಮೂಲಕ ಆಗಸದಲ್ಲಿ ಚಿತ್ತಾರ ಮೂಡಿಸಿದರು. ಬೆಂಗಳೂರಿನ ಯಲಹಂಕ ವಾಯುನೆಲೆಯಿಂದ ಹಾರಿಬಂದು ಪ್ರದರ್ಶನದ ಬಳಿಕ ಮರಳಿದವು. ಮೈದಾನದಲ್ಲಿದ್ದ ವಿಂಗ್ ಕಮಾಂಡರ್ ತೇಜೇಶ್ವರ್ ಸಿಂಗ್, ಪೈಲಟ್‌ಗಳ ಸುರಕ್ಷತೆ ಬಗ್ಗೆ ನಿಗಾ ವಹಿಸಿದ್ದರು. ಪಕ್ಷಿಗಳು ವಿಮಾನ ಹಾರುವ ಸ್ಥಳದಿಂದ ದೂರವಿರುವಂತೆ ಮಾಡಲು ಪಟಾಕಿ ಸಿಡಿಸಲಾಯಿತು. ಆ ಮೂಲಕ ಯುದ್ಧ ವಿಮಾನಗಳ ಹಾರಾಟಕ್ಕೆ ಸುರಕ್ಷಿತ ಕ್ರಮ ವಹಿಸಲಾಯಿತು.

ಆಕರ್ಷಕ ನಿರೂಪಣೆ: ತಂಡದ ಫ್ಲೈಟ್ ಲೆಫ್ಟಿನೆಂಟ್ ಕನ್ವಾಲ್ ಸಂಧು, ಇಡೀ ಪ್ರದರ್ಶನ ನಿರೂಪಣೆ ಮಾಡಿ, ವಿಮಾನಗಳ ಹಾರಾಟದಲ್ಲಿ ಮೂಡುವ ವಿನ್ಯಾಸಗಳ ಬಗ್ಗೆ ಮಾಹಿತಿ ನೀಡಿದರು. ಮ್ಯೂಸಿಕ್ ಜೊತೆಗೆ ಇಂಗ್ಲಿಷ್‌ನಲ್ಲಿ ವಿವರಣೆ ನೀಡುತ್ತಿದ್ದ ಅವರು, 'ನಾನು ನಿಮಗೆ ಒಂದು ಪ್ರಶ್ನೆ ಕೇಳುತ್ತೇನೆ. ನೀವು ರೆಡಿ ಇದ್ದೀರಾ? ಸೂರ್ಯಕಿರಣ್ ಟೀಮ್ ಸ್ವಾಗತಿಸಲು' ಎಂದು ಕನ್ನಡದಲ್ಲೇ ಹೇಳಿದರು. ಹೀಗೆ ಆಗಾಗ್ಗೆ ಕನ್ನಡದಲ್ಲೂ ಮಾತನಾಡಿ ಗಮನ ಸೆಳೆದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಎಸ್. ಯುಕೇಶ್ ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಎಸ್‌ಪಿ ವಿಷ್ಣುವರ್ಧನ ಮತ್ತಿತರರ ಗಣ್ಯರು ಹಾಜರಿದ್ದರು.

ಇಂದು ಮುಖ್ಯ ಪ್ರದರ್ಶನ...

ಈ ಬಾರಿಯ ದಸರಾ ಪ್ರಯುಕ್ತದ ಪೂರ್ವಾಭ್ಯಾಸದ ವೈಮಾನಿಕ ಪ್ರದರ್ಶನವನ್ನು (ಏರ್ ಶೋ) ಇಂದಿಲ್ಲಿ ನೆರೆದ ಜನತೆ ಸಂಭ್ರಮಿಸಿದ್ದಾರೆಂಬ ಭರವಸೆ ಹೊಂದಿದ್ದೇವೆ. 9 ವಿಮಾನ ಹೊಂದಿರುವ ಏಷ್ಯಾದ ಏಕೈಕ ಏರೋಬ್ಯಾಟಿಕ್ ತಂಡ ನಮ್ಮದು. ನಾಳೆ (ಅ.1) ಇದೇ ಬನ್ನಿಮಂಟಪ ಮೈದಾನದಲ್ಲಿ ಮಧ್ಯಾಹ್ನ 3.30ಕ್ಕೆ ಅಂತಿಮ ಹಾಗೂ ಮುಖ್ಯ ಪ್ರದರ್ಶನ ನಡೆಯಲಿದೆ.

-ಫ್ಲೈಟ್ ಲೆಫ್ಟಿನೆಂಟ್ ಕನ್ವಲ್ ಸಂಧು, ಸೂರ್ಯಕಿರಣ್ ಏರೋಬ್ಯಾಟಿಕ್ ತಂಡ.

ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಇರಲಿಲ್ಲ ಪ್ರವೇಶಾವಕಾಶ...

ಅ.1ರಂದು ಇದೇ ಪಂಜಿನ ಕವಾಯತು ಮೈದಾನದಲ್ಲಿ ನಡೆಯುವ ವೈಮಾನಿಕ ಪ್ರದರ್ಶನ ವೀಕ್ಷಿಸಲು ಮೈದಾನದ ಒಳಾಂಗಣ ಪ್ರಾಂಗಣಕ್ಕೆ ಪಾಸ್‌ಗಳನ್ನು ಹೊಂದಿದವರಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಲಾಗುತ್ತದೆಯೆಂದು ಜಿಲ್ಲಾಡಳಿತ ಈಗಾಗಲೇ ಪ್ರಕಟಣೆಯಲ್ಲಿ ತಿಳಿಸಿದೆ. ಇನ್ನು ಇಂದು ನಡೆದ ಪೂರ್ವಾಭ್ಯಾಸ ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಪ್ರವೇಶಾವಕಾಶ ಕಲ್ಪಿಸಿರಲಿಲ್ಲ. ಭದ್ರತೆ ದೃಷ್ಟಿಯಿಂದ ಅಭ್ಯಾಸ ಪ್ರದರ್ಶನಕ್ಕೆ ಈ ರೀತಿ ಕ್ರಮ ವಹಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ. ಇಂದಿನ ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸದ ಹಿನ್ನೆಲೆಯಲ್ಲಿ ಮೈದಾನದಲ್ಲಿ ಸಂಭ್ರಮ, ಮುಗಿಲು ಮುಟ್ಟುವ ಹರ್ಷೋದ್ಗಾರ ಕಂಡುಬರಲಿಲ್ಲ. ಮೈದಾನದಲ್ಲಿದ್ದ ಗಣ್ಯರು ಸೇರಿದಂತೆ ಕೆಲವೇ ಜನರು ಸಂಭ್ರಮಪಡುವಂತಾಯಿತು. ಮೈದಾನದ ಗೇಟ್‌ಗಳಲ್ಲಿ ಸಾರ್ವಜನಿಕರು ಪ್ರವೇಶಕ್ಕಾಗಿ ಕಾದು ನಿಂತಿದ್ದ ದೃಶ್ಯ ಕಂಡು ಬಂದಿತು. ಮೈದಾನದ ಹೊರ ಭಾಗದಲ್ಲೂ ವಿಮಾನ ಹಾರಾಟ ಕಂಡು ಹಲವರು ಸಂಭ್ರಮಿಸಿದರು.

ಇಂದಿನ (ಅಕ್ಟೋಬರ್ 1) ದಸರಾ ಕಾರ್ಯಕ್ರಮಗಳು



ಪಂಜಿನ ಕವಾಯತು ಮೈದಾನ (ಬನ್ನಿಮಂಟಪ)



ಮ. 3.30 : ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದಿಂದ ಏರ್ ಶೋ



ರಾ. 8.00 : ಪಂಜಿನ ಕವಾಯತು ಪೂರ್ವಾಭ್ಯಾಸ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ

ಭೂಮಿಗೀತ, ರಂಗಾಯಣ

ರಾ. 7.00 : ರಂಗಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ನಿರಂತರ ಫೌಂಡೇಷನ್ ಕಲಾವಿದರಿಂದ ಜನ ಗಣ ಮನ ನಾಟಕ ಪ್ರದರ್ಶನ, ರಚನೆ : ದೇವಕಿ ಧರ್ಮಿಷ್ಠೆ, ಎಂ.ಎಂ.ಸುಗುಣ, ನಿರ್ದೇಶನ : ಎಂ.ಎಂ. ಸುಗುಣ

ವನರಂಗ, ರಂಗಾಯಣ

ಸಂ. 5.30 : ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ, ಲಂಬಾಡಿ, ಮಾತುರಿ, ತೆಲಂಗಾಣ; ಲಾವಣಿ, ಹೋಲಿ, ಮಹಾರಾಷ್ಟ್ರ; ಸಿದ್ದಿ ಧುಮಾಲ್, ಗುಜರಾತ್; ಸಂಬಲ್‌ಪುರಿ, ಒರಿಸ್ಸಾ; ತಿರುವತ್ತಿರಕಳಿ ಮತ್ತು ಒಪ್ಪಾನ, ಕೇರಳ; ಬಿಹು, ಗುಸಾನ್, ಅಸ್ಸಾಂ, ನೋರ್ತಾ ಮತ್ತು ಸೈತಾಮ್, ಮಧ್ಯಪ್ರದೇಶ; ರಥ್ವಾ, ಗುಜರಾತ್; ತಪ್ಪಾಟ್ಟಗುಳು, ಆಂಧ್ರಪ್ರದೇಶ, ಕರಗಂ, ಕಾವಾಡಿ, ತಪ್ಪಟ್ಟಮ್, ತಮಿಳುನಾಡು.

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9	: ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30	: ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9	: ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7	: ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7 ಮತ್ತು ರಾ.8,9	: ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ- ದಿನ 4 ಟ್ರಿಪ್),
ಬೆ. 10 ರಿಂದ 5	: ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8	: ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)
ಬೆ. 10 ರಿಂದ	: ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ.

ನಾಳಿನ (ಅಕ್ಟೋಬರ್ 2) ದಸರಾ ಕಾರ್ಯಕ್ರಮಗಳು



ಅರಮನೆ ಒಳಾವರಣ
ನಂದಿಧ್ವಜ ಪೂಜೆ (ಅರಮನೆ ಬಲರಾಮ ದ್ವಾರ)

ಮ. 1 ರಿಂದ 1.18 ರವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ

ವಿಜಯದಶಮಿ ಮೆರವಣಿಗೆ (ಅರಮನೆ ಒಳಾವರಣ)

ಸಂ. 4.42 ರಿಂದ 5.06 ರವರೆಗೆ ಸಲ್ಲುವ ಶುಭ ಕುಂಭ ಲಗ್ನದಲ್ಲಿ

ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ
ಘನ ಉಪಸ್ಥಿತರು : ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್,
ವಿಶೇಷ ಆಹ್ವಾನಿತರು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್
ಮುಖ್ಯ ಅತಿಥಿಗಳು :
ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ
ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ
ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ

ಬನ್ನಿಮಂಟಪ ಮೈದಾನ, ಸಂಜೆ 7 ಗಂಟೆಗೆ

ಪಂಜಿನ ಕವಾಯತು ಮೈದಾನ (ಟಾರ್ಚ್‌ಲೈಟ್ ಪರೇಡ್)



ಗೌರವ ವಂದನೆ ಸ್ವೀಕಾರ :
ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್
ಘನ ಉಪಸ್ಥಿತರು :
ಮುಖ್ಯಮಂತ್ರಿ ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್
ಮುಖ್ಯ ಅತಿಥಿಗಳು :
ಕೇಂದ್ರ ವಿತ್ತ ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್
ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕೆ ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ
ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ
ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ
ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಹಾಗೂ ಕಾರ್ಮಿಕ ರಾಜ್ಯ ಸಚಿವೆ ಕು. ಶೋಭಾ ಕರಂದ್ಲಾಜೆ
ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ
ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ
ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9	: ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30	: ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9	: ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7	: ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	: ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ- ದಿನ 4 ಟ್ರಿಪ್),
ಬೆ. 10 ರಿಂದ 5	: ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8	: ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)
ಬೆ. 10 ರಿಂದ	: ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ.
ಬೆ. 10 ರಿಂದ 10 ರವರೆಗೆ	: ದಸರಾ ವಸ್ತುಪ್ರದರ್ಶನ.

ಜಂಬೂಸವಾರಿಗೆ ಆಗಮಿಸುವ ಸಿಎಂ, ಡಿಸಿಎಂಗೆ ವಿಶೇಷ ಉಡುಗೊರೆ


ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಿಗಾಗಿ ವಿಶೇಷ ಉಡುಗೊರೆ ಸಿದ್ಧಗೊಂಡಿದೆ.

ಮೈಸೂರು, ಸೆ.30(ಜಿಎ)-ವಿಶ್ವವಿಖ್ಯಾತ ಜಂಬೂಸವಾರಿಗೆ ಆಗಮಿಸುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಗೆ ವಿಶೇಷ ಉಡುಗೊರೆ ಸಿದ್ಧವಾಗಿದೆ.

ಪ್ರತಿ ವರ್ಷದಂತೆ ನಂದಿಧ್ವಜ ತಂಡದಿಂದ ವಿಶೇಷ ಉಡುಗೊರೆಯನ್ನು ನೀಡಲು ಮುಂದಾಗಿದ್ದು, ಈ ಬಾರಿ ಮುಖ್ಯಮಂತ್ರಿಗಳಿಗೆ ಅವರ ಮನೆದೇವರಾದ ಸಿದ್ದರಾಮೇಶ್ವರ, ಉಪಮುಖ್ಯಮಂತ್ರಿಗಳಿಗೆ ಕಾಂಕೇರಮ್ಮ ವಿಗ್ರಹವನ್ನು ಉಡುಗೊರೆ ನೀಡಲು ವಿಶೇಷವಾಗಿ ಸಿದ್ಧಪಡಿಸಿದ್ದಾರೆ.


ಮೈಸೂರಿನ ಗೌರಿಶಂಕರನಗರದ ಶಿಲ್ಪಿ ಯೋಗೇಶ್ ಅವರ ಪುತ್ರ ಶಿಲ್ಪಿ ರಾಜೇಶ್ ಕಳೆದ ಹಲವಾರು ವರ್ಷಗಳಿಂದ ನಂದಿಧ್ವಜ ಪೂಜೆ ಸಲ್ಲಿಸುವ ಎಲ್ಲಾ ಮುಖ್ಯಮಂತ್ರಿಗಳಿಗೂ ಕೆತ್ತನೆ ಮಾಡಿದ ಉಡುಗೊರೆಗಳನ್ನು ನೀಡುತ್ತಿದ್ದು, ಅದನ್ನು ವಾಡಿಕೆ ಮಾಡಿಕೊಂಡಿದ್ದಾರೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಗೆ ಮೊದಲ ಬಾರಿ ಅವರ ಮನೆದೇವರ ವಿಗ್ರಹವನ್ನು ನೀಡುವ ಮೂಲಕ ಉಡುಗೊರೆ ನೀಡುವ ಕಾರ್ಯವನ್ನು ಆರಂಭಿಸಿದ್ದಾರೆ.

ಈ ಬಾರಿ ಪಂಚಲೋಹದಿಂದ ಸಿದ್ದರಾಮೇಶ್ವರ, ಕಾಂಕೇರಮ್ಮ ವಿಗ್ರಹಗಳನ್ನು ಕೆತ್ತನೆ ಮಾಡಿದ್ದು, 15 ಇಂಚು ಎತ್ತರ, 10 ಇಂಚು ಅಗಲವಿದೆ. ಎರಡು ವಿಗ್ರಹಗಳು 6 ಇಂಚು ಇದ್ದು, ಅದ್ಭುತವಾದ ಮಂಟಪವನ್ನು ಒಳಗೊಂಡಂತೆ ಸುಮಾರು 4.5 ಕೆಜಿ ತೂಕ ಹೊಂದಿದೆ.

ಸ್ವಇಚ್ಛೆಯಿಂದ ನಾನು ಉಡುಗೊರೆ ನೀಡುತ್ತಿದ್ದು, ಎಲ್ಲಾ ಮುಖ್ಯಮಂತ್ರಿಗಳು ಉಡುಗೊರೆ ಪಡೆದುಕೊಂಡು ಸಂತಸ ವ್ಯಕ್ತಪಡಿಸಿದ್ದಾರೆ. ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನ್ಯಾಯ ದೇವತೆ ನೀಡಲಾಗಿತ್ತು. ಅದನ್ನು ಅವರು ಮನೆಯಲ್ಲಿ ಇಟ್ಟಿದ್ದಾರೆ. ಮಾಧ್ಯಮಗಳ ಸಂದರ್ಶನ ಪ್ರಸಾರವಾಗುವ ಸಂದರ್ಭದಲ್ಲಿ ಅದನ್ನು ನೋಡಿ ನನಗೆ ತೃಪ್ತಿಯಾಗಿದೆ ಎಂದು ಶಿಲ್ಪಿ ರಾಜೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ಅರಮನೆಯಲ್ಲಿ ಇಂದು ಆಯುಧ ಪೂಜೆ

ಸಾಂಪ್ರದಾಯಿಕ ಪೂಜಾ ಕಾರ್ಯಕ್ರಮದಲ್ಲಿ ರಾಜವಂಶಸ್ಥ ಯದುವೀರ್ ಭಾಗಿ


ಸಾಂದರ್ಭಿಕ ಚಿತ್ರ

ಮೈಸೂರು, ಸೆ30(ಎಂಟಿವೈ)- ಮೈಸೂರು ಅರಮನೆಯಲ್ಲಿ ಬುಧವಾರ(ಅ.1) ಮುಂಜಾನೆಯಿಂದ ಆಯುಧ ಪೂಜೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯ ಜರುಗಲಿದ್ದು, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಈ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ.

ಆಯುಧ ಪೂಜೆ ದಿನವಾದ ಬುಧವಾರ(ಅ.1ರಂದು) ಬೆಳಗ್ಗೆ 6ಕ್ಕೆ ಅರಮನೆ ಒಳಾಂಗಣದಲ್ಲಿ ಚಂಡಿ ಹೋಮ ಆರಂಭವಾಗಲಿದ್ದು, ಬೆಳಗ್ಗೆ 7.30ರಿಂದ 7.42ರವರೆಗೆ ಪಟ್ಟದ ಕತ್ತಿ ಸೇರಿದಂತೆ ಖಾಸ ಆಯುಧಗಳನ್ನು ಅರಮನೆಯ ಆನೆ ಬಾಗಿಲಿನ ಮೂಲಕ ಪಟ್ಟದ ಆನೆ, ಹಸು, ಕುದುರೆ, ಒಂಟೆಗಳೊಂದಿಗೆ ಕೋಡಿ ಸೋಮೇಶ್ವರ ದೇವಾಲಯಕ್ಕೆ ಕಳುಹಿಸಿಕೊಡಲಾಗುತ್ತದೆ. ನಂತರ ಬೆಳಗ್ಗೆ 8ರಿಂದ 8.40ರೊಳಗೆ ಪಟ್ಟದ ಕತ್ತಿ ಹಾಗೂ ಖಾಸ ಆಯುಧಗಳನ್ನು ಕೋಡಿ ಸೋಮೇಶ್ವರ ದೇವಾಲಯದಿಂದ ಆನೆ ಬಾಗಿಲು ಮೂಲಕ ಕಲ್ಯಾಣ ಮಂಟಪಕ್ಕೆ ತರಲಾಗುತ್ತದೆ. 9.15ಕ್ಕೆ ಚಂಡಿ ಹೋಮದ ಪೂರ್ಣಾಹುತಿ ನೆರವೇರಲಿದೆ.

ಬೆಳಗ್ಗೆ 10.30ಕ್ಕೆ ಆನೆ ಬಾಗಿಲಿಗೆ ಆನೆ, ಕುದುರೆ, ಹಸು ಕರೆತಂದ ಬಳಿಕ ಕಲ್ಯಾಣ ಮಂಟಪದಲ್ಲಿ ಆಯುಧ ಪೂಜಾ ಕಾರ್ಯ ಆರಂಭವಾಗಲಿದೆ. ಪಟ್ಟದ ಕತ್ತಿ ಸೇರಿದಂತೆ ರಾಜರು ಬಳಸುತ್ತಿದ್ದ ಮುಖ್ಯವಾದ ವಿವಿಧ ಆಯುಧಗಳಿಗೆ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಸವಾರಿ ಆಗಮಿಸಿ ಪಟ್ಟದ ಕುದುರೆ, ಪಟ್ಟದ ಆನೆ, ಪಟ್ಟದ ಹಸು, ಛತ್ರಿ, ಲಾಂಛನ, ಚಿನ್ನದ ಪಲ್ಲಕ್ಕಿಗೆ ಪೂಜೆ ಮಾಡಿದ ನಂತರ ನಿಶಾನೆ, ಅರಮನೆ ಆನೆಗಳಾದ ಪ್ರೀತಿ, ಚಂಚಲ್‌ಗೂ ಪೂಜೆ ಸಲ್ಲಿಸಲಿದ್ದಾರೆ. ನಂತರ ರಾಜರು ಬಳಸುವ ಖಾಸಗಿ ವಾಹನಗಳಿಗೆ ಪೂಜೆ ಸಲ್ಲಿಸಿದ ಬಳಿಕ ಸಂಸ್ಥಾನದ ಗೀತೆ ಕಾಯೋ ಶ್ರೀಗೌರಿ ಗೀತೆಯೊಂದಿಗೆ ಈ ಸಾಲಿನ ಆಯುಧ ಪೂಜಾ ಕಾರ್ಯಕ್ರಮ ಮುಕ್ತಾಯಗೊಳ್ಳಲಿದೆ.

ನಂತರ ಸಂಜೆ 7 ಗಂಟೆಗೆ ಖಾಸಗಿ ದರ್ಬಾರ್ ಮುಗಿದ ನಂತರ ಸಿಂಹ ವಿಸರ್ಜನೆ ಮಾಡಲಾಗುತ್ತದೆ ಬಳಿಕ ಯದುವೀರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರ ಕಂಕಣವನ್ನು ದೇವರ ಮನೆಯಲ್ಲಿ ವಿಸರ್ಜಿಸಿ, ಅಮಲು ದೇವತೆ ಅಮ್ಮನವರ ದರ್ಶನ ಮಾಡಿದ ಬಳಿಕ ದಪ್ತರ್ ಪೂಜೆ ನೆರವೇರಿದ ನಂತರ ಈ ವರ್ಷದ ಖಾಸಗಿ ದರ್ಬಾರ್‌ಗೆ ತೆರೆ ಬೀಳಲಿದೆ.

ಅ.2ರಂದು ಬೆಳಗ್ಗೆ 10ಗಂಟೆಗೆ ವಿಜಯದಶಮಿ ಪೂಜೆ ಆರಂಭವಾಗಲಿದೆ. ಪಟ್ಟದ ಆನೆಗಳು ಬಂದ ಬಳಿಕ ಉತ್ತರ ಪೂಜೆ ನೆರವೇರಲಿದೆ. ಬಳಿಕ ಸವಾರಿ ತೊಟ್ಟಿಯಲ್ಲಿ ವಜ್ರಮುಷ್ಠಿ ಕಾಳಗಕ್ಕೆ ಚಾಲನೆ ದೊರೆಯಲಿದೆ. ಮೈಸೂರು-ಬೆಂಗಳೂರು, ಚನ್ನಪಟ್ಟಣ-ಚಾಮರಾಜನಗರದ ಜಟ್ಟಿಗಳ ನಡುವೆ ಮುಖಾಮುಖಿ ಏರ್ಪಡಲಿದೆ. ಈ ಕಾಳಗ ಮುಗಿದ ನಂತರ ಬೆಳಗ್ಗೆ 10.50 ರಿಂದ 11.10ರೊಳಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಭುವನೇಶ್ವರಿ ದೇವಾಲಯಕ್ಕೆ ವಿಜಯಯಾತ್ರೆ ತೆರಳಿ, ಅಲ್ಲಿ ಶಮಿ(ಬನ್ನಿ) ಪೂಜೆ ನೆರವೇರಿಸಲಿದ್ದಾರೆ. ಬಳಿಕ ಅರಮನೆಗೆ ವಾಪಸ್ಸಾಗಲಿದ್ದಾರೆ. ಅಂತಿಮವಾಗಿ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಕನ್ನಡಿ ತೊಟ್ಟಿಯಿಂದ ಚಾಮುಂಡಿ ತೊಟ್ಟಿಗೆ ಬಿಜಯಂಗೈಯ್ಯಲಾಗುತ್ತದೆ ಈ ಎಲ್ಲಾ ಪೂಜಾ ಕಾರ್ಯ ಮುಗಿದ ನಂತರ ಜಂಬೂಸವಾರಿ ಮೆರವಣಿಗೆಯ ಪ್ರಕ್ರಿಯೆ ಆರಂಭವಾಗಲಿದೆ.

ನಾಳೆ ಚಾಮುಂಡಿಬೆಟ್ಟದಿಂದ ಅರಮನೆಗೆ ಚಾಮುಂಡೇಶ್ವರಿ ಉತ್ಸವ ಮೂರ್ತಿ ಮೆರವಣಿಗೆ

ಮೈಸೂರು, ಸೆ.30(ಎಂಟಿವೈ)- ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲು ಚಾಮುಂಡೇಶ್ವರಿ ದೇವಾಲಯದಲ್ಲಿ ಪೂಜಿಸಲಾಗುತ್ತಿರುವ ಅಷ್ಟಭುಜವುಳ್ಳ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಅ.2ರಂದು ಬೆಳಗ್ಗೆ ಮೆರವಣಿಗೆಯಲ್ಲಿ ಅರಮನೆಗೆ ತರಲಾಗುತ್ತದೆ.

ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅರಮನೆಯಿಂದ ಚಾಮುಂಡಿಬೆಟ್ಟಕ್ಕೆ ಕೊಂಡೊಯ್ದು ಶಾಸ್ತ್ರೋಕ್ತವಾಗಿ ನವರಾತ್ರಿ ವೇಳೆ ಪೂಜೆ ಸಲ್ಲಿಸಲಾಗುತ್ತಿರುವ ಸಿಂಹವಾಹಿನಿ, ಅಷ್ಟ ಭುಜವುಳ್ಳ ವಿಶಿಷ್ಟ ಚಾಮುಂಡೇಶ್ವರಿ ಮೂರ್ತಿಯನ್ನು ಜಂಬೂಸವಾರಿ ದಿನ ಬೆಳಗ್ಗೆ ಅರಮನೆಗೆ ತರುವ ಪದ್ಧತಿ ರೂಢಿಯಲ್ಲಿದೆ ಈ ಹಿನ್ನೆಲೆಯಲ್ಲಿ ಅ.2ರಂದು ಬೆಳಗ್ಗೆ 8.30ಕ್ಕೆ ಚಾಮುಂಡಿಬೆಟ್ಟದಿಂದ ತೆರೆದ ವಾಹನದಲ್ಲಿ ಬಿಗಿ ಭದ್ರತೆಯಲ್ಲಿ ತಾವರೆಕಟ್ಟೆ, ಕುರುಬಾರಹಳ್ಳಿ, ಲಲಿತಮಹಲ್ ರಸ್ತೆ, ಇಟ್ಟಿಗೆಗೂಡು ರಸ್ತೆ ಮೂಲಕ ಮೆರವಣಿಗೆಯಲ್ಲಿ ಜಯಮಾರ್ತಾಂಡ ದ್ವಾರದ ಮೂಲಕ ಅರಮನೆಗೆ ತರಲಾಗುತ್ತದೆ.

ಚಿನ್ನದ ಅಂಬಾರಿಯೊಳಗೆ ನಾಡದೇವಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ಅಂಬಾರಿಗೆ ಪುಷ್ಪಾಲಂಕಾರ ಮಾಡಲಾಗುತ್ತದೆ. ಆ ನಂತರ ಸಂಜೆ 2.30ರಿಂದ 3 ಗಂಟೆಯೊಳಗೆ ಕ್ಯಾಪ್ಟನ್ ಅಭಿಮನ್ಯು ಮೇಲೆ ಅಂಬಾರಿ ಕಟ್ಟಲಾಗುತ್ತದೆ. ಸಂಜೆ 4.42ರಿಂದ 5.06ರೊಳಗೆ ಸಲ್ಲುವ ಕುಂಭ ಲಗ್ನ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡಲಾಗುತ್ತದೆ. ಬಳಿಕ ಜಂಬೂ ಸವಾರಿ ಮೆರವಣಿಗೆ ಸಾಗಲಿದೆ.